ಸಂಪುಟ : 13 Volume | ಸಂಚಿಕೆ : 190 Issue | ಪುಟಗಳು : 08 Pages | ಬುಧುವಾರ 10 ಸೆಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ
ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಬೆಳಗು
' ಯಾರನ್ನೇ ಆದರೂ ಪರೀಕ್ಷಿಸದೇ ನಂಬಬಾರದು , ನಂಬದ ಮೇಲೆ ಪರೀಕ್ಷಿಸಬಾರದು'
– ತಿರುವಳ್ಳವರ್.

ಸಂಪಾದಕರು: ರಮೇಶ ರೆಡ್ಡಿ

ಡೆಂಟಲ್ ಚೆಕ್‌ಅಪ್ ಕ್ಯಾಂಪ್ 2 | ಪುನರ್ವಸತಿ ಕಲ್ಪಿಸಲು ಸಮೀಕ್ಷೆ 4 | ಜನರ ಸಮಸ್ಯೆ ಆಲಿಸಿದ ರಹೀಂ ಖಾನ್ 8

# ನೂತನ ಉಪ ರಾಷ್ಟ್ರಪತಿಯಾಗಿ ಸಿ.ಪಿ ರಾಧಾಕೃಷ್ಣನ್ ಆಯ್ಕೆ

ನವದೆಹಲಿ:ಸೆ.9:ಉಪರಾಷ್ಟ್ರಪತಿಹುದ್ದೆಗೆ ನಡೆದಚುನಾವಣೆಯಲ್ಲಿಂದುಎನ್‌ಡಿಎಅಭ್ಯರ್ಥಿ ಗೆಲುವುಸಾಧಿಸಿದ್ದು,ನೂತನಉಪರಾಷ್ಟ್ರಪತಿ ಸಿ.ಪಿರಾಧಾಕೃಷ್ಣನ್ ಆಯ್ಕೆಯಾಗಿದ್ದಾರೆಎಂದು ಚುನಾವಣಾಧಿಕಾರಿಪಿ.ಸಿ.ಮೋದಿಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.ಜಗದೀಪ್ ಧನ್ಕರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪರಾಷ್ಟ್ರಪತಿಸ್ಥಾನಕ್ಕೆನಡೆದಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆಯುವ ಮೂಲಕ ಸಿ.ಪಿ ರಾಧಾಕೃಷ್ಣನ್ ಗೆಲುವು ಸಾಧಿಸಿದರು. ರಾಧಾಕೃಷ್ಣನ್‌ಅವರು452ಮೊದಲಪ್ರಾಶಸ್ತ್ಯದ ಮತಗಳನ್ನ ಪಡೆದು ಗೆಲುವು ಸಾಧಿಸಿದರೆ, ಪ್ರತಿಸ್ಪರ್ಧಿಸುದರ್ಶನರೆಡ್ಡಿಅವರು300ಮತಗಳನ್ನು ಪಡೆದುಪರಾಭವಗೊಂಡರು.ಉಪರಾಷ್ಟ್ರಪತಿಆಯ್ಕೆಗೆಇಂದುಬೆಳಗ್ಗೆ10ಗಂಟೆಯಿಂದ ಸಂಜೆ 5 ಗಂಟೆವರೆಗೆ ಮತದಾನ ಪ್ರಕ್ರಿಯೆ ನಡೆದಿತ್ತು. ಪ್ರಧಾನಿ ನರೇಂದ್ರ ಮೋದಿ ಮೊದಲು ಮತ ಚಲಾಯಿಸಿದ್ದರು. ಬಳಿಕ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಅಮಿತ್ ಶಾ ಸೇರಿದಂತೆ ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರು ತಮ್ಮ ಹಕ್ಕು ಚಲಾಯಿಸಿದ್ದರು.ಸಂಸತ್ತಿನಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಸೇರಿದಂತೆಒಟ್ಟು788ಸಂಸದರಿದ್ದಾರೆ.ಪ್ರಸ್ತುತಎರಡೂಸದನಗಳಲ್ಲಿ7ಸ್ಥಾನಗಳುಖಾಲಿ ಇರುವಕಾರಣಒಟ್ಟು781ಸಂಸದರುಮತಚಲಾಯಿಸಬೇಕಾಗಿತ್ತು.ಆದರೆಇದರಲ್ಲಿ ಬಿಆರ್‌ಎಸ್‌ನ 4, ಬಿಜೆಡಿಯ 7, ಅಕಾಲಿ ದಳದ 3 ಮತ್ತು ಓರ್ವ ಸ್ವತಂತ್ರ ಸಂಸದರು ಮತದಾನದಿಂದದೂರಉಳಿದಿದ್ದರು.ಹೀಗಾಗಿ ಒಟ್ಟು767 ಸಂಸದರು ತಮ್ಮ ಮತದಾನದ ಹಕ್ಕನ್ನುಚಲಾಯಿಸಿದರುಇದರಲ್ಲಿ15ಮತಗಳನ್ನು ಅಮಾನ್ಯವೆಂದುಘೋಷಿಸಲಾಯಿತು.752 ಮತಗಳನ್ನುಮಾತ್ರವೇಮಾನ್ಯಮಾಡಿಮತಎಣಿಕೆಗೆಪರಿಗಣಿಸಲಾಯಿತು.ಜಗದೀಪ್ ಧನ್ಕರ್‌ಅವರುಆರೋಗ್ಯಕಾರಣಗಳನ್ನುನೀಡಿಕಳೆದಜುಲೈ21ರಂದುಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ್ದರು.ತಮಿಳುನಾಡಿನ ಹಿರಿಯ ಬಿಜೆಪಿ ನಾಯಕ ಮತ್ತು ಎರಡು ಬಾರಿ ಲೋಕಸಭಾ ಸಂಸದರಾಗಿದ್ದ ರಾಧಾಕೃಷ್ಣನ್ ಅವರು ಈಗ ದೇಶದ 15ನೇ ಉಪರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಉಪ ರಾಷ್ಟ್ರಪತಿಗಳು ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರೂ ಆಗಿರುತ್ತಾರೆ.ಅಕ್ಟೋಬರ್ 20, 1957 ರಂದು ತಮಿಳುನಾಡಿನ ಕೊಂಗು ಪ್ರದೇಶದ ತಿರುಪ್ಪೂರಿನಲ್ಲಿ ಜನಿಸಿದ ರಾಧಾಕೃಷ್ಣನ್ ಅವರು, 17ನೇವಯಸ್ಸಿನಲ್ಲಿಯೇರಾಷ್ಟ್ರೀಯಸ್ವಯಂಸೇವಕಸಂಘ(ಆರ್‌ಎಸ್‌ಎಸ್)ಸೇರಿದರು. ನಂತರಅವರುಭಾರತೀಯಜನತಾಪಕ್ಷ(ಬಿಜೆಪಿ)ಕಾರ್ಯಕರ್ತರಾಗಿ,ತಮಿಳುನಾಡಿನ ಬಿಜೆಪಿ ಅಧ್ಯಕ್ಷರಾಗಿ, ಎರಡು ಬಾರಿ ಸಂಸದರಾಗಿ, ಆನಂತರ ಜಾರ್ಖಂಡ್ ಸೇರಿದಂತೆ ಅನೇಕ ರಾಜ್ಯಗಳ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

## 25 ಸಂಸದರಿಂದ ಅಡ್ಡ ಮತದಾನ



ಉಪರಾಷ್ಟ್ರಪತಿಹುದ್ದೆಚುನಾವಣೆಯಲ್ಲಿ ಗೆಲುವುಸಾಧಿಸಿರುವಸಿ.ಪಿರಾಧಾಕೃಷ್ಣನ್, ಒಟ್ಟು452ಮೊದಲಪ್ರಾಶಸ್ತ್ಯದಮತಗಳನ್ನ ಪಡೆದು ಗೆಲುವು ಸಾಧಿಸಿದ್ರೆ, 300 ಮತಗಳನ್ನುಪಡೆದಿರುವಸುದರ್ಶನ್‌ರೆಡ್ಡಿ ಪರಾಭಗೊಂಡಿದ್ದಾರೆ.ಎನ್‌ಡಿಎಅಭ್ಯರ್ಥಿಗಳ ಸ್ವಂತಸಂಸದರನ್ನುಹೊರತುಪಡಿಸಿಇನ್ನೂ 25ಸಂಸದರುಅಡ್ಡಮತದಾನನಡೆಸಿದ್ದು, ರಾಧಾಕೃಷ್ಣನ್‌ಪರಮತಚಲಾಯಿಸಿದ್ದಾರೆ.



## ನಟ ದರ್ಶನ್ ವರ್ಗಾವಣೆಗೆ ನಕಾರ: ಐಜಿಪಿಗೆ ಅಧಿಕಾರ ನೀಡಿದ ಕೋರ್ಟ್

ಬೆಂಗಳೂರು, ಸೆ.9– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರದಲ್ಲಿರುವ ನಟ ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ವರ್ಗಾವಣೆ ಮಾಡಲು 64 ನೇ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ನಿರಾಕರಿಸಿದೆ. ಜೈಲಿನಲ್ಲಿ ಅನುಚಿತ ವರ್ತನೆ ತೋರಿದರೆ ವರ್ಗಾವಣೆ ಮಾಡಲು ಐಜಿಪಿಗೆ ಅಧಿಕಾರ ನೀಡಿದೆ.ತೀರ್ಪಿಗೂ ಮುನ್ನ ವಿಚಾರಣೆ ವೇಳೆ ನಾನು ಬಿಸಿಲು ನೋಡಿ 30 ದಿನಗಳಾಗಿವೆ. ಕೈ ಮೇಲೆ ಫಂಗಸ್ ಬಂದಿದೆ.ಬೇರೆ ಯಾರಿಗೂ ವಿಷ ಕೊಡಿ ಎಂದು



ನ್ಯಾಯಾಧೀಶರ ಮುಂದೆ ಅಲವತ್ತುಕೊಂಡಿದ್ದ ದರ್ಶನ್ ನಿರಾಳರಾದಂತಾಗಿದೆ.ನಟ ದರ್ಶನ್ ಸೇರಿ ಇನ್ನಿತರ ಆರೋಪಿಗಳನ್ನ ರಾಜ್ಯದ ಇತರೆ ಕಾರಾಗೃಹಗಳಿಗೆ ವರ್ಗಾವಣೆ ಮಾಡುವಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿ ಹಾಗೂ ಹೆಚ್ಚುವರಿ ಹಾಸಿಗೆ ಹಾಗೂ ದಿಂಬು ನೀಡುವಂತೆ ದರ್ಶನ್ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿ ವಿಚಾರಣೆ ಇಂದು ನಗರದ 64ನೇ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯಿತು.ದರ್ಶನ್ ಅವರನ್ನು ಸದ್ಯಕ್ಕೆ ಬೇರೆಡೆಗೆ ವರ್ಗಾಯಿಸಲು ನಿರ್ದಿಷ್ಟ ಕಾರಣವಿಲ್ಲ. ಮತ್ತೆ ಅನುಚಿತ ವರ್ತನೆ ತೋರಿದರೆ ವರ್ಗಾವಣೆ ಮಾಡಲು ಐಜಿಪಿಗೆ ಅವಕಾಶ ಇದೆ. ಐಜಿಪಿ ಅಧಿಕಾರ ಬಳಸಬಹುದು ಎಂದು ಕೋರ್ಟ್ ಹೇಳಿದೆ.ಹೆಚ್ಚುವರಿ ಹಾಸಿಗೆ ಹಾಗೂ ದಿಂಬು ಹಾಸಿಗೆ ನೀಡಬೇಕೆಂಬ ದರ್ಶನ್ ಅರ್ಜಿಯನ್ನು ಕೋರ್ಟ್ ಪುರಸ್ಕರಿಸಿದೆ. ಜೈಲಿನ ನಿಯಮಗಳ ಪ್ರಕಾರವೇ ನೀಡಲು ಅವಕಾಶ ಕಲ್ಪಿಸಿದೆ. 1 ಲೋಟ, 1 ತಟ್ಟೆ, ಬೆಡ್ ಶೀಟ್, ದಿಂಬು 5 ಜೊತೆ ಬಟ್ಟೆ ನೀಡಲು ಅವಕಾಶ ಕಲ್ಪಿಸಿದೆ. ಜೊತೆಗೆ ವಾಕಿಂಗ್‌ಗೆ ಅವಕಾಶ ಮಾಡಿಕೊಡುವಂತೆ ಸೂಚಿಸಿರುವ ಕೋರ್ಟ್, ಜೈಲು ಅಧಿಕಾರಿಗಳು ಮಾನವೀಯ ಮೌಲ್ಯ ಕಾಪಾಡಿಕೊಳ್ಳುವಂತೆ ಸೂಚಿಸಿದೆ.

## ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಇಲ್ಲ: ಜಾರ್ಜ್



ಹುಬ್ಬಳ್ಳಿ, ಸೆ 9: ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಇಲ್ಲವೆಂದು ರಾಜ್ಯ ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ. ನಗರದಲ್ಲಿನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಎಲ್ಲಾ ಕ್ರಮ ಕೈಗೊಂಡಿದ್ದೇವೆ, ಹಗಲೊತ್ತಿನಲ್ಲಿಯೇ ರೈತರಿಗೆ ವಿದ್ಯುತ್ ನೀಡುವ ಕೆಲಸವನ್ನು ಆದಷ್ಟು ಬೇಗನೆ ಮಾಡುತ್ತೇವೆ ಎಂದು ತಿಳಿಸಿದರು.ಪ್ರತಿ ತಿಂಗಳು 900 ಕೋಟಿ ರೂಪಾಯಿ ಗೃಹಜ್ಯೋತಿ ಹಣವನ್ನು ಸರ್ಕಾರ ನೀಡುತ್ತಿದೆ ಎಂದ ಅವರು, ಸರ್ಕಾರದಿಂದ ಈ ಕುರಿತು ಯಾವುದೇ ಬಾಕಿ ಉಳಿದಿಲ್ಲ ಎಂದು ಹೇಳಿದರು.

ಮೆರವಣಿಗೆಯೊಂದರಲ್ಲಿ ಪಾಕಿಸ್ತಾನ ಪರ ಘೋಷಣೆ ಕುರಿತಾದ ಪ್ರಶ್ನೆಗೆ ಉತ್ತರವಾಗಿ ಈ ಬಗ್ಗೆ ಕಾನೂನು ರೀತ್ಯಾ ಕ್ರಮ ಕೈಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.ಯಾವುದೇ ಗಲಾಟೆಗೆ ರಾಜಕೀಯ ಬಣ್ಣ ಬಳಿಯುವುದು ಸರಿಯಲ್ಲ. ಆದರೆ ಬಿಜೆಪಿಯವರು ಬರೀ ಆರೋಪಗಳನ್ನೇ ಮಾಡುತ್ತಾರೆ. ನಮ್ಮ ಸರ್ಕಾರದ ಒಳ್ಳೆ ಕೆಲಸ ನೋಡಿ ಅವರಿಗೆ ನಿದ್ದೆ ಬರುವುದಿಲ್ಲ, ಹೀಗಾಗಿ ಆರೋಪ ಮಾಡುತ್ತಿರುತ್ತಾರೆ ಎಂದು ಸಚಿವರು ಕುಟುಕಿದರು.

ಎಲ್ಲಾ ಸರ್ಕಾರಗಳು ಕೂಡಾ ಕೆಲ ಪ್ರಕರಣಗಳನ್ನು ಹಿಂಪಡೆದಿವೆ. ಆದರೆ ಜಾತಿ, ಧರ್ಮ, ಪಕ್ಷ ನೋಡಿ ಪ್ರಕರಣ ಹಿಂಪಡೆಯುವುದಿಲ್ಲ ಎಂದು ಅವರು ಹೇಳಿದರು.

ಬಾನು ಮುಷ್ತಾರಿಂದ ದಸರಾ ಉದ್ಘಾಟನೆ ವಿಚಾರ ಕುರಿತಾದ ಪ್ರಶ್ನೆಗೆ ಉತ್ತರಿಸುತ್ತ, ನಮ್ಮದು ಸರ್ವಧರ್ಮದ ತೋಟ, ನಮ್ಮದು ಚುನಾಯಿತ ಸರ್ಕಾರವಾಗಿದೆ. ಹೀಗಾಗಿ ನಾವು ಕೆಲ ತೀರ್ಮಾನಗಳನ್ನು ಕೈಗೊಂಡಿರುತ್ತೇವೆ ಎಂದು ಸಚಿವರು ಹೇಳಿದರು.

## ಭಾಲ್ಕಿ: ಮರುರ್ ಕಾಲುವೆ ಬಳಿ ನಡೆದ ಹೃದಯವಿದ್ರಾವಕ ಘಟನೆ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭೇಟಿ



ಬೀದರ,ಸೆ.09:ಭಾಲ್ಕಿತಾಲೂಕಿನಮರುರ್ ಕಾಲುವೆಬಳಿನಡೆದಹೃದಯವಿದ್ರಾವಕಘಟನೆ ಹಿನ್ನೆಲೆಯಲ್ಲಿಜಿಲ್ಲಾಉಸ್ತುವಾರಿಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಇಂದು ಸ್ಥಳಕ್ಕೆ ಭೇಟಿನೀಡಿಪರಿಶೀಲನೆನಡೆಸಿದರು.ಬೀದರ ತಾಲೂಕಿನಮೈಲೂರುನಿವಾಸಿಗಳಾದಒಂದೇ ಕುಟುಂಬದಆರುಜನರುಆತ್ಮಹತ್ಯೆಗೆಯತ್ನಿಸಿ, ತಂದೆಸೇರಿದಂತೆಮೂವರುನಿರಪರಾಧಿಮಕ್ಕಳುದುರ್ಮರಣಹೊಂದಿರುವುದುಅತೀವ ದುಃಖಕರ ಘಟನೆ. ಅದೃಷ್ಟವಶಾತ್ ತಾಯಿ ಹಾಗೂ ಒಬ್ಬ ಮಗ ಬದುಕುಳಿದಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಚಿವರು ಮೃತರ ಕುಟುಂಬದವರನ್ನು ಭೇಟಿಯಾಗಿ ಸಾಂತ್ವನ ಹೇಳಿದರು. ಆತ್ಮಹತ್ಯೆಗೆ ಕಾರಣವಾದ ಹಿನ್ನೆಲೆ ಹಾಗೂ ಪ್ರಚೋದನೆ ಸೇರಿದಂತೆ ಎಲ್ಲಾ ವಿಷಯಗಳ ಕುರಿತು ಸಮಗ್ರವಾಗಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಿದರು.ಅದೇ ವೇಳೆ, ಸರ್ಕಾರದ ವತಿಯಿಂದ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ಭರವಸೆ ನೀಡಿದ ಅವರು, ಮೃತರ ಆತ್ಮಗಳಿಗೆ ಶಾಂತಿ ಸಿಗಲಿ ಹಾಗೂ ಬದುಕುಳಿದ ಕುಟುಂಬಕ್ಕೆ ದೇವರು ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

## ಹೆಣ್ಣುಭ್ರೂಣ ಹತ್ಯೆ ಶಿಕ್ಷಾರ್ಹ ಅಪರಾಧ

ರಾಯಚೂರು ಸೆ 09 : ಹೆಣ್ಣು ಭ್ರೂಣ ಹತ್ಯೆ ಮಾಡುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಎಲ್ಲಾ ಮಹಿಳೆಯರುಹಾಗೂ ಸಾರ್ವಜನಿಕರು ಹೆಣ್ಣು ಭ್ರೂಣ ಹತ್ಯೆ ಮಾಡದೆ, ಹೆಣ್ಣು ಮಗುವಿನ ರಕ್ಷಣೆ ಹಾಗೂ ಆ ಮಗುವಿಗೆ ಶಿಕ್ಷಣ ನೀಡುವುದುನಮ್ಮೆಲ್ಲರಕರ್ತವ್ಯವಾಗಿದೆಎಂದುಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಅವರು ಹೇಳಿದರು.ಜಿಲ್ಲೆಯದೇವದುರ್ಗ ಪಟ್ಟಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಹಿಳಾ ಸಬಲೀಕರಣ ಘಟಕ ಹಾಗೂ ವಿವಿಧ ಇಲಾಖೆಯಗಳಸಂಯುಕ್ತಾಶ್ರಯದಲ್ಲಿ ಮಿಷನ್ ಯೋಜನೆಯಡಿಇತ್ತೀಚೆಗೆನಡೆದಹತ್ತು ದಿನಗಳವಿಶೇಷಅಭಿಯಾನಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ತಂತ್ರ (ದುರ್ಬಳಕೆ ಮತ್ತು ತಡೆ) (ಪಿಸಿಪಿಎನ್‌ಡಿಟಿ-1994)ರಕಾಯ್ದೆಯಪ್ರಕಾರಕಠಿಣಶಿಕ್ಷೆಇದೆ. ಸ್ವತಃ ಗರ್ಭಿಣಿ ಆಕೆಯ ಗಂಡ, ಅತ್ತೆ, ಮಾವ ಅಥವಾ ಇತರೆ ಸಂಬಂಧಿಕರಿಗೆಮೊದಲಅಪರಾಧಕ್ಕೆ3 ವರ್ಷ ಜೈಲು ಹಾಗೂ 2ನೇ ಅಪರಾಧಕ್ಕೆ 5 ವರ್ಷ ಜೈಲು ಜೊತೆಗೆ1,00,000 ರೂ.ಗಳ ದಂಡ ವಿಧಿಸಲಾಗುತ್ತದೆ.ಹೆಣ್ಣುಭ್ರೂಣ ಹತ್ಯೆಗೆ ಸಹಕಾರ ನೀಡುವ ವೈದ್ಯರಿಗೆ3 ವರ್ಷ ಜೈಲು ಜೊತೆಗೆ 10,000 ರೂ.ಗಳ ದಂಡ ಹಾಗೂ ರಾಜ್ಯವೈದ್ಯಕೀಯಮಂಡಳಿಯಿಂದಅವರಹೆಸರನ್ನು5 ವರ್ಷಗಳವರೆಗೆತೆಗೆದುಹಾಕುವಕಾನೂನುಇದೆ. 2ನೇಅಪರಾಧಕ್ಕೆ5 ವರ್ಷ ಜೈಲುಜೊತೆಗೆ50,000ರೂ.ಗಳದಂಡಹಾಗೂ ಅಂತಹವೈದ್ಯರನ್ನುಶಾಶ್ವತವಾಗಿವೈದ್ಯಕೀಯ ಮಂಡಳಿಯಿಂದ ಹೆಸರು ತೆಗೆದು ಹಾಕುವ ಕಠಿಣವಾದಕಾನೂನು ಇದೆ ಎಂದು ಎಚ್ಚರಿಕೆ ನೀಡಿದರು.ಸಾರ್ವಜನಿಕರು,ಗಂಡು-ಹೆಣ್ಣು ಎನ್ನುವ ಬೇಧ-ಭಾವ ಮಾಡದೇ ಇಬ್ಬರು ಸಮಾನರುಎಂದುನಾವೆಲ್ಲರೂತಿಳಿಯಬೇಕು.



## ಸಿಯಾಚಿನ್‌ನಲ್ಲಿ ಹಿಮಪಾತ; ಮೂವರು ಸೈನಿಕರು ಹುತಾತ್ಮ



ಲಡಾಖ್:ಸೆ.9: ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿರುವ ವಿಶ್ವದ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್‌ನಲ್ಲಿ ಹಿಮಪಾತ ಸಂಭವಿಸಿಮೂವರು ಸೈನಿಕರು ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿಗಳುಮಂಗಳವಾರತಿಳಿಸಿದ್ದಾರೆ.12,000 ಅಡಿ ಎತ್ತರದ ಸಿಯಾಚಿನ್ ಬೇಸ್ ಕ್ಯಾಂಪ್ ಪ್ರದೇಶದಲ್ಲಿಭಾನುವಾರ ಹಿಮಪಾತ ಸಂಭವಿಸಿದ್ದು, ಇಬ್ಬರು ಅಗ್ನಿವೀರರು ಸೇರಿದಂತೆ ಮೂವರು ಸೈನಿಕರು ಸಿಕ್ಕಿಬಿದ್ದಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ. ತಕ್ಷಣವೇ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಮತ್ತು ಹಿಮಪಾತದಲ್ಲಿಸಿಲುಕಿದ್ದ ಸೈನಿಕರ ಶವಗಳನ್ನು ಹೊರತೆಗೆಯಲಾಯಿತು ಎಂದು ಅವರು ತಿಳಿಸಿದ್ದಾರೆ.

## ಪ್ರವಾಹ ಪೀಡಿತ ಹಿಮಾಚಲ ಪ್ರದೇಶದಲ್ಲಿ ಮೋದಿ ವೈಮಾನಿಕ ಸಮೀಕ್ಷೆ

ಶಿಮ್ಲಾ:ಸೆ.9: ಪ್ರವಾಹ ಮತ್ತು ಭೂಕುಸಿತಗಳಿಂದ ಉಂಟಾದ ಹಾನಿಯನ್ನು ಪರಿಶೀಲಿಸುವ ಸಲುವಾಗಿ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಹಿಮಾಚಲ ಪ್ರದೇಶಕ್ಕೆಭೇಟಿನೀಡಿದರು.ಕಾಂಗ್ರಾ ಜಿಲ್ಲೆಯಗಗ್ಗಲ್ ವಿಮಾನನಿಲ್ದಾಣಕ್ಕೆಬಂದಿಳಿದ ಮೋದಿಯನ್ನು ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಹಾಗೂ ಅಧಿಕಾರಿಗಳು ಬರಮಾಡಿಕೊಂಡರು.ವಿಮಾನನಿಲ್ದಾಣದಲ್ಲಿಇಳಿಯುವಮೊದಲುಪ್ರಧಾನಿಮೋದಿ ಪ್ರವಾಹ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿ, ಮನೆಗಳು, ರಸ್ತೆಗಳು ಮತ್ತು ಮೂಲಸೌಕರ್ಯಗಳಿಗೆ ಆಗಿರುವ ವ್ಯಾಪಕ ಹಾನಿಯನ್ನು ಅವಲೋಕಿಸಿದರು. ಬಳಿಕ ಪ್ರವಾಹದಿಂದ ಹಾನಿಗೊಳಗಾದ ನಿವಾಸಿಗಳೊಂದಿಗೆ ಸಂವಹನ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿದರು. ತಮ್ಮ ಭೇಟಿಯ ಸಮಯದಲ್ಲಿ ಮೋದಿ ರಾಜ್ಯಾದ್ಯಂತ ರಕ್ಷಣಾಮತ್ತುಪರಿಹಾರಕಾರ್ಯಾಚರಣೆಗಳಲ್ಲಿಸಕ್ರಿಯವಾಗಿತೊಡಗಿಸಿಕೊಂಡಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಸಿಬ್ಬಂದಿಯನ್ನು ಭೇಟಿಯಾದರು.

## ಸಾಲ ಬಾಧೆ, ಕಾಲುವೆಗೆ ಹಾರಿ ಒಂದೇ ಕುಟುಂಬದ ನಾಲ್ವರ ಆತ್ಮಹತ್ಯೆ

ಭಾಲ್ಕಿ: ಸೆ.9:ಒಂದೇ ಕುಟುಂಬದ ನಾಲ್ವರು ಕಾಲುವೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೀದರ್ ಜಿಲ್ಲೆ ಭಾಲ್ಕಿ ತಾಲೂಕಿನಲ್ಲಿ ಮಂಗಳವಾರ ನಡೆದಿದೆ. ಕಾರಂಜಾ ಜಲಾಶಯದ ಕಾಲುವೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಮೃತರನ್ನು ಬೀದರ್ ನ ಮೈಲೂರಿನವರಾದ ಶಿವಮೂರ್ತಿ ಮಾರುತಿ ಬ್ಯಾನರ್ಜಿ (45) ಅವರ ಮೂವರು ಮಕ್ಕಳಾದ ಶ್ರೀಶಾಂತ (9) ರಿತಿಕ್ (7) ಹಾಗೂ ಏಳು ತಿಂಗಳ ರಾಕೇಶ ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಶಿವಮೂರ್ತಿ ಅವರ ಪತ್ನಿ ರಮಾಬಾಯಿ, ಮಗ ಶ್ರೀಕಾಂತ ಬದುಕುಳಿದಿದ್ದಾರೆ.

ಸಾಲಬಾಧೆ ಆತ್ಮಹತ್ಯೆಗೆ ಕಾರಣ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಭಾಲ್ಕಿ ತಾಲೂಕ್ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಧನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ನೇಪಾಳ : ಉದ್ರಿಕ್ತರಿಂದ ಮನೆಗೆ ಬೆಂಕಿ, ಮಾಜಿ ಪ್ರಧಾನಿ ಪತ್ನಿ ಸಾವು

ಕಠ್ಮಂಡು:ಸೆ.9:ಸುಟ್ಟಗಾಯಗಳಿಂದಬಳಲುತ್ತಿದ್ದಮಾಜಿಪ್ರಧಾನಿಜಲನಾಥ್‌ಖನಾಲ್‌ಅವರಪತ್ನಿರಾಜ್ಯಲಕ್ಷ್ಮಿ ಚಿತ್ರಾಕರ್ ಆಸ್ಪತ್ರೆಯಲ್ಲೇಸಾವನ್ನಪ್ಪಿದ್ದಾರೆ.ಜನರಲ್-ಝಡ್‌ನೇತೃತ್ವದಲ್ಲಿನಡೆಯುತ್ತಿರುವಪ್ರತಿಭಟನೆಹಿಂಸಾತ್ಮಕರೂಪಕ್ಕೆ ತಿರುಗಿದೆ. ಪ್ರತಿಭಟನಾಕಾರರು ರಾಜಕೀಯ ನಾಯಕರನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ.2ನೇ ದಿನವೂ ಪ್ರತಿಭಟನೆ ಮುಂದುವರಿದಿದ್ದು, ಸಂಸತ್ ಭವನ, ಸುಪ್ರೀಂ ಕೋರ್ಟ್, ಅಧಿಕೃತಸರ್ಕಾರಿಕಟ್ಟಡಗಳು ಮಾತ್ರವಲ್ಲದೇ ಪ್ರಮುಖ ನಾಯಕರ ಮನೆಗಳಿಗೆ ಬೆಂಕಿ ಹಚ್ಚಿ, ವಿಧ್ವಂಸಕಕೃತ್ಯಗಳನ್ನಎಸಗಿದ್ದಾರೆ. ಇದರಿಂದಾಗಿ ನೇಪಾಳದಮಾಜಿಪ್ರಧಾನಿಪುಷ್ಪಕಮಲ್‌ದಹಲ್‌ಅಲಿಯಾಸ್‌ಪ್ರಚಂಡ, ಶೇರ್‌ಬಹದ್ದೂರ್‌ದೇವುಬಾಮತ್ತು ಜಲನಾಥ್‌ಖಾನಲ್‌ಅವರನಿವಾಸಗಳನ್ನುಹಾನಿಗೊಳಿಸಿದ್ದಾರೆ.ಜಲನಾಥ್‌ಮನೆಗೆಬೆಂಕಿಹಚ್ಚಿದವೇಳೆಗಂಭೀರವಾಗಿ ಗಾಯಗೊಂಡಿದ್ದನೇಪಾಳದಮಾಜಿಪ್ರಥಮಮಹಿಳೆರಾಜ್ಯಲಕ್ಷ್ಮಿ ಚಿತ್ರಾಕರ್‌ಸಾವನ್ನಪ್ಪಿದ್ದಾರೆ.ಬೆಂಕಿಹಚ್ಚಿದಾಗ ರಾಜ್ಯಲಕ್ಷ್ಮಿ ಮನೆಯಒಳಗೆಯೇಇದ್ದರು.ಗಾಯಗೊಂಡಿದ್ದಅವರನ್ನಬಳಿಕಆಸ್ಪತ್ರೆಗೆದಾಖಲಿಸಲಾಗಿತ್ತು.ಆದ್ರೆ ಸುಟ್ಟಗಾಯಗಳಿಂದತೀವ್ರವಾಗಿಬಳಲುತ್ತಿದ್ದ ಚಿತ್ರಾಕರ್ ಚಿಕಿತ್ಸೆ ಫಲಕಾರಿಯಾಗದೇಆಸ್ಪತ್ರೆಯಲ್ಲೇ ಸಾವನ್ನಪ್ಪಿದ್ದಾರೆ. ಇಂದುಮುಂಜಾನೆಉದ್ರಿಕ್ತಗೊಂಡಪ್ರತಿಭಟನಾಕಾರರುಪ್ರಧಾನಿಕೆಪಿಶರ್ಮಾ ಓಲಿ ಮನೆಗೆನುಗ್ಗಿಬೆಂಕಿ ಹಚ್ಚಿದ್ದಾರೆ. ಈ ಬೆನ್ನಲ್ಲೇ ಪ್ರಧಾನಿ ಹುದ್ದೆಗೆ ಓಲಿ ರಾಜೀನಾಮೆನೀಡಿದ್ದಾರೆ.ಪ್ರಧಾನಿಗಳೊಂದಿಗೆ ನಾಲ್ವರು ಸಚಿವರೂ ರಾಜೀನಾಮೆ ನೀಡಿದ್ದಾರೆಎಂದುವರದಿಗಳುತಿಳಿಸಿವೆ.



## ಮದ್ದೂರಿನಲ್ಲಿ ಕಲ್ಲು ತೂರಾಟ: ಶಾಂತಿ ಕದಡುವುದೇ ಬಿಜೆಪಿ ಉದ್ದೇಶ;ಸಿಎಂ



ಬೆಂಗಳೂರು:ಸೆ.9: ಮದ್ದೂರಿನಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಘಟನೆಗೆ ಕಾರಣರಾದವರ ವಿರುದ್ಧ ಯಾವುದೇ ಜಾತಿ, ಧರ್ಮ ಅಥವಾ ಪಕ್ಷವನ್ನು ಲೆಕ್ಕಿಸದೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಹೇಳಿದ್ದಾರೆ. ಅಲ್ಲದೆ ಬಿಜೆಪಿ ಶಾಂತಿ ಕದಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.ಸೆಪ್ಟೆಂಬರ್ 7 ರಂದು ನಡೆದ ಘಟನೆಯ ನಂತರ ಮದ್ದೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಸೋಮವಾರ ಹಲವಾರು ಬಲಪಂಥೀಯ ಸಂಘಟನೆಗಳು ದೊಡ್ಡ ಪ್ರಮಾಣದ ಪ್ರತಿಭಟನೆ ನಡೆಸಿದವು. ಇಂದು ಮದ್ದೂರಿನಲ್ಲಿಬಿಜೆಪಿಬಂದ್‌ಗೆಕರೆನೀಡಿತ್ತು.ಅವರು(ಬಿಜೆಪಿ)ಮದ್ದೂರಿಗೆಹೋಗಲಿ.ಶಾಂತಿ ಕದಡುವುದೇ ಬಿಜೆಪಿಯ ಉದ್ದೇಶವಾಗಿದೆ. ಅಲ್ಲಿ ಅವರು ಬಂದ್‌ಗೆ ಕರೆ ನೀಡಿದ್ದಾರೆ. ನಾವು ಈಗಾಗಲೇ 21 ಜನರನ್ನು ಬಂಧಿಸಿದ್ದೇವೆ. ತಪ್ಪಿತಸ್ಥರ ವಿರುದ್ಧ ಯಾವುದೇ ಜಾತಿ, ಧರ್ಮವನ್ನು ಲೆಕ್ಕಿಸದೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುತ್ತಿದ್ದೇವೆ. ಅವರು ಬಿಜೆಪಿ ಅಥವಾ ಕಾಂಗ್ರೆಸ್‌ನವರಾಗಿರಲಿ, ಹಿಂದೂಗಳು, ಮುಸ್ಲಿಮರು ಅಥವಾ ಕ್ರಿಶ್ಚಿಯನ್ನರಾಗಿರಲಿ, ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.ಮಂಡ್ಯ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಈ ಹಿಂದೆ ಘಟನೆಗೆ ಸಂಬಂಧಿಸಿದಂತೆ 22 ಜನರನ್ನು ಬಂಧಿಸಲಾಗಿದೆ ಎಂದು ಹೇಳಿದ್ದರು.ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ಮೈಸೂರಿನಲ್ಲಿ ಬಿಜೆಪಿ ಮತ್ತು ಇತರ ಬಲಪಂಥೀಯ ಸಂಘಟನೆಗಳು ನಡೆಸುತ್ತಿದ್ದ ಚಾಮುಂಡಿ ಬೆಟ್ಟ ಚಲೋ ಮೆರವಣಿಗೆಯನ್ನು ಪೊಲೀಸರು ತಡೆದಿದ್ದಾರೆ ಎಂಬುದನ್ನು ಗಮನಿಸಿದರು.ಅವರು(ಬಿಜೆಪಿ) ಮೈಸೂರಿನಲ್ಲಿ ಚಾಮುಂಡಿ ಬೆಟ್ಟ (ಬೆಟ್ಟ) ಚಲೋವನ್ನು ಯೋಜಿಸಿದ್ದರು. ಆರ್ ಎಸ್ ಎಸ್ ಸಂಘಟನೆಯವರು ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಚಾಮರಾಜನಗರದವರು ಇದರಲ್ಲಿ ಪಾಲ್ಗೊಂಡು, ಶಾಂತಿ ಕದಡುವ ಕೆಲಸವನ್ನು ಮಾಡುತ್ತಾರೆಂಬ ಕಾರಣಕ್ಕೆ ಪೊಲೀಸರು ಚಾಮುಂಡಿ ಬೆಟ್ಟ ಚಲೋ ಗೆ ಅನುಮತಿ ನೀಡಲಿಲ್ಲ ಎಂದರು.ಬಿಜೆಪಿಯವರು ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿರುವುದಾಗಿ ಕೇಂದ್ರ ಗೃಹ ಸಚಿವರಿಗೆ ದೂರು ನೀಡಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಸಿಎಂ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗಿರುತ್ತದೆ ಎಂದರು.ಕೇಂದ್ರದಲ್ಲಿ ರೈತ ಚಳವಳಿಯಲ್ಲಿ ಅನೇಕ ರೈತರು ಪ್ರಾಣ ಕಳೆದುಕೊಂಡ ಸಂದರ್ಭದಲ್ಲಿ ಬಿಜೆಪಿಯವರು ಎಲ್ಲಿದ್ದರು.? ಮಣಿಪುರದಲ್ಲಿ ನಡೆದ ಹಿಂಸಾಚಾರದ ಬಗ್ಗೆ ಯಾವುದೇ ಬಿಜೆಪಿಯವರು ಧ್ವನಿ ಎತ್ತಲಿಲ್ಲವೇಕೆ ಎಂದು ಮರುಪ್ರಶ್ನಿಸಿದರು. ಮಣಿಪುರದಲ್ಲಿ ಹಿಂಸಾಚಾರ ನಡೆದರೂ, ಪ್ರಧಾನಿಯವರು ಮಣಿಪುರಕ್ಕೆ ಭೇಟಿ ನೀಡಲೇ ಇಲ್ಲ ಎಂದರು.

## ಬುರ್ಖಾ ಧರಿಸಿ ಮಂಗಳಸೂತ್ರ ಕದ್ದ

ಕಲಬುರಗಿ,ಸೆ.9-ಬುರ್ಖಾ ಹಾಕಿಕೊಂಡು ಬಂದಪುರುಷನೊಬ್ಬಹೊಲದಲ್ಲಿಕೆಲಸ ಮಾಡುತ್ತಿದ್ದ ಮಹಿಳೆಯ ಮಂಗಳಸೂತ್ರಕಸಿದುಕೊಂಡು ಹೋಗಿರುವ ಘಟನೆ ಫರಹತಾಬಾದ ಪೊಲೀಸ್ ಠಾಣೆ ವ್ಯಾಪ್ತಿಯ ಕಡಣಿ ಗ್ರಾಮದಲ್ಲಿ ನಡೆದಿದೆ.ಕಡಣಿ ಗ್ರಾಮದ ಮಹಿಳೆಯೊಬ್ಬರು ಹೊಲದಲ್ಲಿ ಟೊಮ್ಯಾಟೊ ಹಣ್ಣನ್ನುಕೀಳುತ್ತಿದ್ದಾಗ ಬುರ್ಖಾ ಹಾಕಿಕೊಂಡು ಅಲ್ಲಿಗೆ ಬಂದ ಅಪರಿಚಿತ ವ್ಯಕ್ತಿಯೊಬ್ಬ ಜಬರದಸ್ತಿಯಿಂದ ಅವರ ಕೊರಳಲ್ಲಿದ್ದ 80 ಸಾವಿರ ರೂ.ಬೆಲೆ ಬಾಳುವ 12 ಗ್ರಾಂ.ಬಂಗಾರದ ಮಂಗಳಸೂತ್ರ ಕಸಿದುಕೊಂಡು ಓಡಿ ಹೋಗಿದ್ದಾನೆ.

ಡಿ ಗುಕೇಶ್:ವಿಶ್ವ ಚೆಸ್ ಚಾಂಪಿಯನ್ ಶಿಪ್ ಗೆದ್ದು ಇತಿಹಾಸ ನಿರ್ಮಿಸಿದ 18 ಹರೆಯದ ಯುವ ತಾರೆ

# ಭಾಲ್ಕಿ ರೋಟರಿ:ಡೆಂಟಲ್ ಚೆಕ್‌ಆಪ್ ಕ್ಯಾಂಪ್



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.9: ಹಲ್ಲುಗಳು ಮಾನವ ದೇಹದ ಪ್ರಮುಖ ಅಂಗಗಳಾಗಿವೆ. ಹಾಗಾಗಿ ಹಲ್ಲುಗಳನ್ನು ಶುಚಿತ್ವದಿಂದ ಕಾಪಾಡಿಕೊಳ್ಳಬೇಕು ಎಂದು ಬೀದರನ ಎಸ್.ಬಿ.ಪಾಟೀಲ್ ಡೆಂಟಲ್ ಕಾಲೇಜಿನ ಡೆಂಟಿಸ್ಟ್ ಡಾ.ಸಿದ್ದನಗೌಡ ಹೇಳಿದರು.

ಇಲ್ಲಿನ ಡೈಮಂಡ್ ಪ್ರೌಢಶಾಲೆಯಲ್ಲಿ ರೋಟರಿ ಕ್ಲಬ್ ಆಫ್ ಭಾಲ್ಕಿ ಫೋರ್ಟ್ ಮತ್ತು ಎಸ್.ಬಿ.ಪಾಟೀಲ್ ಡೆಂಟಲ್ ಕಾಲೇಜು ಬೀದರ ಇವರ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡ ಉಚಿತ ದಂತ ತಪಾಸಣೆ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು.

ಹಲ್ಲುಗಳ ಸ್ವಚ್ಛತೆಗಾಗಿ ಪ್ರತಿನಿತ್ಯ ಎರಡು ಬಾರಿ ಹಲ್ಲನ್ನು ಮೃದುವಾದ ಬ್ರೃಷನಿಂದ ಉಜ್ಜಬೇಕು.ರಾತ್ರಿ ಮಲಗುವ ಮುಂಚೆ ನೀರು ಕುಡಿದು ಬಾಯಿ ಮುಕ್ಕಳಿಸಿ ಸ್ವಚ್ಛಗೊಳಿಸಿಕೊಳ್ಳಬೇಕು.ಹಲ್ಲುಗಳ ಮತ್ತು ಒಸಡುಗಳ ಮಧ್ಯೆ ಸರಿಯಾಗಿ ಬ್ರೃಷನಿಂದ ಶುಚಿಗೊಳಿಸಬೇಕು. ಕ್ಯಾರಮೇಲ್‌ಗಳಂತಹ ಜಿಗುಟಾದ ಸಿಹಿ ತಿಂಡಿಗಳು ಹಲ್ಲುಗಳಿಗೆ ಅಂಟಿಕೊಂಡರೆ ಭವಿಷ್ಯದಲ್ಲಿ ಹಲ್ಲುಗಳಲ್ಲಿ ನೋವು ಕಾಣಿಸಿಕೊಳ್ಳುವ ಸಾಧ್ಯತೆಯಿರುತ್ತದೆ.ವರ್ಷದಲ್ಲಿ ಎರಡು ಸಾರಿ ದಂತ ವೈದ್ಯರಿಂದ ತಪಾಸಣೆ ಮಾಡಿಕೊಳ್ಳಬೇಕು.ನಾವು ಸೇವಿಸಿದ ಆಹಾರ ಜೀರ್ಣ ಆಗಬೇಕಾದರೆ ಹಲ್ಲುಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಹಲ್ಲು ಮಾನವನ ಸೌಂದರ್ಯ ಹೆಚ್ಚಿಸುತ್ತದೆ ಎಂದರು.

ಡೈಮಂಡ ಸಂಸ್ಥೆ ಅಧ್ಯಕ್ಷ ಕೆ.ಮಸ್ತಾನ ವಲಿ ದಂತ ಚಿಕಿತ್ಸಾ ಶಿಬಿರ ಉದ್ಘಾಟಿಸಿದರು.ರೋಟರಿ ಅಧ್ಯಕ್ಷ ಅಶ್ವಿನ ಭೋಸ್ಲೆ ಅಧ್ಯಕ್ಷತೆ ವಹಿಸಿದ್ದರು.

ಶಿಬಿರದಲ್ಲಿ ಅಂದಾಜು 300 ವಿದ್ಯಾರ್ಥಿಗಳ ಮತ್ತು 65 ಸಿಬ್ಬಂದಿಯವರ ಹಲ್ಲುಗಳನ್ನು ತಪಾಸಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಡಾ.ಅಮೀತ ಅಷ್ಟೂರೆ, ಡಾ.ವಸಂತ ಪವಾರ, ಡಾ.ಗುಂಡೆರಾವ ಶೆಡೋಳೆ,

ಸಂಸ್ಥೆ ಕಾರ್ಯದರ್ಶಿ ಗೌಸಿಯಾ ಬೆಗಂ,ಆಡಳಿತಾಧಿಕಾರಿ ಸ್ವಪ್ನಾಲಿ ಕಾಶಂಪೂರೆ,ಡಾ.ಶಾಹಿದ್,ಸೇರಿದಂತೆ ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು.ಭೀಮರಾವ ಕರ್ಣ ನಿರೂಪಿಸಿದರು.ರೋಟರಿ ಖಜಾಂಚಿ ಸೌರಭ ವಿವೇಕ ನಾಯಕ ವಂದಿಸಿದರು.

# ಸಾಂಸ್ಕೃತಿಕ ಒಗ್ಗಟ್ಟಿನ ಬದುಕು ನಮ್ಮದಾಗುವುದು: ಸಿಪಿಐ ಶ್ರೀಕಾಂತ ಅಲ್ಲಾಪುರೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಸೆ.9: ವಾರ್ಷಿಕವಾಗಿ ಬರುವ ಗಣೇಶ ಚತುರ್ಥಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಬೇಕು. ಇದರಿಂದ ಮನಸ್ಸಿಗೆ ನೆಮ್ಮದಿ ಮತ್ತು ಸಾಂಸ್ಕೃತಿಕ ಒಗ್ಗಟ್ಟಿನ ಬದುಕು ನಮ್ಮದಾಗುವುದು ಎಂದು ಕಮಲನಗರದ ಸಿಪಿಐ ಶ್ರೀಕಾಂತ ಅಲ್ಲಾಪುರೆ ಹೇಳಿದರು.

ಪಟ್ಟಣದ ಶಾಸ್ತ್ರೀ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ಭಾಗಿರಥಿ ಪಬ್ಲಿಕ್ ಶಾಲೆಯಲ್ಲಿ ಈಚೆಗೆ ಏರ್‌ಪಡಿಸಿದ್ಧ 16ನೇ ಗಣೇಶ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಸ್ಥೆಯಿಂದ ಶಿಕ್ಷಣದ ಜೊತೆ ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ನೀಡಿ ಪೂರಕ ವ್ಯವಸ್ಥೆ ಏರ್ಪಡಿಸಿರುವುದು ಹೆಮ್ಮೆಯ ವಿಷಯ ಎಂದರು.


ಮುಖ್ಯಶಿಕ್ಷಕ ಮನೋಜಕುಮಾರ ಹಿರೇಮಠ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಡಾ. ಅಜಿತ ಕುಮಾರ ಶಾಸ್ತ್ರೀ ಮಾರ್ಗದರ್ಶನದಲ್ಲಿ ಶೈಕ್ಷಣಿಕ ಪ್ರಗತಿಗೆ ಪೂರಕವಾದ ವ್ಯವಸ್ಥೆಗಳನ್ನು ನಿರ್ಮಿಸಿದ್ದು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದು ಪಾಲಕರ ಮೆಚ್ಚುಗುಗೆಗೆ ಪಾತ್ರವಾಗಿದೆ ಎಂದು ಬಣ್ಣಿಸಿದರು.

ಎಚ್ ಸಿ ರಾಜಕುಮಾರ ಸೋನಾರೆ, ಪಿಸಿ ಮಹಾದೇವ ಬಿರಾದಾರ, ಶಿಕ್ಷಕ ಸಿಬ್ಬಂದಿ ಶ್ರೀದೇವಿ ಸೋನಕಾಂಬಳೆ, ದೀಪಮಾಲಾ ಸೂರ್ಯವಂಶಿ, ಸಂಗೀತಾ ಕಾಂಬಳೆ, ರಾಜಶ್ರೀ ಸಿರಗಿರೆ, ಶೀತಲ ನಂದುಕುಮಾರ, ಅಂಜಲಿ ಕಾಂಬಳೆ, ಅಂಬಿಕಾ ಗಾಯಕವಾಡ್, ಮಲ್ಲಿಕಾರ್ಜುನ ಮೇತ್ರೆ ಮತ್ತು ಶಾಲೆಯ ಸಿಬ್ಬಂದಿ ಹಾಗೂ ಮಕ್ಕಳು ಮಯೂರ, ರೋಶನಿ, ಪ್ರಗತಿ, ಸೋನಿ, ಪ್ರೀನ್ಸ್, ಅಭಿಜಿತ, ಅಥರ್ವ, ರುದ್ರ, ದೀಪಿಕಾ ಮೊದಲಾದವರಿದ್ದರು.

# 13ರಂದು ಔರಾದ್‌ನಲ್ಲಿ ಶಿಕ್ಷಕರ ದಿನಾಚರಣೆ



ಔರಾದ:ಸೆ.9:ಶಾಲಾಶಿಕ್ಷಣ ಇಲಾಖೆಯಿಂದ 2025–26ನೇ ಸಾಲಿನ ಶಿಕ್ಷಕರ ದಿನಾಚರಣೆಯನ್ನು ಸೆ.13ರ ಬೆಳಗ್ಗೆ 10 ಗಂಟೆಗೆ ಔರಾದ(ಬಿ) ಪಟ್ಟಣದ ಡಾ.ಗುರುಪಾದಪ್ಪ ನಾಗಮಾರಪಳ್ಳಿ ಕಲ್ಯಾಣಮಂಟಪದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರತಿ ವರ್ಷದಂತೆ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ಎಲ್ಲ ಶಿಕ್ಷಕರನ್ನು ಸನ್ಮಾನಿಸಲಾಗುವುದು ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದ್ದಾರೆ.ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷರಾದ ಪೂಜ್ಯ ಡಾ.ಬಸವಲಿಂಗ ಪಟ್ಟದೇವರು ಭಾಗವಹಿಸುವರು. ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಕನ್ನಡಾಂಬೆ ವೃತ್ತದಿಂದ ಡಾ.ಗುರುಪಾದಪ್ಪ ನಾಗಮಾರಪಳ್ಳಿ ಕಲ್ಯಾಣ ಮಂಟಪದ ವರೆಗೆ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಲಿದೆ.ಕಾರ್ಯಕ್ರಮದಲ್ಲಿ ಎಲ್ಲ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು, ಪದವಿ ಪೂರ್ವ, ಪದವಿ, ಐಟಿಐ, ಡಿಪ್ಲೋಮಾ ಸೇರಿದಂತೆ ಎಲ್ಲ ಶಿಕ್ಷಕರನ್ನು ಸನ್ಮಾನಿಸಲಾಗುತ್ತದೆ. ಹಾಗೆಯೇ ವಿಶೇಷ ಸಾಧಕ ಶಿಕ್ಷಕರು, ಸೇವಾ ನಿವೃತ್ತಿ ಹೊಂದಿರುವ ಶಿಕ್ಷಕರು ಮತ್ತು ಸೇವೆಯಲ್ಲಿರುವಾಗ ನಿಧನರಾದ ಶಿಕ್ಷಕರ ಕುಟುಂಬಸ್ಥರನ್ನು ಗೌರವಿಸಲಾಗುತ್ತದೆ.ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ ಶಿಕ್ಷಣ ಪೂರಕವೆಂದು ತಿಳಿದಿರುವ ನಾನು ಕ್ಷೇತ್ರದಲ್ಲಿ ಶಿಕ್ಷಣದ ಏಳಿಗೆಯನ್ನು ಮೊದಲ ಆದ್ಯತೆಯಾಗಿಸಿಕೊಂಡು ಕೆಲಸ ಮಾಡುತ್ತಿದ್ದೇನೆ. ಅದರಂತೆ ಅಗತ್ಯಕ್ಕೆ ಅನುಗುಣ ಶಾಲಾ–ಕಾಲೇಜು, ವಸತಿ ಶಾಲೆ, ವಸತಿ ನಿಲಯಗಳನ್ನು ನಿರ್ಮಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದ್ದೇನೆ.ನನ್ನ ನಿರಂತರ ಪ್ರಯತ್ನಗಳಿಂದಾಗಿ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳಲ್ಲಿ ಶಿಕ್ಷಣವು ಹಿಂದೆಂಗಿಂತಲೂ ಸಾಕಷ್ಟು ಪ್ರಗತಿ ಸಾಧಿಸಿದೆ. ಇದರಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದ್ದು, ಶಿಕ್ಷಣದ ಏಳಿಗೆಗೆ ಮತ್ತು ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನಿರಂತರ ಪ್ರಯತ್ನವಹಿಸುವ ಶಿಕ್ಷಕರು ಮತ್ತಷ್ಟು ಉತ್ಸಾಹದಿಂದ ಕೆಲಸ ಮಾಡುವಂತಾಗಬೇಕು. ಎಲ್ಲ ಶಾಲೆಗಳ ಫಲಿತಾಂಶ ವೃದ್ಧಿಸಬೇಕೆಂಬ ಉದ್ದೇಶದಿಂದ ಶಿಕ್ಷಕರನ್ನು ಸನ್ಮಾನಿಸುತ್ತಿದ್ದು, ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ಎಲ್ಲ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಶಾಸಕರು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.



ಕಲಬುರಗಿ: ಶಹಬಾದ ತಾಲೂಕಿನ ಹೊನಗುಂಟಿ ಗ್ರಾಮದ ದಾನೇಶ್ವರಿ ವಾರಕರ್ ಅವರು ಇತ್ತೀಚೆಗೆ ಮನೆಯಲ್ಲಿ ಕುಳಿತು ಸ್ವಂತ ರಚನೆಯ ಹಿಂದಿ ಕವನಗಳನ್ನು ಕೇವಲ 60 ನಿಮಿಷದಲ್ಲಿ 30 ಕವನಗಳನ್ನು ಬರೆದು ದಾಖಲೆ ಮಾಡಿದ್ದಾಳೆ. ಹರಿಯಾಣ ರಾಜ್ಯದ ಇಂಡಿಯಾ ಬುಕ್. ಆಫ್ ರಿಕಾರ್ಡಗೆ ಭಾಜನರಾಗಿ ಪ್ರಶಸ್ತಿಯನ್ನು ಪಡದಿದ್ದಾರೆ. ದಾನೇಶ್ವರಿ ಅವರನ್ನು ಕಾಂಗ್ರೆಸ್ ಮುಖಂಡರಾದ ಶಿವಾನಂದ ಹೋನಗುಂಟಿ ಅವರು ನೇತೃತ್ವದಲ್ಲಿ ಕಲಬುರಗಿಯಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಈರಣ್ಣ ಪಾಟೀಲ ಝುಳಕಿ, ಅಶ್ವಿನ ಸಂಕಾ, ಪರಶುರಾಮ ನಾಟೀಕಾರ, ವಿಶ್ವನಾಥ ಸೌಕಾರ ಹೋನಗುಂಟಿ, ಸಿದ್ದು ಸೌಕಾರ, ವಿಶಾಲ ಸೇರಿದಂತೆ ಇತರರು ಇದ್ದರು.

# ಶಿಕ್ಷಕ ದಿನಾಚರಣೆ ನಿಮಿತ್ಯ ಅಕ್ಷರ ಕಲಿಸಿದ ಗುರುವಿಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಸೆ.9:ಬಾಲಯೋಗಿ ನೀಲಕಂಠ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ಶಿಕ್ಷಕ ದಿನಾಚರಣೆ ನಿಮಿತ್ಯ ಗುರುಗಳನ್ನು ಗೌರವಿಸುವ ದಿನಾಚರಣೆ ಡೋಣಗಾಂವ (ಎಂ) ಗ್ರಾಮ ದಲ್ಲಿ ಸಂಭ್ರಮದಿಂದ ನೇರವೇರಿತು.

ಕಮಲನಗರ ಠಾಣೆಯ ಸಿಪಿಐ ಶ್ರೀಕಾಂತ್ ಅಮರವಾಡಿ ಡಾ. ಸರ್ವಪಲ್ಲಿ ರಾಧಕೃಷ್ಣ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ಮೊಬೈಲ ನೋಡುವದು ಕಡಿಮೆ ಮಾಡಬೇಕು ಮೊಬೈಲ್ ಬಳಸುವದರಿಂದ ಮಕ್ಕಳು ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದಾರೆ ಎಂದು ನುಡಿದರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಸಂಸ್ಥೆ ಅಧ್ಯಕ್ಷರಾದ ಶಾಲಿವಾನ ಬಿ ಗಂದಗೆ ಮಾತನಾಡಿ ಶಿಕ್ಷಕರ ದಿನಾಚರಣೆ ಕೇವಲ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಸೀಮಿತ ವಾಗಿವೆ ಇಡೀ ಸಮಾಜ ಶಿಕ್ಷಕರ ದಿನಾಚರಣೆಯನ್ನು ಆಚರಿಸುವ ಮೂಲಕ ಶಿಕ್ಷಕರ ಸಮುದಾಯವನ್ನು ಗೌರವಿಸಬೇಕು ಏಂದು ನುಡಿದರು, ಅಕ್ಷರ ಕಲಿಸಿದ ಗುರುಗಳನ್ನು ಗೌರವ ದಿಂದ ಕಾಣಿ ಅವರ ಋಣ ತೀರಿಸಬೆಕು ಎಂದು ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ರಾಜ್ಯ ಅಧ್ಯಕ್ಷರು ಶ್ರೀಮತಿ ರಾಜಶ್ರೀ ನುಡಿದರು.

ಯುವಕರಾದ ಆನಂದ ಮಾತನಾಡಿ ಗುರುವಿನ ಗುಲಾಮನಾಗುವ ತನಕ ದೊರೆಅಯದನ್ನ ಮುಕ್ತಿ ವರ್ಣಮಾಲೆ ಕಲಿಶಿದಾತಂ ಗುರು ಏಂದು ನುಡಿದರು ಈ ಸಂಧರ್ಭದಲ್ಲಿ ಕಾರ್ಯಕ್ರಮದ ದಾನಿ ಗ್ರಾಮ ಪಂಚಾಯತ ಉಪ ಅಧ್ಯಕ್ಷರು ಶಾಂತಿಸಾಗರ ಎಸ್ ದೇಶಮುಖ ಅವರನ್ನು ಸನ್ಮಾನಿಸಿಲಾಯೀತ್ತು. ಡೋಣಗಾಂವ(ಎಂ) ವಿವಿಧಶಾಲೆಮಕ್ಕಳ ಮತ್ತು ಗ್ರಾಮಸ್ತರಿಂದ ಅದ್ದೋರಿ ಆಗಿ ಕಾರ್ಯಕ್ರಮ ನಡೆದವು.ಸಂಧರ್ಭದಲ್ಲಿ ಆದರ್ಶ ವಿಧಾರ್ಥಿಗಳನು ಸನ್ಮಾನ ಮಾಡಲಾಯಿತು ಗ್ರಾಮ ಪಂಚಾಯತ ಅಧ್ಯಕ್ಷರು ದೈವ್ವಶಾಲಾ, ಪಿ ಡಿ ಒ ರಾಮದಾಸ್ , ಪಿ. ಕೆ. ಪಿ. ಎಸ್ ಅಧ್ಯಕ್ಷರು ಮಹಾಲ್ಲಪ್ಪ ದೇಶಮುಕ,ಅಪ್ಪಸಾಬ್ ದೇಶಾಮುಕ. ಬಾಲಾಜಿ ದೇಶಾಮುಕ,ಶೈಲೇಸ ದೇಶಮುಖ, ರವಿ ಚಿಂಚನ್ಸೂರೆ, ಅಶೋಕ್ ದೇವರ್ಸೆ, ಸಂಗಣ್ಣ ಬಸವ ದೇವರ್ಸೆ, ಶೇಷರಾವ ಸೂರ್ಯವಂಶಿ, ಮಲ್ಲಿಕಾರ್ಜುನ ಗಂದಗೆ,ರಾಜಕುಮಾರ್ ಮಗದುಮೆ, ಮಹಾಂತೇಶ್ ದೇವರ್ಸೆ ಸಂಗಮೇಶ್ ಹೋಂಡಾಳೆ ಹಾಜರಿದ್ದರು ಕಾರ್ಯಕ್ರಮದ ಸಂಚಾಲನೆ ಪ್ರವೀಣ್ ಹೋಂಡಾಳೆ ಮಾಡಿದರು.

# ಈಡಿಗ, ಬಿಲ್ಲವ ಕ್ರಿಶ್ಚಿಯನ್ ಪದ ಕೈಬಿಡದಿದ್ದರೆ ಉಗ್ರ ಹೋರಾಟ ಕಲ್ಯಾಣಕರ್ನಾಟಕ ಆರ್ಯ ಈಡಿಗ ಹೋರಾಟ ಸಮಿತಿ ಎಚ್ಚರಿಕೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ :ಸೆ.9: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲು ಹೊರಡಿಸಿದ ಆದೇಶದಲ್ಲಿ ಈಡಿಗ ಬಿಲ್ಲವ ಜಾತಿಗಳನ್ನು ಕ್ರೈಸ್ತರೆಂದು ಗುರುತಿಸುವುದನ್ನು ಕೂಡಲೇ ಕೈಬಿಡಬೇಕು ಇಲ್ಲವಾದರೆ ಉಗ್ರ ಹೋರಾಟವನ್ನು ಎದುರಿಸಬೇಕಾಗುತ್ತದೆ ಎಂದು ಕಲ್ಯಾಣ ಕರ್ನಾಟಕ ಆರ್ಯ ಈಡಿಗ ಹೋರಾಟ ಸಮಿತಿ ಪ್ರಬಲ ಎಚ್ಚರಿಕೆ ನೀಡಿದೆ.

ಈಡಿಗ ಬಿಲ್ಲವ ಸೇರಿದಂತೆ 26 ಪಂಗಡಗಳಲ್ಲಿ ಗುರುತಿಸಿಕೊಂಡ ಜಾತಿ ಸಮುದಾಯದ ಮುಂದೆ ಕ್ರಿಶ್ಚಿಯನ್ ಎಂದು ಅಧಿಕೃತವಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಹೊರಡಿಸಿದ ಪ್ರಕಟಣೆಯಲ್ಲಿ ಗುರುತಿಸಿರುವುದು ಮತಾಂತರಕ್ಕೆ ನೀಡುವ ಪ್ರೋತ್ಸಾಹದ ಹುನ್ನಾರವಾಗಿದೆ. ಕೂಡಲೇ ಜಾತಿ ಪಟ್ಟಿಯಿಂದ ಬಿಲ್ಲವ ಕ್ರಿಶ್ಚಿಯನ್, ಈಡಿಗ ಕ್ರಿಶ್ಚಿಯನ್ , ನಾಡಾರ್ ಕ್ರಿಶ್ಚಿಯನ್, ತುಳು ಕ್ರಿಶ್ಚಿಯನ್ ಮುಂತಾದವುಗಳನ್ನು ಪಟ್ಟಿಯಿಂದ ಕೈಬಿಡಬೇಕು ಇಲ್ಲವಾದಲ್ಲಿ ಈ ಆದೇಶದ ವಿರುದ್ಧ ಸಮಿತಿಯು ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಕಲ್ಯಾಣ ಕರ್ನಾಟಕ ಆರ್ಯ ಈಡಿಗ ಹೋರಾಟ ಸಮಿತಿಯ ಅಧ್ಯಕ್ಷರಾದ ಸತೀಶ್ ವಿ ಗುತ್ತೇದಾರ್ ಮತ್ತು ಪ್ರಧಾನ ಎಂ ಕಾರ್ಯದರ್ಶಿ ವೆಂಕಟೇಶ್ ಕಡೇಚೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಈಡಿಗ, ಬಿಲ್ಲವ ಸೇರಿದಂತೆ 26 ಪಂಗಡಗಳ ಜಾತಿಯ ಮುಂದೆ ಅಲ್ಪಸಂಖ್ಯಾತ ಪಟ್ಟಿಗೆ ಸೇರಿರುವ ಕ್ರಿಶ್ಚಿಯನ್ ಉಲ್ಲೇಖ ಮಾಡಿ ಅಧಿಕೃತವಾಗಿ ರಾಜ್ಯ ಸರ್ಕಾರ ಪ್ರಕಟಣೆ ಹೊರಡಿಸಿ ಈ ಸಮುದಾಯದ ಸೌಲಭ್ಯ ಕಡಿತಕ್ಕೆ ಮುಂದಾಗಿದೆ. ಅಲ್ಪಸಂಖ್ಯಾತ ಪಂಗಡಗಳೊಂದಿಗೆ ಸೇರಿರುವ ಕ್ರಿಶ್ಚಿಯನ್ ಪದವನ್ನು ಬಿಟ್ಟು ಹಿಂದುಳಿದ ವರ್ಗಗಳ ಜಾತಿ ಕುರಿತಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಬೇಕು.ಈ ಬಗ್ಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಕಾರ್ಯದರ್ಶಿಗಳು ತಕ್ಷಣ ಸ್ಪಷ್ಟೀಕರಣ ಪ್ರಕಟಿಸುವಂತೆ ಹೋರಾಟ ಸಮಿತಿಯು ಒತ್ತಾಯಿಸಿದೆ.

ಈಗಾಗಲೇ ರಾಜ್ಯದ ಈಡಿಗ, ಬಿಲ್ಲವ ಸೇರಿದಂತೆ 26 ಪಂಗಡಗಳ ನಾಯಕರು ಚರ್ಚೆ ನಡೆಸುತ್ತಿದ್ದು ಸಮಾನ ವೇದಿಕೆ ನಿರ್ಮಾಣ ಮಾಡಿ ಆಯೋಗದ ಪ್ರಕಟಣೆಯ ವಿರುದ್ಧ ಹೋರಾಟ ನಡೆಸಲು ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ. ಈ ರೀತಿ ಜಾತಿಗಳ ಮುಂದೆ ಅನ್ಯಧರ್ಮದ ಹೆಸರು ಸೇರಿಸಿ ಸೌಲಭ್ಯ ಒದಗಿಸಲು ಸರ್ಕಾರವೇ ಮುಂದಾಗಿರುವುದು ಇದು ಮತಾಂತರಕ್ಕೆ ನೀಡುವ ಪ್ರೋತ್ಸಾಹದ ಭಾಗವಾಗಿದೆ ಎಂದು ಆರೋಪಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಆಗಸ್ಟ್ 22ರಂದು ಪ್ರಕಟಿಸಿದ ಜಾತಿ ಮತ್ತು ಉಪಜಾತಿಗಳ (ಆಂಗ್ಲ ವರ್ಣಮಾಲೆ) ಪಟ್ಟಿಯನ್ನು ತಿದ್ದುಪಡಿ ಮಾಡುವಂತೆ ಹೋರಾಟ ಸಮಿತಿಯ ಉಪಾಧ್ಯಕ್ಷರಾದ ಮಹಾದೇವ ಗುತ್ತೇದಾರ್, ಸದಸ್ಯರಾದ ಡಾ. ಸದಾನಂದ ಪೆರ್ಲ, ರಾಜೇಶ್ ಡಿ ಗುತ್ತೇದಾರ್, ಪಂಚಮಿ ಸಂತೋಷ್ ಪೂಜಾರಿ, ಪ್ರವೀಣ್ ಜತ್ತನ್, ದಯಾನಂದ ಪೂಜಾರಿ,ಕುಪೇಂದ್ರ ಗುತ್ತೇದಾರ್ ನಾಗೂರ್, ಅಂಬಯ್ಯ ಗುತ್ತೇದಾರ್ ಇಬ್ರಾಹಿಂಪುರ್ ಶರಣಯ್ಯ ಗುತ್ತೇದಾರ್ ಕೊಂಚೂರು, ಸುರೇಶ್ ಗುತ್ತೇದಾರ್, ತಿಮ್ಮಪ್ಪ ಗಂಗಾವತಿ, ಬಸವರಾಜ ಜೀವಣಗಿ, ಮಲ್ಲಿಕಾರ್ಜುನ ಕುಕ್ಕುಂದ, ಮಹೇಶ್, ಹೋಳಕುಂದ, ಅಂಬಯ್ಯ ಗುತ್ತೇದಾರ್ ಶಾಬಾದಿ, ಜಗದೇವ ಗುತ್ತೇದಾರ್ ಕಲ್‌ಬೇನೂರು, ಅನಿಲ್ ಯರಗೋಳ ಮಲ್ಲಿಕಾರ್ಜುನ ಕಡೇಚೂರ್ ಸುರಪುರ ಸೋಮರಾಯ ಶಾಖಾಪುರ, ಮಹೇಶ್ ಯರಗೋಳ್ , ಆನಂದ ಬಳೂರ್ಗಿ ಮತ್ತಿತರರು ಒತ್ತಾಯಿಸಿದ್ದಾರೆ.

# ಬಯಲಲ್ಲಿ ಬಾನಾಡಿ ಕೃತಿ ಲೋಕಾರ್ಪಣೆ



ಕಲಬುರಗಿ: ಸೆ.9:ಕಲಬುರಗಿ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ವೀರಮ್ಮ ಗಂಗಸಿರಿ ಮಹಿಳಾ ಪದವಿ ಕಾಲೇಜಿನ ಸಂಯುಕ್ತಾಶ್ರಯದಲ್ಲಿ "ಬಯಲಲ್ಲಿ ಬಾನಾಡಿ" ಕೃತಿಯ ಲೋಕಾರ್ಪಣೆ ಸಮಾರಂಭವು ಭಾನುವಾರ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಡಾ. ಸಿದ್ದಾರಾಮ ಹೊನ್ಕಲ್ ಅವರು ಹೆಚ್ಚು ಹೆಚ್ಚು ಸೃಜನಶೀಲ ಸಾಹಿತ್ಯ ಹೊರಬರಬೇಕು, ಓದುಗರಿಗೆ ಉತ್ತಮ ಸಾಹಿತ್ಯ ದೊರೆಯಲಿ ಎಂದು ಹಾರೈಸಿದರು.

ಸಿದ್ದಲಿಂಗೇಶ್ವರ ಪ್ರಕಾಶನ ಸಂಸ್ಥೆಯ ಪ್ರಕಾಶಕರು ಡಾ. ಬಸವರಾಜ ಕೊನೇಕ ಅವರು ನಮ್ಮ ಸಂಸ್ಥೆ ಸದಾ ಕೈಗೆಟುಕುವ ದರದಲ್ಲಿ ಪುಸ್ತಕ ಮುದ್ರಿಸಿ ಪ್ರಕಟಿಸುವುದಕ್ಕೆ ಆದ್ಯತೆ ನೀಡುತ್ತದೆ"* ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲ ಡಾ. ರಾಜೇಂದ್ರ ಕೊಂಡಾ ಅವರು ಕೃತಿಯ ಮಹತ್ವವನ್ನು ವಿವರಿಸಿದರು. ಶೈಲಜಾ ಬಾಗೇವಾಡಿ ಅವರು ಬಯಲಲ್ಲಿ ಬಾನಾಡಿ ಕೃತಿ ಅತ್ಯಂತ ಸುಂದರವಾಗಿ ಹೊರಬಂದಿದ್ದು, ಡಾ. ಪರುತೆ ಅವರ ಈ ಕೃತಿಯಲ್ಲಿ 455 ಹೈಕುಗಳು ಅಳವಡಿಸಲ್ಪಟ್ಟಿವೆ. ಹೈಕು ಪ್ರಕಾರ ಭಾರತಕ್ಕೆ 1919 ರಲ್ಲಿ ಪರಿಚಯವಾಗಿದ್ದು, ಕರ್ನಾಟಕಕ್ಕೆ 1960 ರಲ್ಲಿ ಪರಿಚಿತವಾಯಿತು ಎಂದು ಹೇಳಿದರು.

ಪ್ರಾರಂಭದಲ್ಲಿ ವಿದ್ಯಾರ್ಥಿಗಳಿಂದ ಪ್ರಾರ್ಥನೆ ನಡೆಯಿತು. ಸ್ವಾಗತ ಭಾಷಣವನ್ನು ಡಾ. ಪ್ರೇಮಚಂದ ಚವ್ಹಾಣ ಸಲ್ಲಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಬಿ. ಎಚ್. ನಿರಗುಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಪ್ರೊ.ಕವಿತಾ ಅಶೋಕ್ ನಿರೂಪಿಸಿದರು.

ಡಾ ಸುಜಾತಾ ಪಾಟೀಲ ಅವರು ಡಾ ಎಸ್ ರಾಧಾಕೃಷ್ಣನ್ ಕೃತಿ ಕುರಿತು ಮಾತನಾಡಿ, ರಾಧಾಕೃಷ್ಣನ್ ಶಿಕ್ಷಕ ವೃತ್ತಿಯಿಂದ ಅವರು ಉಪರಾಷ್ಟ್ರಪತಿ ಮತ್ತು ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಮಹನೀಯರು ಇವರನ್ನು ಸ್ಮರಿಸಿಕೊಳ್ಳುವುದು ನಮ್ಮ ಜವಾಬ್ದಾರಿ ಎಂದು ಹೇಳಿದರು. ಲೇಖಕ ಡಾ ವಿಜಯಕುಮಾರ ಪರುತೆ ಅವರು ಮಾತನಾಡಿ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಸಾಹಿತಿಗಳಾದ ಪ್ರಭಾಕರ ಜೋಶಿ, ಮಹಿಪಾಲರೆಡ್ಡಿ ಮುನ್ನೂರ, ಡಾ. ವೀರಶೇಟ್ಟಿ ಗಾರಂಪಳ್ಳಿ, ಶರಣಗೌಡ ಪಾಟೀಲ ಪಾಳಾ, ಎಸ್. ಎಲ್. ಪಾಟೀಲ, ಸಿದ್ದರಾಮ ರಾಜಮಾನೆ, ಕಿರಣ ಪಾಟೀಲ, ಬಿ. ಎಸ್. ಪಾಟೀಲ, ಶಿವಾನಂದ ಕಶೆಟ್ಟಿ, ಸಂಗಮನಾಥ ರೇವತ್ತಗಾಂವ, ಅಂಬಾರಾಯ ಕೋಣೆ, ಡಾ ಶಿವಶರಣಪ್ಪ ಧಾಭಾ, ಪ್ರೊ.ಗುರುಬಸಪ್ಪ ಪಾಟೀಲ್ ವೆಂಕಟೇಶ್ ನೀರಡಗಿ ಶಿವಾನಂದ ಸ್ವಾಮಿ ಹಾಗೂ ಅನೇಕರು ಉಪಸ್ಥಿತರಿದ್ದರು.

# ಬಾಲ್ಯ ವಿವಾಹ ನಿಯಂತ್ರಣಕ್ಕೆ ಎಲ್ಲರೂ ಕೈಜೋಡಿಸಿ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ



ಯಾದಗಿರಿ:ಸೆ:9:ಬಾಲ್ಯವಿವಾಹದಂತಹ ಗಂಭೀರ ಸಮಸ್ಯೆಗಳ ನಿವಾರಣೆಗೆ ಬಾಲ್ಯವಿವಾಹ ನಿಷೇಧ ಕಾಯ್ದೆ–2006 ರ ಕುರಿತು ಸೂಕ್ತ ಜಾಗೃತಿ ಮೂಡಿಸುವಂತೆ ನಗರ ಶಾಸಕ ಶ್ರೀ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಹೇಳಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೋಲಿಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಹಯೋಗದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ 2006, ಪೋಕ್ಸೋ ಕಾಯ್ದೆ –2012 ಹಾಗೂ ಬಾಲ ನ್ಯಾಯ ಕಾಯಿದೆ –2015 ಕುರಿತು ಸಮೂಹ ಮಾಧ್ಯಮ, ಪ್ರಿಂಟಿಂಗ್ ಪ್ರೆಸ್, ಟೆಂಟ್ ಹೌಸ್, ಡಿಜೆ, ಬ್ಯಾಂಡ್, ಕಲ್ಯಾಣ ಮಂಟಪ, ಶಾದಿ ಮಹಲ್ ಮಾಲೀಕರು, ಪೂಜಾರಿ, ಖಾಜಿ, ಮೌಲಾನ, ಅಡುಗೆ ಭಟ್ಟರಿಗೆ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಾಲ್ಯ ವಿವಾಹದಿಂದ ಹೆಣ್ಣು ಮಗುವಿನ ರಕ್ಷಣೆಯಾಗಬೇಕು.ಹೆಣ್ಣು ಹಾಗೂ ಗಂಡು ಮಗು ನಡುವಿನ ಲಿಂಗತಾರತಮ್ಯ ಹೋಗಬೇಕು.ಗಂಡು ಮಗುವಿನ ಜೊತೆಗೆ

ಹೆಣ್ಣುಮಗುವಿಗೂ ಉನ್ನತ ಶಿಕ್ಷಣದ ಅವಕಾಶ ಕಲ್ಪಿಸಿ ಸಮಾಜದಲ್ಲಿ ಉನ್ನತ ಸ್ಥಾನ ದೊರಕಿಸಲು ಪಾಲಕರು,ಎಲ್ಲರೂ ಶ್ರಮಿಸಬೇಕು.ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮ ಹಾಗೂ ಬಾಲ್ಯ ವಿವಾಹ ಕಾಯ್ದೆ 2006ರ ಕುರಿತು ಅವಶ್ಯಕ ಜಾಗೃತಿ ಮೂಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸಲಹೆ ನೀಡಿದರು.ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಮರಿಯಪ್ಪ ಅವರು, ಮಕ್ಕಳ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಯಾಗಬೇಕು.ಮಕ್ಕಳ ಬಾಲ್ಯ ಅಮೂಲ್ಯವಾಗಿರುವದರಿಂದ ಅವರ ಭಾವನೆ ಹಾಗೂ ಜೀವನಕ್ಕೆ ಗೌರವ ನೀಡಬೇಕು. ಬಾಲ್ಯವಿವಾಹ ಸಾಮಾಜಿಕ ಪಿಡುಗು ಆಗಿದ್ದು, ಬಾಲ್ಯ ವಿವಾಹ ಕಂಡು ಬಂದ ತಕ್ಷಣ ಮಕ್ಕಳ ಸಹಾಯವಾಣಿ 1098, ಪೋಲಿಸ್ ಇಲಾಖೆ ಸಹಾಯವಾಣಿ 112 ಹಾಗೂ ಮಕ್ಕಳ ರಕ್ಷಣಾ ಘಟಕ(08473253347)ಗೆ ದೂರು ಸಲ್ಲಿಸಬೇಕೆಂದು ಕರೆ ನೀಡಿದರು.

ಖಾಯಂ ಜನತಾ ನ್ಯಾಯಾಲಯ: ಒಂದು ಕೋ.ರೂ ಗಳ ಮೌಲ್ಯದ ವ್ಯಾಜ್ಯಗಳು ಹಾಗೂ ನಾಗರಿಕ ಸೌಲಭ್ಯಗಳಾದ ನೀರು ಸರಬರಾಜು, ಅಂಚೆ, ವಿದ್ಯುತ್ ಬ್ಯಾಂಕಿಂಗ್, ಪ್ರಯಾಣಿಕರ ಸಾಗಾಣಿಕೆ, ಇತರೆಗೆ ಸಂಬಂಧಿಸಿದಂತೆ, ಕೋರ್ಟ್ ಫೀ ಇಲ್ಲದೆ ವ್ಯಾಜ್ಯಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಅಪರ್ ಜಿಲ್ಲಾಧಿಕಾರಿ ರಮೇಶ ಕೋಲಾರ್ ಅವರು ಬಾಲ್ಯವಿವಾಹದಲ್ಲಿ ಜಿಲ್ಲೆ ರಾಜ್ಯದಲ್ಲಿಯೇ ಮೂರನೇ ಸ್ಥಾನದಲ್ಲಿರುವುದು ವಿಪರ್ಯಾಸ. ಹೆಣ್ಣು ಮಕ್ಕಳ ಜೀವನ ನರಕ ಮಾಡುವ ಬಾಲ್ಯ ವಿವಾಹವನ್ನು ತಡೆಯಲು ಎಲ್ಲರೂ ಎಚ್ಚರಗೊಂಡು ನಿಯಂತ್ರಣಕ್ಕೆ ಮುಂದಾಗುವಂತೆ ಕರೆ ನೀಡಿದರು.ನಗರಸಭೆ ಅಧ್ಯಕ್ಷ ಲಲಿತಾ ಅನಪೂರ ಅವರು ಮಾತನಾಡಿ, ಬಾಲ್ಯ ವಿವಾಹ ದಿಂದ ಹೆಣ್ಣು ಮಗುವಿನ ಜೀವನ ಹಾಳಾಗುವ ಜೊತೆಗೆ ರಕ್ತಹೀನತೆ, ವಿವಿಧ ಕಾಯಿಲೆಗಳಿಗೂ ಬಲಿಯಾಗ ಬೇಕಾಗುತ್ತದೆ.

ಜಿಲ್ಲೆಯ ಸುರಪುರ ಮತ್ತು ಗುರುಮಠಕಲ್ಲದಲ್ಲಿ ಬಾಲ್ಯ ವಿವಾಹಗಳು ಹೆಚ್ಚಾಗಿರುವದರಿಂದ ಗ್ರಾಮ ಸಭೆ, ಗ್ರಾಮ ಪಂಚಾಯತ್, ಎಸ್ಡಿಎಂಸಿ ಅಧ್ಯಕ್ಷರು, ಸದಸ್ಯರು, ಜನಪ್ರತಿನಿಧಿಗಳ ಮೂಲಕವು ಬಾಲ್ಯ ವಿವಾಹ ನಿಯಂತ್ರಣ ಜಾಗೃತಿ ಮೂಡಿಸಲು ಸಲಹೆ ನೀಡಿದರು.

ಮಕ್ಕಳ ರಕ್ಷಣಾ ಯೋಜನೆಯ ಯುನಿಸೆಫ್ ಸಂಯೋಜಕರಾದ ಹರೀಶ್ ಜೋಗಿ ಬಾಲ್ಯ ವಿವಾಹ ನಿಷೇಧ ಕಾಯ್ದೆ –2006, ಬಾಲನ್ಯಾಯ ಕಾಯ್ದೆ, ಪೋಕ್ಸೋ ಕಾಯ್ದೆ ಕುರಿತು ವಿವರವಾದ ಮಾಹಿತಿ ನೀಡಿದರು. ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಧರಣೇಶ್ ಮಾತನಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವೆಂಕಟೇಶ್ ಚಟ್ನಳ್ಳಿ , ಮಕ್ಕಳ ರಕ್ಷಣಾ ಸಮಿತಿ ಅಧ್ಯಕ್ಷ ದಿನೇಶ್ ಕುಮಾರ್, ಉಪಸ್ಥಿತರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ತಿಪ್ಪಣ್ಣ ಶಿರಸಗಿ ವಂದಿಸಿದರು.ಶ್ರೀ ರಾಜೇಂದ್ರ ಪ್ರತಿಜ್ಞಾವಿಧಿ ಬೋಧಿಸಿದರು.ದೇವಪ್ಪ ಪ್ರಾರ್ಥಿಸಿದರು. ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ನಿರ್ಮಲಾ ಸುರಪುರ ಅವಶ್ಯಕ ಮಾಹಿತಿ ನೀಡಿದರು.

## 48 ಕುಟುಂಬಗಳಿಗೆ ಪುನರ್ವಸತಿ ನಿವೇಶನ ಹಕ್ಕು ಪತ್ರ ವಿತರಿಸಿದ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್



**ಮಲ್ಲಮ್ಮ ನುಡಿ ವಾರ್ತೆ**

**ರಾಯಚೂರು:**

ಸೆಪ್ಟೆಂಬರ್ 09: ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಸೆಪ್ಟೆಂಬರ್ 9ರಂದು ರಾಯಚೂರ ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ದಿನ್ನಿ ಮತ್ತು ನೆಲಹಾಳ ಗ್ರಾಮದಲ್ಲಿ ಆಶ್ರಯ ಯೋಜನೆಯಡಿ 48 ಕುಟುಂಬಗಳಿಗೆ ಪುನರ್ವಸತಿ ನಿವೇಶನ ಹಕ್ಕಪತ್ರಗಳ ವಿತರಣೆ ಮಾಡಿದರು.

ಇದೆ ವೇಳೆ ಶಾಸಕರು, ನೆಲಹಾಳ ಗ್ರಾಮದಲ್ಲಿ ನೂತನ 2 ಶಾಲಾ ಕೊಠಡಿಗಳ ಕಾಮಗಾರಿ, ಮುಖ್ಯರಸ್ತೆಗೆ ಹೊಂದಿಕೊಂಡ ಸಿಸಿ ರಸ್ತೆ ಕಾಮಗಾರಿ ಜೊತೆಗೆ ಜಲಧಾರೆ ಯೋಜನೆಯ ಕಾಮಗಾರಿಗಳ ವೀಕ್ಷಣೆ ಮಾಡಿದರು.


ಈ ವೇಳೆ ಶಾಸಕರು ಮಾತನಾಡಿ, ಸುಮಾರು ವರ್ಷಗಳಿಂದ ಗ್ರಾಮದ ನಿವಾಸಿಗಳು ನಿವೇಶನದ ಹಕ್ಕುಪತ್ರಗಳ ಬೇಡಿ-ಕೆ ಇಟ್ಟಿದ್ದರು. ಗ್ರಾಮೀಣ ವಾಸಿಗಳ ಬೇಡಿಕೆಯು ನ್ಯಾಯಯುತವಾಗಿದೆ ಎಂದು ಗ್ರಾಮಸ್ಥರ ಆಶೋತ್ತರಕ್ಕೆ ಸ್ಪಂದಿಸಿ ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಗ್ರಾಮಗಳ ಅಭಿವೃದ್ಧಿಗೆ ಬದ್ಧ: ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಪ್ರತಿಯೊಂದು ಹಳ್ಳಿಗಳಿಗು ಕುಡಿಯುವ ನೀರು, ಬೀದಿ ದೀಪ, ಸಾರಿಗೆಯಂತಹ ಎಲ್ಲಾ ಬಗೆಯ ಮೂಲಭೂತ ಸೌಕರ್ಯ ಸಿಗಬೇಕಿದೆ. ಈ ದಿಶೆಯಲ್ಲಿ ತಾವು ಯೋಜಿಸಿ ಕಾರ್ಯಪ್ರವೃತ್ತವಾಗಿದ್ದು ತಮ್ಮ ಕ್ಷೇತ್ರದ ಪ್ರತಿಯೊಂದು ಹಳ್ಳಿಯ ಅಭಿವೃದ್ಧಿಗೆ ಬದ್ಧರಾಗಿರುವುದಾಗಿ ಇದೆ ವೇಳೆ ಶಾಸಕರು ತಿಳಿಸಿದರು.

ಈ ಸಂದರ್ಭದಲ್ಲಿ ಗಿಲ್ಲೇಸೂಗುರ ಬ್ಲಾಕ್ ಅಧ್ಯಕ್ಷರು, ಗ್ರಾಮದ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಹಿರಿಯ ಮುಖಂಡರು, ನಾಮ ನಿರ್ದೇಶಿತ ಸದಸ್ಯರು, ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಚಿಟಗುಪ್ಪ:- ಪಟ್ಟಣದ ಶ್ರೀ ಗುರು ಅಯ್ಯಪ್ಪ ಸ್ವಾಮಿ ಹಿರೇಮಠದ ಪೀಠಾಧಿಪತಿಗಳಾದ ಷ.ಬ್ರ. ಶ್ರೀ ಗುರುಲಿಂಗ ಶಿವಾಚಾರ್ಯರ 84ನೇ ವರ್ಷದ ಹುಟ್ಟು ಹಬ್ಬವನ್ನು ಪಟ್ಟಣದಲ್ಲಿ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಪೂಜ್ಯ ಶ್ರೀಗಳಿಗೆ ಶಾಲು ಹೊದಿಸಿ ಹಣ್ಣು ಹಂಪಲು ನೀಡಿ ಹುಟ್ಟು ಹಬ್ಬದ ಶುಭಾಶಯ ತಿಳಿಸಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮರುಳರಾಧ್ಯ ಶಿವಾಚಾರ್ಯರು, ದಿಲೀಪ್ , ಸೇರಿದಂತೆ ಇತರರು ಉಪಸ್ಥಿತರಿದ್ದರು.(ಮಲ್ಲಮ್ಮ ನುಡಿ ಚಿತ್ರ)




ಹುಮನಾಬಾದ: 2025-26ನೇ ಸಾಲಿನಲ್ಲಿ ತಾಲ್ಲೂಕಿನ ಮರಖಲ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ರಾಮನಗೌಡರವರು ಬೀದರ್ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿದಕ್ಕೆ ಗ್ರಾಮದ ಮುಖಂಡರಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಗಳು ಅವಿನಾಶ್ ರೆಡ್ಡಿ ಮಚೇಂದ್ರ ಹಿಲಾಲಪುರೆ ಲೋಕೇಶ್ ಸಿಂಧೂಲ್ ಸತೀಶ್ ದೇವನೋರ ಶ್ರೀನಿವಾಸ್ ಜೋತ್ಪೂರ್ ವಿಶ್ವನಾಥ್ ಬೈರನಹಳ್ಳಿ ಅಭಿಷೇಕ್ ರೆಡ್ಡಿ ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).


ನೋಂದಣಿ ಸಂ.ಉನಿಬ/ಎನೊಂದಣಿ/ಸೌ.ಸ./946/2009-10

**ಶ್ರೀ ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೀದರ,**
**ರಂಗಮಂದಿರ ರಸ್ತೆ ಸ್ಟೇಡಿಯಂ ಹತ್ತಿರ ಬೀದರ -585 401**

**16ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ**

ದಿನಾಂಕ: ........................

**ಸನ್ಮಾನ್ಯ ಸಂಘದ ಸದಸ್ಯರುಗಳಿಗೆ ನಮಸ್ಕಾರಗಳು,**

ಸಂಘದ 2024-2025ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕ: 24-09-2025 ಮುಂಜಾನೆ 11-00 ಗಂಟೆಗೆ ಈ ಕೆಳಕಂಡ ವಿಷಯಗಳನ್ನು ಪರಿಶೀಲಿಸಲು ಕಛೇರಿಯ ಮೇಲ್ಛಾವಣಿ ಕರೆಯಲಾಗಿದೆ.

ಮಾನ್ಯ ಸದಸ್ಯರು ಸಕಾಲಕ್ಕೆ ಸಭೆಯಲ್ಲಿ ಭಾಗವಹಿಸಲು ಕೊರಲಾಗಿದೆ.

**ಸಭೆಯ ಕಾರ್ಯಸೂಚಿ :-**

1) ಪೂಜೆ ಮತ್ತು ಪ್ರಾರ್ಥನೆ
2) ಸ್ವಾಗತ
3) ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುವುದು.
4) ಸರ್ವಸಾಧಾರಣ ಸಭೆಯ ಕಾರ್ಯಲಾಪಗಳನ್ನು ಓದಿ ದಾಖಲೆ ಮಾಡುವುದು.
5) ದಿನಾಂಕ: 22-09-2024 ರಂದು ನಡೆದ 15ನೇ ವಾರ್ಷಿಕ ಮಹಾ ಸಭೆಯ ನಿರ್ಣಯಗಳನ್ನು ಓದಿ ದೃಢಿಕರಿಸುವುದು.
6) ಕಾರ್ಯನಿರ್ವಾಹಕ ಮಂಡಳಿಯವರು ತಯ್ಯಾರಿಸಿರುವ 2024-25ನೇ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದಿಸುವುದು.
7) 2024-25ನೇ ಸಾಲಿನ ಆಯ-ವ್ಯಯದಲ್ಲಿ ಅಂದಾಜಿಗಿಂತ ಹೆಚ್ಚುವರಿಯಾದ ಖರ್ಚುಗಳಿಗೆ ಒಪ್ಪಿಗೆ ನೀಡುವುದು. 2025-26ನೇ ಸಾಲಿನ ಆಯ-ವ್ಯಯ ಮಂಜೂರಿ ಮಾಡುವುದು.
8) ನೂತನವಾಗಿ ಸೇರ್ಪಡೆಗೊಂಡ ಸದಸ್ಯರ ಪರಿಗಣನೆ
9) 2025-26ನೇ ಸಾಲಿನ ಲೆಕ್ಕಪರಿಶೋಧನೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ
10) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳ ಚರ್ಚೆ ವಂದನಾರ್ಪಣೆ

**ಸ್ಥಳ: ಬೀದರ.**
**ದಿನಾಂಕ:** 24-09-2025

**ಸಹಿ/-**
ಮುಖ್ಯ ಕಾರ್ಯ ನಿರ್ವಾಹಕರು
ಶ್ರೀ ಚನ್ನಬಸವ ಪತ್ತಿನ
ಸೌಹಾರ್ದ ಸಹಕಾರಿ ನಿಯಮಿತ., ಬೀದರ


### ಮಕ್ಕಳ ಬದುಕಿನಲ್ಲಿ ಅರಿವಿನ ಬೆಳಕು ಮೂಡಿಸುವವರು

## ಶಿಕ್ಷಕರು -ಶಿವಕುಮಾರ ಶ್ರೀಗಳು

**ಮಲ್ಲಮ್ಮ ನುಡಿವಾರ್ತೆ**

**ಕೊಪ್ಪಳ :**

ಶಿಕ್ಷಕರು ನೈತಿಕತೆಯನ್ನು ಪ್ರಾಮಾಣಿಕತೆಯನ್ನುಕಾಯ್ದುಕೊಳ್ಳಬೇಕು ನಮ್ಮದೇಶ ಶಿಕ್ಷಕರಿಗೆ ಉನ್ನತ ಸ್ಥಾನ ನೀಡಿದೆ. ಇಂದಿನ ಜಗತ್ತಿನಲ್ಲಿ ಬೇರೆ ಯಾವುದೂ ಶಕ್ತಿಯಲ್ಲ ಜ್ಞಾನವೇ ದೊಡ್ಡ ಶಕ್ತಿ ನಮ್ಮ ದೇಶ ವಿದ್ಯೆಗೆ ಬಹಳ ಪ್ರಾಮುಖ್ಯ ಕೊಟ್ಟಿದೆ ವಿದ್ಯೆ ಎನ್ನುವುದು ದೊಡ್ಡ ಆಸ್ತಿ ಎಂದು ಕಪ್ಪತ್ ಗುಡ್ಡದ ಶಿವಕುಮಾರಶ್ರೀಗಳು ಹೇಳಿದರು

ಇತ್ತೀಚಿಗೆ ಭಾಗ್ಯನಗರ ರಸ್ತೆಯ ಪಾನಗಂಟಿ ಕಲ್ಯಾಣ ಮಂಟಪದಲ್ಲಿ ಕೊಪ್ಪಳ ತಾಲೂಕ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ (ಕುಸ್ಮಾ) ಇದರ 20ನೇ ವರ್ಷದ ಸಂಭ್ರಮಚರಣೆ ಹಾಗೂ ಶಿಕ್ಷಕರ ದಿನಾಚರಣೆ ಜೊತೆಗೆ ಉತ್ತಮ ಶಿಕ್ಷಕ ಶಿಕ್ಷಕಿ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿಸಾನಿಧ್ಯವನ್ನುವಹಿಸಿಕೊಂಡು ಮಾತನಾಡುತ್ತಿದ್ದರು.

ಜ್ಞಾನವೇ ದೊಡ್ಡ ಶಕ್ತಿ. ಮಕ್ಕಳ ಬದುಕಿನಲ್ಲಿಅರಿವಿನಬೆಳಕುಬಿತ್ತುವವರು ಶಿಕ್ಷಕರು ರಾಜಕಾರಣಿಗಳು ದೇಶವನ್ನು ಕಟ್ಟುತ್ತೇವೆ ಅನ್ನಬಹುದು ಆದರೆ ನಿಜವಾಗಿ ದೇಶವನ್ನು ಕಟ್ಟುವವರು ಗುರುಗಳು. ರಾಜಕಾರಣಿಗಳು ಆಡಳಿತ ಮಾಡಬಹುದು ಅಷ್ಟೇ ಆದರೆ ನಿಜವಾಗಿ ದೇಶ ಕಟ್ಟುವ ಕೆಲಸ ಮಾಡುವವರು ಶಿಕ್ಷಕರು. ಶಿಕ್ಷಕರಿಗೆ ತಮ್ಮ ವೃತ್ತಿಯ ಬಗ್ಗೆ ಗೌರವ ಅಭಿಮಾನ ಇರಲಿ ಮಕ್ಕಳಿಗೆ ವಿದ್ಯೆ ಕಲಿಸುವುದು ಸರಳವಲ್ಲ ಅದು ಒಂದು ದೊಡ್ಡ ತಪಸ್ಸು. ಶಿಕ್ಷಕರಿಗೆ ಭಾಷೆಯ ಮೇಲೆ ಪ್ರಭುತ್ವ ಬರಲು ವ್ಯಾಕರಣ ಕಲಿಯಬೇಕು ಮತ್ತು ಮಕ್ಕಳಿಗೆ ವ್ಯಾಕರಣವನ್ನು ಕಲಿಸಬೇಕು ವಿದ್ಯೆಯಿಂದ ಬಂದ ಸೌಂದರ್ಯ ಅಪೂರ್ವದದ್ದು ಇನ್ನೊಬ್ಬರ ಕಣ್ಣೀರು ಒರೆಸುವ ಸದ್ವಿತೆಯನ್ನು ಕಲಿಸಬೇಕು ಹಿಂದಿನ ದಿನಮಾನಗಳಲ್ಲಿ ಕಣ್ಣೀರು ಒರೆಸುವ ಅಗತ್ಯ ಬಹಳ ಇದೆ. ವಿದ್ಯೆಗೆ ಗುಪ್ತ ಧನ ಎನ್ನುತ್ತಾರೆ. ಮಕ್ಕಳಿಗೆ ಅಕ್ಷರ ಕಲಿಸಿ ಆ ಅಕ್ಷರದ ಬೆಳಕಿನ ಮೂಲಕವಾಗಿ ಅರಿವಿನ ಬೆಳಕನ್ನು ನಾವು ಮಕ್ಕಳಿಗೆ ತಂದು ಕೊಡುವದಾದರೆ ಅದಕ್ಕಿಂತ ಹೆಚ್ಚಿನ ಸಾರ್ಥಕತೆ ಏನು ಇಲ್ಲ ಎಂದು ಹೇಳಿದರು. ಸರ್ವಪಲ್ಲಿರಾಧಾಕೃಷ್ಣನ್ ರವರಭಾವಚಿತ್ರಕ್ಕೆಪುಷ್ಪಾರ್ಚನೆಮಾಡಿ ಮಾತನಾಡಿದ ಶಾಸಕ ರಾಘವೇಂದ್ರ ಹಿಟ್ನಾಳ್ ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣಕ್ಕಾಗಿ ಹೆಚ್ಚು ಅನುದಾನ ಖರ್ಚು ಮಾಡಲಾಗುತ್ತಿದೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಸತತ ಪ್ರಯತ್ನ ಮಾಡುತ್ತಿದ್ದೇವೆ ಆದರೂ ಸಹ ನಮ್ಮ ಜಿಲ್ಲೆಯ ಫಲಿತಾಂಶ ನೋಡಿದರೆ ದು-ಃಖಕರ ಸಂಗತಿ ಆಗಿದೆ. ಶಿಕ್ಷಕರು ದೇಶದ ನಿರ್ಮಾಪಕರು. ಉನ್ನತ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ನಾವು ಸಾಕಷ್ಟು ಹಿಂದುಳಿದಿದ್ದೇವೆ. ಕುಸ್ಮಾ ಸಂಘಟನೆ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ನಿರಂತರವಾಗಿ ನಾವು ಸಂಘಟನೆಯ ಜೊತೆಗಿದ್ದೇವೆ ಕೆಆರ್‌ಡಿಬಿ ಸಭೆಯಲ್ಲೂ ಸಹ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ನೀಡುವ ಕುರಿತು ಅನುದಾನ ನೀಡುವ ಕುರಿತು ಚರ್ಚೆ ಮಾಡಿದ್ದೇವೆ ಇದರ ಬಗ್ಗೆ ಸಚಿವರೊಂದಿಗೆ ಹಾಗೂ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡುತ್ತೇನೆ ಖಾಸಗಿ ಅನುದಾನ ರಹಿತ ಶಾಲೆಗಳಿಗೆ ಅನುದಾನ ನೀಡಿದರೆ ಸಾಕಷ್ಟು ಶಕ್ತಿ ಬರುತ್ತದೆ ಇದಕ್ಕಾಗಿ ನಾನು ಸಹ ಒತ್ತಾಯ ಮಾಡುತ್ತೇನೆ ಎಂದು ಹೇಳಿದರು.

ಇವತ್ತು ಸರ್ಕಾರಿ ಶಾಲೆಗಳನ್ನು ಮುಚ್ಚುವಂತ ಪರಿಸ್ಥಿತಿ ಬಂದಿದೆ. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಹೈಸ್ಕೂಲ್ ಮಕ್ಕಳಿಗೆ ಓದಲು ಬರುತ್ತಿಲ್ಲ ಎನ್ನುವುದು ವಿಪರ್ಯಾಸದ ಸಂಗತಿ. ಸರ್ಕಾರಿ ಶಾಲೆಗಳ ಗುಣಮಟ್ಟ ಕಡಿಮೆಯಾಗುತ್ತಿದೆ. ಪ್ರತಿಯೊಬ್ಬ ತಂದೆ ತಾಯಿ ಮಕ್ಕಳು ಉತ್ತಮವಾದ ವಿದ್ಯೆಯನ್ನು ಪಡೆಯಲಿ ಮಾರ್ಕ್ಸ್ ಗಳಿಸಲಿ ಎಂದು ಬಯಸುತ್ತಾರೆ. ಖಾಸಗಿ ಶಾಲೆಯಲ್ಲಿ ನೀಡುವ ಉತ್ತಮ ಶಿಕ್ಷಣಕ್ಕೆ ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಖಾಸಗಿ ಶಾಲೆಯ ಆಡಳಿತ ಮಂಡಳಿಯವರು ಬಡವರ ಮಕ್ಕಳಿಗೂ ಅವಕಾಶ ನೀಡಲಿ ಎಂದು ಮುಖ್ಯ ಅತಿಥಿಯಾಗಿದ್ದ ವಿಧಾನ ಪರಿಷತ್ ಸದಸ್ಯ ಹೇಮಲತಾ ನಾಯಕ್ ಹೇಳಿದರು

ಈಶ್ವರಿ ಬ್ರಹ್ಮಕುಮಾರಿಯ ಯೋಗಿನಿ ಅಕ್ಕ ಹಾಗೂ ಜಬೀವುಲ್ಲಾ ಜಾವೇದ್ ವಿಶೇಷ ಉಪನ್ಯಾಸ ನೀಡಿದರು. . ಇದೇ ಸಂದರ್ಭದಲ್ಲಿ ಉತ್ತಮ ಶಿಕ್ಷಕ ಹಾಗೂ ಶಿಕ್ಷಕಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ವಿಶೇಷಸಾಧನೆಗೈದ ಆಕ್ಸಫರ್ಡ ಶಾಲೆಯ ಸುಮನ್ ಹಾಗೂ ಜ್ಞಾನ ಗಂಗೋತ್ರಿ ಶಾಲೆಯ ಶಾಲೆಯ ಶರಣಪ್ಪ ಮಾಮನಿವರಿಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ್ ಗುಪ್ತ ,ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್‌ರೇಣುಕಾ ಏಜೆನ್ಸಿಯ ಪ್ರವೀಣ, ಮಾಜಿ ಅಧ್ಯಕ್ಷ ಅಲೀಮುದ್ದಿನ್, ಆಕ್ಸಪರ್ಡ ಸಂಸ್ಥೆಯ ಸುಮನ್, ತಾಲೂಕ ಕಾರ್ಯದರ್ಶಿ ನಾಗರಾಜ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು , ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಸ್ಮಾ ಗೌರವಾಧ್ಯಕ್ಷ ರಾಘವೇಂದ್ರ ಪಾನಘಂಟೆ ವಹಿಸಿದ್ದರು. ತಾಲೂಕ ಅಧ್ಯಕ್ಷ ಶಾಹಿದ್ ತಹಸಿಲ್ದಾರ್ ಉಪಸ್ಥಿತರಿದ್ದರು. ಸುರೇಶ ಕುಂಬಾರ್,ಮುಲ್ಲಾರ್ ಕಾರ್ಯಕ್ರಮ ನಿರೂಪಿಸಿದರು.

## ದಸರಾ ಧರ್ಮ ಸಮ್ಮೇಳನದ ಭಿತ್ತಿ ಪತ್ರ ಬಿಡುಗಡೆ.



**ಮಲ್ಲಮ್ಮ ನುಡಿ ವಾರ್ತೆ**

**ಬಸವಕಲ್ಯಾಣ :**

ಸೆ 9-ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ನೇತೃತ್ವದಲ್ಲಿ ಬರುವ ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 2 ರವರೆಗೆ ನಡೆಯುವ ದಸರಾ ಧರ್ಮ ಸಮ್ಮೇಳನದ ಭಿತ್ತಿ ಪತ್ರ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಸ್ವಾಗತ ಸಮಿತಿಯ ಮಾರ್ಗದರ್ಶಕರಾದ ತಡೋಳಾ ಮೇಕರದ ಪೂಜ್ಯ ಶ್ರೀ ರಾಜೇಶ್ವರ ಶಿವಾಚಾರ್ಯರು .ತ್ರಿಪುರಾಂತಿನ ಗವಿಮಠದ ಪೂಜ್ಯಶ್ರೀ ಡಾ. ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು. ಸಮಿತಿಯ ಕಾರ್ಯಾಧ್ಯಕ್ಷರಾದ ಶಾಸಕ ಶರಣು ಸಲಗರ್. ಅವರು ಭಿತ್ತಿಪತ್ರ ಬಿಡುಗಡೆಗೊಳಿಸಿದರು. ಈ ವೇಳೆ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷರಾದ ಬಸವರಾಜ ಕೊರಕೆ. ಹಾಗೂ ಡಾ. ಜಿ.ಎಸ್.ಭುರಳೆ. ಸುನೀಲ ಪಾಟೀಲ. ಮಲ್ಲಯ್ಯ ಹಿರೇಮಠ. ದಯಾನಂದ ಶೀಲವಂತ. ಸೂರ್ಯಕಾಂತ ಶೀಲವಂತ. ವೀರಣ್ಣ ಶೀಲವಂತ. ರೇವಣಸಿದ್ದಯ ಹೀರೆಮಠ. ಚಂದ್ರಶೇಖರ ಪಾಟೀಲ. ಪ್ರೊ. ರುದ್ರೇಶ ಸ್ವಾಮಿ ಗೋರ್ಟಾ. ಸಿದ್ದು ಬಿರಾದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಹಾರಕೂಡ ಶ್ರೀ ಮಠದಲ್ಲಿ ಪೂರ್ವ ಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ

:- ಸೆ 9 ತಾಲೂಕಿನ ಸಿರಗಾಪೂರ ಗ್ರಾಮದಲ್ಲಿ ನವೆಂಬರ್ 2ರಂದು ಹಾರಕೂಡ ಶ್ರೀಗಳ 63ನೇ ಹುಟ್ಟುಹಬ್ಬ ಜರುಗಲಿದ್ದ, ಕಾರ್ಯಕ್ರಮದ ಸಿದ್ಧತೆ ಪ್ರಯುಕ್ತ ಹಾರಕೂಡ ಶ್ರೀಮಠದಲ್ಲಿ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ಮಾರ್ಗದರ್ಶನದಲ್ಲಿ ಪೂರ್ವಭಾವಿ ಸಭೆ ಜರುಗಿ-ತು. ಈ ಸಂದರ್ಭದಲ್ಲಿ

ರಾಜಕುಮಾರ ಬಿರಾದಾರ, ಶಂಭುಲಿಂಗಯ್ಯ ಮಠಪತಿ, ಬಸವರಾಜ ಪೊಲೀಸ್ ಪಾಟೀಲ, ಸೋಮನಾಥ ಮೂಲಗೆ, ಮಹಾಂತಪ್ಪ . ರಾಜಕುಮಾರ್ ಬಿರಾದಾರ್,ಶಂಭುಲಿಂಗಯ್ಯ ಮಠಪತಿ,ಬಸವರಾಜ ಪೊಲೀಸ್ ಪಾಟೀಲ್,ಸೋಮನಾಥ ಮೂಲೆಗೆ, ಮಹಾಂತಪ್ಪ ಶ್ರೀಚಠದ,ರಾಜಕುಮಾರ್ ಯಾಚೆ, ಶುಭಾಷ ಯಾಚೆ, ಶರಣಬಸಪ್ಪ ಮುಡಬೆ , ಶರಣಬಸಪ್ಪ ಮುಡಬೆ ಸೇರಿದಂತೆ ಸಿರಗಾಪೂರ ಗ್ರಾಮದ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು.

## ಒಳ ಮೀಸಲಾತಿ ಸಮೀಕ್ಷೆ ಅವೈಜ್ಞಾನಿಕ, ಕಾನೂನು ಬಾಹಿರ : ಸುರೇಶ್ ಬಳೂಟಗಿ ಆರೋಪ!

**ಮಲ್ಲಮ್ಮ ನುಡಿವಾರ್ತೆ**

**ಕೊಪ್ಪಳ :**




ರಾಜ್ಯ ಸರ್ಕಾರವು ಒಳಮೀಸಲಾತಿ ವರ್ಗೀಕರಣವನ್ನು ನೈಜತೆಯ ಆದಾರದ ಮೇಲೆ ಮಾಡಿರುವುದಿಲ್ಲ. ಇದು ಅವೈಜ್ಞಾಕ ಕಾನೂನು ಬಾಹಿರವಾಗಿರುವ ತೀರ್ಮಾನವಾಗಿದೆ. ಇದರಿಂದ ಬಂಜಾರ ಕೊರಮ ಕೊರಚ ಬೋವಿ ಸಮುದಾಯಗಳಿಗೆ ಘೋರ ಅನ್ಯಾಯವಾಗಲಿದೆ ಎಂದು ಗೋರ್ ಸೇನಾ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯಧರ್ಶಿ ಸುರೇಶ್ ಬಳೂಟಗಿ ಆರೋಪಿಸಿದರು.

ಈ ವೇಳೆಯಲ್ಲಿ ಬಂಜಾರರ ಸಾಂಪ್ರದಾಯಿಕ ಉಡುಗೆತುಡಿಗಳನ್ನು ತೊಟ್ಟು ಕುಲ ಕಸುಬು ಕಟ್ಟಿಗೆ ಮಾರುವುದರ ವೇಶಧರಿಸಿ ಜೊತೆಗೆ ಬಹಳ ವಿಭಿನ್ನವಾಗಿ ಯುವಕರು ತಮ್ಮ ತಲೆ ಕೂದಲನ್ನು ಬೋಳಿಸುವ ಮುಖಾಂತರ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ಹೊರಹಾಕಿದರು.

ಇಂದು ಕುಕನೂರು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ರ್ಯಾಲಿ ಹಮ್ಮಿಕೊಂಡಿದ್ದರು, ಈ ಕುರಿತು ಮಾತನಾಡಿದ ಅವರು,'ಕೊಲಂಬೋ (ಕೊರಮ,ಕೊರಚ,ಲಂಬಾಣಿ, ಭೋವಿ) ಸಮುದಾಯಗಳ ಜನಸಂಖ್ಯೆಯು ಹೆಚ್ಚಾಗಿದ್ದು, ಈ ಸಮುದಾಯವು ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ & ಉದ್ಯೋಗಿಕ ಸೌಲಭ್ಯಗಳಿಂದ ಈಗಾಗಲೇ ವಂಚಿತವಾಗಿದೆ.

ನ್ಯಾ. ನಾಗಮೋಹನದಾಸ್ ಆಯೋಗವು ಪರಿಶಿಷ್ಠ ಜಾತಿಗಳ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಲಂಬಾಣಿ ಸಮುದಾಯದ ಜನರು ಗೋವಾ,ಕೇರಳ,ಆಂಧ್ರ,ಮಹಾರಾಷ್ಟ್ರ ರಾಜ್ಯಗಳಿಗೆ ಹೊಟ್ಟೆಪಾಡಿಗಾಗಿ ವಲಸ ಹೋಗಿದ್ದರು ಅವರು ಈ ಸಮೀಕ್ಷೆಯಿಂದ ಹೊರ ಉಳಿದಿದ್ದಾರೆ ಎಂದರು.

ಈ ಸಮೀಕ್ಷೆ ಮಾಡುವ ಸಂಧರ್ಭದಲ್ಲಿ ಉಪಜಾತಿ ಕಾಲಂ ನಲ್ಲಿ ಬಂಜಾರ' ಕೊರಮ ಕೊರಚ ಬೋವಿ ಸಮುದಾಯಗಳ ಜಾತಿಯನ್ನು ಸರಿಯಾಗಿ ನಮೂದಿಸಿರುವುದಿಲ್ಲ. ಕೊಲಂಬೋ ವಾಸಿಸುವ ಕೆಲವೊಂದು ಕಡೆ ಆದಿ ಆಂಧ್ರ ಆದಿ ದ್ರಾವಿಡ ಆದಿ ಕರ್ನಾಟಕ ಎಂದು ತಪ್ಪಾಗಿ ನಮೂದಿಸಲಾಗಿದೆ.ಹೀಗೆ ವಿವಿಧರೀತಿಯ ಧೋರಣೆಗಳಿಂದ ಈ ಸಮೀಕ್ಷೆಯಲ್ಲಿ ನಮಗೆ ಅನ್ಯಾಯ ಮಾಡಲಾಗಿದೆ. ಪರಿಶಿಷ್ಟ ಜಾತಿಗಳಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಉದ್ಯೋಗಿಕ, ರಾಜಕೀಯವಾಗಿ ಕಡಿಮೆ ಸೌಲಭ್ಯ ತೆಗೆದುಕೊಂಡಿರುವುದು ಕೊಲಂಬೋ ಸಮುದಾಯಗಳು ಆದರೂ ಹೆಚ್ಚಿನ ಸೌಲಭ್ಯ ಪಡೆದಿರುತ್ತಾರೆ ಎಂದು ಪೂರ್ವಪೀಡಿತರಾಗಿ ತಿಳಿಸಿರುತ್ತಾರೆ ಎಂದು ತಿಳಿಸಿದರು.

ಈ ಹಿಂದಿನ ಸರ್ಕಾರವು ಸಚಿವ ಸಂಪುಟದಲ್ಲಿ ನಮಗೆ(ಕೊಲಂಬೋ) 4.5 ಒಳ ಮೀಸಲಾತಿಯನ್ನು ನೀಡುವುದಾಗಿ ತೀರ್ಮಾನಿಸಿ ಅದನ್ನು ಅಂಗೀಕಾರ ಮಾಡಿತ್ತು. ಅಂದಿನ ಸಂಧರ್ಬದಲ್ಲಿ ನಮ್ಮ ಸಮುದಾಯಗಳಿಗೆ ಅನ್ಯಾಯವಾಗುತ್ತದೆ ಎಂದು ಅದನ್ನು ತಿರಸ್ಕರಿಸಿದವು. ಆದರೆ ಈಗ ನಾಗಮೋಹನ್ ದಾಸ್ ವರದಿಯು ಬಂಜಾರ ಲಂಬಾಣಿ ಕೊರಮ ಕೊರಚ ಬೋವಿ ಸಮುದಾಯಗಳಿಗೆ 4 ಒಳಮೀಸಲಾತಿ ನೀಡಬೇಕೆಂದು ಹೇಳಿದೆ ಇದು ಯಾವ ನ್ಯಾಯ? ಸರ್ಕಾರವು ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ ತೀರ್ಮಾನ, ಕರಡು ಅಧಿಸೂಚನೆ ಹಾಗೂ ನಾಗಮೋಹನದಾಸ್ ವರದಿ ಎರಡು ಬಿನ್ನವಾಗಿವೆ.

ಸರಿಯಾದ ಮಾರ್ಗ ಅನುಸರಿಸದೆ ವೈಜ್ಞಾನಿಕವಾಗಿ ಸಮೀಕ್ಷೆ ಮಾಡದೆ ದತ್ತಾಂಶಗಳನ್ನು ಕ್ರೋಡೀಕರಿಸಿ ಸಿದ್ಧಪಡಿಸಿರುವ ಈ ವರದಿಯನ್ನು ಅಂಗೀಕರಿಸಬಾರದು. ಮತ್ತೊಮ್ಮೆ ನೈಜತೆಯಿಂದಿರುವ ದತ್ತಾಂಶಗಳನ್ನು ಸಮೀಕ್ಷಯ ಮೂಲಕ ಕ್ರೋಡೀಕರಿಸಲು ಆಯೋಗಕ್ಕೆ ಸೂಚಿಸಬೇಕು. ಇಲ್ಲವಾದಲ್ಲಿ ಕೇಂದ್ರಸರ್ಕಾರವು ಮುಂದಿನ ದಿನಗಳಲ್ಲಿ ಮಾಡುವ ಜನಸಂಖ್ಯೆ ಹಾಗೂ ಜಾತಿಗಣತಿಯನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯಸರ್ಕಾರವೂ ಸಚಿವಸಂಪುಟದಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಕೈ ಬಿಡಬೇಕು. ಸಚಿವ ಸಂಪುಟದ ಒಳಮೀಸಲಾತಿಯವರ್ಗೀಕರಣದ ಕರಡು ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು. ಒಳಮೀಸಲಾತಿಯ ವೈಜ್ಞಾನಿಕ ವರ್ಗೀಕರಣ ಮಾಡುವುದಾದರೆ ಎಲ್ಲರಿಗೂ ಸಮಪಾಲು ನೀಡುವ ಮೂಲಕ ಬಂಜಾರ ಕೊರಮ ಕೊರಚ ಬೋವಿ ಸಮುದಾಯಗಳಿಗೆ 5 ಮೀಸಲಾತಿಯ ಪ್ರಮಾಣವನ್ನು ನೀಡಬೇಕು.

ಈ ವೇಳೆ ತಹಶೀಲ್ದಾರ್ ಹೆಚ್ ಪ್ರಾಣೇಶ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಲಂಬಾಣಿಗರ ನಂಗಾರ,ವಾಜಾ ಅಂದರೆ ಭಜನೆ ಮಾಡುತ್ತಾ ತಮ್ಮ ಕುಲಕಸಬು ಕಟ್ಟಿಗೆ ಮಾರುವು ರೀತಿಯಲ್ಲಿ ವೇಶಧರಿಸಿ ಬಹಳ ವಿಶಿಷ್ಟವಾಗಿ ಪ್ರತಿಭಟನೆ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮೇಘರಾಜ್ ಬಳಗೇರಿ, ಬಸವರಾಜ ನಾಯ್ಕ್, ಜೀತು ನಾಯ್ಕ್, ಹಂಪಣ್ಣ ಕಟ್ಟಿಮನಿ, ಯಮನೂರಪ್ಪ ಕಟ್ಟಮನಿ, ಯಲ್ಲಪ್ಪ ಕಾರಭಾರಿ, ಯಮನೂರಪ್ಪ ಭಾನಾಪೂರ್, ಪರಸಪ್ಪ ಕಾರಭಾರಿ, ತುಕಾರಂ ಹೊನ್ನುಂಚಿ, ಸೋಮಪ್ಪ ಚಿಕೇನಕೊಪ್ಪ, ಕಳಕೇಶ್ ನಾಯ್ಕ್, ಮಹಿಳಾ ಮುಖಂಡರಾದ ದೇವವ್ವ ಕಟ್ಟಿಮನಿ, ಶಿವವ್ವ ಭಾನಾಪುರ, ಲಕ್ಷ್ಮವ್ವ ಬಳಗೇರಿ,ಸೋನವ್ವ ಚಿಕೆನಕೊಪ್ಪ, ಹಾಗೂ ಶ್ರೀಕಾಂತ್ ಕಟ್ಟಿಮನಿ, ರಾಘವೇಂದ್ರ ಬಳಗೇರಿ, ಪ್ರಕಾಶ್ ಬಳಗೇರಿ , ಹೋಬಣ್ಣ ಚವ್ಹಾಣ, ಬಸುವರೆಡ್ಡೆಪ್ಪ ಬಳಗೇರಿ,ಹನುಮಂತಪ್ಪ ಚವ್ಹಾಣ, ಕಲ್ಲಪ್ಪ ಕಟ್ಟಿಮನಿ, ತಿರುಪತಿ ಕಟ್ಟಿಮನಿ, ಕುಮಾರ್ ಬಳಗೇರಿ ಇನ್ನು ಸಮಾಜ ಮುಖಂಡರು ಹಾಗೂ ಕೊಲಂಭೋ ಸಮಾಜದ ಮುಖಂಡರು ಭಾಗವಹಿಸಿದ್ದರು.

# ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿ ಕುರಿತಂತೆ ನಿಖರ ಮಾಹಿತಿ ಸಂಗ್ರಹಿಸಿ, ಪುನರ್ವಸತಿ ಕಲ್ಪಿಸಲು ಸಮೀಕ್ಷೆ



ಮಲ್ಲಮ್ಮನುಡಿ ವಾರ್ತೆಯಾದಗಿರಿ: ಸೆ09: ಮೊದಲ ಬಾರಿಗೆ ರಾಜ್ಯಾದ್ಯಂತ ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ ಹಾಗೂ ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆಯನ್ನು ಅವರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿ ಕುರಿತಂತೆ ನಿಖರ ಮಾಹಿತಿ ಸಂಗ್ರಹಿಸಿ, ಪುನರ್ವಸತಿ ಕಲ್ಪಿಸಲು ಸಮೀಕ್ಷೆಗಳನ್ನು ನಡೆಸಲಾಗುವುದು ಎಂದು ಯಾದಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಹೇಳಿದರು. ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ ಹಾಗೂ ಮಾಜಿ ದೇವದಾಸಿಯರ ಮರು ಸಮೀಕ್ಷೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೂಲ ಹಂತದ ಸಮೀಕ್ಷೆ ಹಾಗೂ ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆಯನ್ನು ಅವರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿ ಕುರಿತಂತೆ ನಿಖರ ಮಾಹಿತಿ ಸಂಗ್ರಹಿಸಿ, ಪುನರ್ವಸತಿ ಕಲ್ಪಿಸಲು ಸಮೀಕ್ಷೆಗಳನ್ನು ರಾಜ್ಯದ ಎಲ್ಲಾ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳು ಮತ್ತು ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ತಿಪ್ಪಣ್ಣ ಶಿರಸಗಿ ಅವರು ಮಾತನಾಡಿ, ಸಮೀಕ್ಷೆ ಕಾರ್ಯ ಕೈಗೊಳ್ಳಲು ಈಗಾಗಲೇ ಪೂರ್ವ ತಯಾರಿ ಮಾಡಿಕೊಂಡಿದ್ದು, ಒಂಭುಟಜ ೦ಠಿಠಿ ಮೂಲಕ ಟ್ರಾನ್ಸ್‌ಜೆಂಡರ್ಸ್ ಸಮೀಕ್ಷೆಗೆ "KARMANI Web Application"ಅನ್ನು ಸಿದ್ಧಪಡಿಸಿದ್ದು, ಹಾಗೂ ಮಾಜಿ ದೇವದಾಸಿ ಮಹಿಳೆಯರ ಮರುಸಮೀಕ್ಷೆಗೆ ಸೇವಾ ಸಿಂಧು ಮೂಲಕ "ಮಾಜಿ ದೇವದಾಸಿ ಮಹಿಳೆಯರ ಮರುಸಮೀಕ್ಷೆ ತಿಜಭ applicationಅನ್ನು ಸಿದ್ಧಪಡಿಸಿದ್ದು, ತನ್ಮೂಲಕ ಪ್ರತ್ಯೇಕವಾಗಿ ಎರಡು ಸಮೀಕ್ಷೆಗಳನ್ನು ಕೈಗೊಳ್ಳಲಾಗುತ್ತದೆ, ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳೊಂದಿಗೆ, ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆಯನ್ನು ರಾಜ್ಯದ ಎಲ್ಲಾ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳು ಮತ್ತು ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತದೆ ಹಾಗೂ ಮಾಜಿ ದೇವದಾಸಿ ಮಹಿಳೆಯರ ಮರುಸಮೀಕ್ಷೆಯನ್ನು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ನಡೆಸಲಾಗುತ್ತದೆ ಎಂದರು. ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ ಹಾಗೂ ಮಾಜಿ ದೇವದಾಸಿಯರ ಮರು ಸಮೀಕ್ಷೆ ಕಾರ್ಯಗಳು ಜಿಲ್ಲೆಯಾದ್ಯಂತ 2025ರ ಸೆಪ್ಟೆಂಬರ್ 15 ರಂದು ಪ್ರಾರಂಭವಾಗುತ್ತಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಯಾದಗಿರಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮರಿಯಪ್ಪ, ನಗರಸಭೆ ಅಧ್ಯಕ್ಷ ಲಲಿತಾ ಅನಪೂರ, ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಧರಣೇಶ್, ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ, ಯಾದಗಿರಿ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವೆಂಕಟೇಶ್ ಚಟ್ನಳ್ಳಿ, ಮಕ್ಕಳ ರಕ್ಷಣಾ ಸಮಿತಿ ಅಧ್ಯಕ್ಷ ದಿನೇಶ್ ಕುಮಾರ, ಯಾದಗಿರಿ ಜಿಲ್ಲಾ ಮಕ್ಕಳ ರಕ್ಷಣ ಘಟಕ, ಜಿಲ್ಲಾ ಮಕ್ಕಳಾ ರಕ್ಷಣಾಧಿಕಾರಿ, ಅಭಿವೃದ್ಧಿ ನಿರೀಕ್ಷಕರು, ಯಾದಗಿರಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಟ್ರಾನ್ಸ್ ಜೆಂಡರ್ ಸಮುದಾಯ ಪ್ರತಿನಿಧಿಗಳಾದ ಶ್ರೀಮತಿ ಎಸ್. ಆರ್.ನಾಯಕ, ಕು.ಪ್ರಿಯಾಂಕ ಇನ್ನಿತರರು, ಮಾಜಿ ದೇವದಾಸಿ ತಾಯಂದಿರು ಉಪಸ್ಥಿತರಿದ್ದರು.

## ಎಮ್.ಡಿ.ಆರ್.ಎಸ್ ಲಿಂಗೇರಿ ಸ್ಟೇಶನ್ ಶಾಲೆಯಲ್ಲಿ "ಆವಿಷ್ಕಾರ ಮೇಳ"



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಸೆ.9:ಇಂದು ಕೋರ್ ವಿಜ್ಞಾನ ಚಟುವಟಿಕಾ ಕೇಂದ್ರ, ಯಾದಗಿರಿ ಅವರ ಮಾರ್ಗದರ್ಶನದಲ್ಲಿ ಎಮ್.ಡಿ.ಆರ್.ಎಸ್ ಲಿಂಗೇರಿ ಸ್ಟೇಶನ್ ಶಾಲೆಯಲ್ಲಿ ವಿಜ್ಞಾನ ಆಧಾರಿತ "ಆವಿಷ್ಕಾರ ಮೇಳ"ವನ್ನು ವಿಜ್ಞಾನದ ನವೋದ್ಯಮ ಬೆಳೆಸುವ ಉದ್ದೇಶದಿಂದ ಯಶಸ್ವಿಯಾಗಿ ನೆರವೇರಿಸಲಾಯಿತು.

ಈ ಮೇಳದಲ್ಲಿ ವಿದ್ಯಾರ್ಥಿಗಳು ತಮ್ಮ ಸ್ವಂತ ಕಲ್ಪನೆಗಳಿಂದ ತಯಾರಿಸಿದ ವೈಜ್ಞಾನಿಕ ಮಾದರಿಗಳು, ಚಿತ್ರಣಗಳು ಹಾಗೂ ವಿಭಿನ್ನ ಸೃಜನಾತ್ಮಕ ಕೃತಿಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಪ್ರತಿ ಗುಂಪಿನ ವಿದ್ಯಾರ್ಥಿಗಳು ತಾವು ತಯಾರಿಸಿದ ಕೆಲಸಗಳ ಬಗ್ಗೆ ವಿವರಣೆ ನೀಡಿದ್ದು, ಅದು ಅವರಿಗೆ ಆತ್ಮವಿಶ್ವಾಸ ಹಾಗೂ ಪ್ರಸ್ತುತಿಕರಣ ಕೌಶಲ್ಯವನ್ನು ಹೆಚ್ಚಿಸಲು ನೆರವಾಯಿತು.

ಶಿಕ್ಷಕರು ಮಕ್ಕಳ ಪ್ರಸ್ತುತಿಗಳನ್ನು ಆತ್ಮೀಯವಾಗಿ ವೀಕ್ಷಿಸಿ, ಅವರ ಸೃಜನಶೀಲತೆ, ವೈಜ್ಞಾನಿಕ ಚಿಂತನೆ ಮತ್ತು ಪರಿಶ್ರಮವನ್ನು ಮೆಚ್ಚಿದರು. ಇದೇ ವೇಳೆ, ವಿದ್ಯಾರ್ಥಿಗಳ ಹೊಸ ಆಲೋಚನೆಗಳನ್ನು ಗುರುತಿಸಿ ಅವರ ಭವಿಷ್ಯದ ಬೆಳವಣಿಗೆಗೆ ಶುಭ ಹಾರೈಸಲಾಯಿತು.

ಈ ರೀತಿಯ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮನೋಭಾವ, ವಿಶ್ಲೇಷಣಾತ್ಮಕ ಚಿಂತನೆ ಮತ್ತು ಹೊಸ ಆವಿಷ್ಕಾರ ಸಾಮರ್ಥ್ಯಗಳನ್ನು ಬೆಳೆಸಲು ಅತ್ಯಂತ ಸಹಾಯಕವಾಗುತ್ತವೆ ಎಂಬ ಅಭಿಪ್ರಾಯವನ್ನು ಶಿಕ್ಷಕರು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉತ್ಸಾಹದಿಂದ ಭಾಗವಹಿಸಿ ಮಕ್ಕಳ ಪ್ರತಿಭೆಗೆ ಸಾಕ್ಷಿಯಾಗಿದ್ದರು. ಈ ಯಶಸ್ವಿ ಕಾರ್ಯಕ್ರಮವನ್ನು ಕೋರ್ ವಿಜ್ಞಾನ ಚಟುವಟಿಕಾ ಕೇಂದ್ರದ ಮಾರ್ಗದರ್ಶಕ ಸಂಜು ಅವರ ಸಹಕಾರದಿಂದ ಸಂಭ್ರಮದಿಂದ ನೆರವೇರಿಸಲಾಯಿತು.

## ಮಹತ್ವಕಾಂಕ್ಷಿ ಯೋಜನೆ ಜ್ಞಾನಸೇತು ಕಾರ್ಯಕ್ರಮಕ್ಕೆ ರಾಯಚೂರಿನಲ್ಲಿ ಚಾಲನೆ



ಮಲ್ಲಮ್ಮ ನುಡಿ ವಾರ್ತೆ ರಾಯಚೂರು ಸೆ 09: ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ಸರ್ಕಾರದ ಮಹತ್ವಕಾಂಕ್ಷಿ ಯೋಜನೆ ಜ್ಞಾನಸೇತು ಕಾರ್ಯಕ್ರಮಕ್ಕೆ ಯರಮರಸ್ ಡಯಟ್ ಪ್ರಾಚಾರ್ಯರಾದ ಚಂದ್ರಶೇಖರ್ ಭಂಡಾರಿ ಅವರು ಇತ್ತೀಚೆಗೆ ಚಾಲನೆ ನೀಡಿದರು.

ಶಾಲಾ ಶಿಕ್ಷಣ ( ಪದವಿ ಪೂರ್ವ ) ರಾಯಚೂರು ಹಾಗೂ ಡಯಟ್ ಯರಮರಸ್ ಇವರ ಸಹಯೋಗದಲ್ಲಿ ಪದವಿ ಪೂರ್ವ ಉಪನ್ಯಾಸಕರಿಗೆ ನಡೆದ ಈ ಕಾರ್ಯಕ್ರಮದಲ್ಲಿ ಪಿಯುಸಿ ಪ್ರಥಮ ವರ್ಷ ಹಾಗೂ ದ್ವಿತೀಯ ವರ್ಷದ ಭೌತಶಾಸ್ತ್ರ ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಗಣಕ ವಿಜ್ಞಾನ, ಇಂಗ್ಲೀಷ್, ಅರ್ಥಶಾಸ್ತ್ರ ಈ ಏಳು ವಿಷಯಗಳ 150 ವಿಷಯ ಉಪನ್ಯಾಸಕರು ಹಾಜರಿದ್ದರು.

ಈ ವೇಳೆ ಚಂದ್ರಶೇಖರ್ ಭಂಡಾರಿ ಅವರು ಮಾತನಾಡಿ, ಜ್ಞಾನಸೇತು ಎನ್ನುವುದು ಅಂತಾರಾಷ್ಟ್ರೀಯ ಖ್ಯಾತಿಯ ತರಬೇತಿ ಸಂಸ್ಥೆ ಖಾನ್ ಅಕಾಡೆಮಿಯಿಂದ ಪಠ್ಯಕ್ರಮ ಆಧರಿತ ಕಠಿಣ ವಿಷಯಗಳಲ್ಲಿ ಡಿಜಿಟಲ್ ಕಲಿಕಾ ಮಾಧ್ಯಮ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಉಪಯುಕ್ತವಾಗಿದ್ದು, ಇದರ ಪ್ರಯೋಜನ ಪಡೆದು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸೋಮಶೇಖರ ಹೊಕ್ರಾಣಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕಡ್ಡಾಯವಾಗಿ ಜ್ಞಾನಸೇತು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕು. ಯಾವುದೇ ರೀತಿಯ ಲೋಪ ಆಗದಂತೆ ಯಶಸ್ವಿಗೊಳಿಸಲು ಉಪನ್ಯಾಸಕರಿಗೆ ಸೂಚಿಸಿದರು.

ಜ್ಞಾನ ಸೇತು ಕಾರ್ಯಕ್ರಮದ ಜಿಲ್ಲಾ ನೋಡಲ್ ಅಧಿಕಾರಿಗಳು ಆಗಿರುವ ಡಯಟ್ ಯರಮರಸ್‌ನ ಉಪನ್ಯಾಸಕರಾದ ಸುಖದೇವ ಅವರು ಕಾರ್ಯಕ್ರಮದ ರೂಪರೇಷೆಗಳ ಬಗ್ಗೆ ತಿಳಿಸಿದರು.

ಡಯಟ್ ಯರಮರಸ್‌ನ ಹಿರಿಯ ಉಪನ್ಯಾಸಕರಾದ ಮಲ್ಲಿಕಾರ್ಜುನ್ ಅವರು ಉಪನ್ಯಾಸಕರನ್ನುದ್ದೇಶಿಸಿ ಮಾರ್ಗದರ್ಶನ ನೀಡಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು ಮತ್ತು ನೋಡಲ್ ಅಧಿಕಾರಿಗಳಾದ

ಡಾ.ರವೀಂದ್ರ ಬಂಡಿ

ಅವರು ಪ್ರಾಸ್ತಾವಿಕ ಮಾತನಾಡಿದರು.

ಹಿರಿಯ ಪ್ರಾಂಶುಪಾಲರಾದ ಡಾ.ಕುಂಟೆಪ್ಪ, ಗೌರಿಪುರ ಕಾಲೇಜಿನ ಪ್ರಾಂಶುಪಾಲರಾದ ಚನ್ನಬಸಪ್ಪ, ಸಂಪನ್ಮೂಲ ವ್ಯಕ್ತಿಗಳಾದ ಸಿದ್ದನಗೌಡ, ಲಕ್ಷ್ಮಣ್, ಶರಣಮ್ಮ, ಕವಿತಾ ಉಪಸ್ಥಿತರಿದ್ದರು. ಉಪನ್ಯಾಸಕರಾದ ರಾಮಕೃಷ್ಣ ಕೆ.ವಿ. ಸ್ವಾಗತಿಸಿದರು. ಉಪನ್ಯಾಸಕ ರಾಜಕುಮಾರ ಶೆಟ್ಟಿ ವಂದಿಸಿದರು.

## ಪ್ರಜಾಪ್ರಭುತ್ವ ದಿನಾಚರಣೆ ನಿಮಿತ್ಯ ವಿವಿಧ ಸ್ಪರ್ಧೆಗಳ ಆಯೋಜನೆ:ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಬೀದರ,ಸೆ.09: ಇದೇ ಸೆಪ್ಟೆಂಬರ್.15 ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮ ಅಂಗವಾಗಿ ಶಾಲಾ ಕಾಲೇಜು ಮಕ್ಕಳಲ್ಲಿ ಹಾಗೂ ಜನಸಾಮಾನ್ಯರಲ್ಲಿ ಜಾಗೃತಿ ಉಂಟು ಮಾಡುವ ದಿಸೆಯಿಂದ ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬೀದರ ಜಿಲ್ಲೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಫೋಟೊಗ್ರಾಫಿ ಸ್ಪರ್ಧೆ ಹಾಗೂ ಸೈಕ್ಲಿಂಗ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾಪ್ರಭುತ್ವದ ಆಶಯಗಳನ್ನು ಗೌರವಿಸುವ ಸಲುವಾಗಿ ಜಾಗತಿಕವಾಗಿ ಪ್ರತಿವರ್ಷ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಣೆ ಮಾಡಲಾಗುತ್ತಿದೆ. ಪ್ರಜಾಪ್ರಭುತ್ವದ ಆಶಯಗಳ ರಕ್ಷಣೆ, ಆದರ್ಶಗಳನ್ನು ಪಾಲನೆ ಮಾಡುವುದು. ಸಧ್ಯದ ವಾಸ್ತವಿಕತೆಯನ್ನು ಸೂಕ್ಷ್ಮವಾಗಿ ಗಮನಿಸಿ ದೇಶದ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ಘನ ಸರ್ಕಾರದ ನಿರ್ದೇಶನದನ್ವಯ ಪ್ರಜಾಪ್ರಭುತ್ವ ದಿನದ ಆಶಯ ಜನಮಾನಸಕ್ಕೆ ತಲುಪಿಸಲು ಈ ಸ್ಪರ್ಧೆಗಳ ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಸ್ಪರ್ಧೆಗಳ ವಿವರ: ಸೆಪ್ಟೆಂಬರ್.10 ರಂದು ತಾಲ್ಲೂಕು ಮಟ್ಟದಲ್ಲಿ ಹಾಗೂ ಸೆಪ್ಟೆಂಬರ್.11 ರಂದು (ವಿಷಯ: ಪ್ರಜಾಪ್ರಭುತ್ವದಲ್ಲಿ ಮತದಾನದ ಪಾತ್ರ) ಜಿಲ್ಲಾ ಮಟ್ಟದಲ್ಲಿ ಚಿತ್ರಕಲಾ ಸ್ಪರ್ಧೆಯನ್ನು 2 ವಿಭಾಗಗಳಲ್ಲಿ ನಡೆಯಲಿದೆ. (6ನೇ ತರಗತಿಯಿಂದ 10ನೇ ತರಗತಿ ವರೆಗೆ ಮತ್ತು ಪಿಯುಸಿ ಯಿಂದ ಪದವಿ/ಸ್ನಾತಕೋತ್ತರ ಪದವಿ ವರೆಗೆ) ಬೀದರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿರುತ್ತದೆ.

ಸೆಪ್ಟೆಂಬರ್.10 ರಂದು ತಾಲ್ಲೂಕು ಮಟ್ಟದಲ್ಲಿ ಹಾಗೂ ಸೆಪ್ಟೆಂಬರ್.11 ರಂದು (ವಿಷಯ: ಪ್ರಜಾಪ್ರಭುತ್ವದಲ್ಲಿ ಮತದಾನದ ಪಾತ್ರ) ಜಿಲ್ಲಾ ಮಟ್ಟದಲ್ಲಿ ಪ್ರಬಂಧ ಸ್ಪರ್ಧೆಯನ್ನು 2 ವಿಭಾಗಗಳಲ್ಲಿ ನಡೆಸುವುದು. (6ನೇ ತರಗತಿಯಿಂದ 10ನೇ ತರಗತಿ ವರೆಗೆ ಮತ್ತು ಪಿಯುಸಿ ಯಿಂದ ಪದವಿ/ಸ್ನಾತಕೋತ್ತರ ಪದವಿ ವರೆಗೆ). ಹಾಗೂ ಭಾಷಣ ಸ್ಪರ್ಧೆಯನ್ನು (ವಿಷಯ: ಪ್ರಜಾಪ್ರಭುತ್ವದಲ್ಲಿ ಮತದಾನದ ಪಾತ್ರ) 2 ವಿಭಾಗಗಳಲ್ಲಿ ನಡೆಸುವುದು. (6ನೇ ತರಗತಿಯಿಂದ 10ನೇ ತರಗತಿ ವರೆಗೆ ಮತ್ತು ಪಿಯುಸಿ ಯಿಂದ ಪದವಿ/ಸ್ನಾತಕೋತ್ತರ ಪದವಿ ವರೆಗೆ). ಈ ಎರಡು ಸ್ಪರ್ಧೆಗಳಿಗೆ ಬೀದರ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರತ್ತದೆ.

ಸೆಪ್ಟೆಂಬರ್.10 ರಂದು ತಾಲ್ಲೂಕು ಮಟ್ಟದಲ್ಲಿ ಹಾಗೂ ಸೆಪ್ಟೆಂಬರ್.11 ರಂದು 18 ವರ್ಷ ಮೇಲ್ಪಟ್ಟವರಿಗೆ ಪ್ರಜಾಪ್ರಭುತ್ವದ ಕುರಿತು ಫೋಟೊಗ್ರಾಫಿ ನಡೆಯಲಿದೆ. ಬೀದರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಸೆಪ್ಟೆಂಬರ್. 13 ರಂದು ಜಿಲ್ಲಾ ಮಟ್ಟದಲ್ಲಿ ಸೈಕ್ಲಿಂಗ್ ರ್ಯಾಲಿ ನಡೆಯಲಿದೆ. ಬೀದರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ವಿವಿಧ ಸ್ಪರ್ಧೆಗಳಿಗಾಗಿ ಚನ್ನಬಸವ ಹೆಡೆ (ಜಿಲ್ಲಾ ಸಮನ್ವಯ ಅಧಿಕಾರಿಗಳು, ಕ.ವ.ಶಿ.ಸ.ಸಂ ಬೀದರ) ಅವರ ಮೊಬೈಲ್ ಸಂಖ್ಯೆ: 9945196115 ಹಾಗೂ ಶರಣಪ್ಪ ಬಿರಾದಾರ (ಪ್ರಾಂಶುಪಾಲರು, ಎ.ಬಿ.ವಿ.ಆರ್.ಎಸ್ ಘೋಡಂಪಳ್ಳಿ) ಅವರ ಮೊಬೈಲ್: 7899998755 ಗೆ ಸಂಪರ್ಕಿಸಬಹುದಾಗಿದೆ.

ಈ ಎಲ್ಲಾ ಸ್ಪರ್ಧೆಗಳು ಅಚ್ಚುಕಟ್ಟಾಗಿ ಆಯೋಜಿಸಲು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಅಧ್ಯಕ್ಷರಾಗಿ ಜಿಲ್ಲಾಧಿಕಾರಿಗಳು, ಸದಸ್ಯರಾಗಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬೀದರ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು, ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರನ್ನೊಳಗೊಂಡ ಸಮಿತಿಯನ್ನು

ಹಾಗೂ ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರ ಅಧ್ಯಕ್ಷರು ಹಾಗೂ ಇತರೇ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಗಳು ವಿವಿಧ ಸ್ಪರ್ಧೆ ಕಾರ್ಯಕ್ರಮಗಳನ್ನು ಯಾವುದೇ ಲೋಪವಿಲ್ಲದೇ ಯಶಸ್ವಿಯಾಗಿ ನಿರ್ವಹಿಸಲು ಕ್ರಮಕೈಗೊಳ್ಳಬೇಕು.

ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸೆಪ್ಟೆಂಬರ್.15 ರಂದು ನಡೆಯಲಿರುವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಪ್ರಮಾಣ ಪತ್ರ ನೀಡಿ ಗೌರವಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಜಯಂತಿ: ಜಿಲ್ಲಾಡಳಿತದಿಂದ ಪುಷ್ಪ ನಮನ ಸಲ್ಲಿಕೆ



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಸೆ.9: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಬ್ರಹ್ಮಶ್ರೀ ನಾರಾಯಣಗುರುಗಳ 171ನೇ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಭಾನುವಾರ ಪುಷ್ಪ ನಮನ ಸಲ್ಲಿಸುವುದರ ಮೂಲಕ ಆಚರಿಸಲಾಯಿತು. ಕೊಪ್ಪಳ ತಹಶಿಲ್ದಾರ ವೀಠ್ಠಲ್ ಚೌಗಲಾ ಅವರುಶ್ರೀ ಬ್ರಹ್ಮಶ್ರೀ ನಾರಾಯಣಗುರುಗಳ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ, ಪೊಲೀಸ್ ಇಲಾಖೆಯ ಚೋಳಪ್ಪ ಹಾಗೂ ಆರ್ಯ ಈಡಿಗ ಸಮಾಜದ ಮುಖಂಡರಾದ ವೀರಣ್ಣ ಹುಲಿಗಿ, ರವಿ ಗಿಣಿಗೇರಿ, ಅನಿಲ್ ಹುಲಿಗಿ, ಹನುಮಂತಪ್ಪ ಬಂಡಿ, ಹನುಮಂತಪ್ಪ ಭೀಮನೂರ್, ರಾಜಣ್ಣ, ಆನಂದ್ ಬಾಬು, ರಾಘವೇಂದ್ರ ಕೊಪ್ಪಳ, ರಮೇಶ, ವೆಂಕಟೇಶ್ ಗಂಗಾವತಿ, ಬಸವರಾಜ್ ಚಿಲವಾಡಗಿ, ಸುಕ್ರಾಜ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಿಬ್ಬಂದಿ ಶಂಕರ್ ಮಹಮನಿ ಹಾಗೂ ಮುತ್ತಣ್ಣ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

## ಸೆ.11 ರಿಂದ ಶಿಕ್ಷಕರ ಹೆಚ್ಚುವರಿ ಕೌನ್ಸಲಿಂಗ್ ಪ್ರಾರಂಭ

ಬೀದರ, ಸೆ.09 : 2024–25ನೇ ಸಾಲಿನ ಸರ್ಕಾರಿ ಪ್ರಾಥಮಿಕ ಪ್ರೌಢ ಶಾಲಾ ಸಹ ಶಿಕ್ಷಕರು ವರ್ಗಾವಣೆ ಕೌನ್ಸಲಿಂಗ್ ಸಂಬಂಧಿಸಿದ ಪ್ರಾಥಮಿಕ ಮತ್ತು ಪ್ರೌಢ ವಿಭಾಗದ ವಿಷಯ ನಿರ್ವಾಹಕರು, ಸಂಬಂಧಿಸಿದ ವರ್ಗಾವಣೆ ನೋಡಲ್ ಅಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ಹಾಜರಾಗುವಂತೆ ಸೂಚಿಸಲಾಗಿರುತ್ತದೆ. ಮುಂದುವರೆದು ಹೆಚ್ಚುವರಿ ಪಟ್ಟಿಯಲ್ಲಿರುವ ಶಿಕ್ಷಕರಿಗೆ ನಿಗದಿತ ವೇಳಾಪಟ್ಟಿಯಂತೆ ಕೌನ್ಸಲಿಂಗ್‌ನಲ್ಲಿ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಸೂಚಿಸಿದ್ದು, ಒಂದು ವೇಳೆ ನಿಗದಿತ ಸಮಯಕ್ಕೆ ಹಾಜರಾಗದಿದ್ದಲ್ಲಿ, ಗೈರುಹಾಜರಿ ಎಂದು ಪರಿಗಣಿಸಿ, ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗುವುದು ಎಂದು ಬೀದರ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗಾವಣೆ ಸ್ವರೂಪ ಪ್ರಾಥಮಿಕ: ಸೆಪ್ಟೆಂಬರ್.11 ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಡಯಟ್ ಬೀದರದಲ್ಲಿ ಪೂರ್ವಾಹ್ನ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರು ಹೊಂದಾಣಿಕೆ ಕೌನ್ಸಲಿಂಗ್ ಬ್ಲಾಕ್ ಹಂತ ಹಾಗೂ ಅಪರಾಹ್ನ ರಂದು ಬ್ಲಾಕ್ ಹಂತದ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆಯ ನಂತರ ತಾಲ್ಲೂಕಿನಲ್ಲಿ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರ ಕೌನ್ಸಲಿಮಗ್ ಜಿಲ್ಲಾ ಹಂತದ ಹಾಗೂ ಸೆಪ್ಟೆಂಬರ್. 15 ರಂದು ಪೂರ್ವಾಹ್ನ ಎಸ್.ಎಸ್.ಕೆ ಸಭಾಂಗಣ ಉಪನಿರ್ದೇಶಕರು (ಆ) ಕಛೇರಿ, ಬೀದರ ಇಲ್ಲಿ ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ನಂತರ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರನ್ನು ಜಿಲ್ಲೆಯೊಳಗೆ ಪಿ.ಟಿ.ಆರ್ ಪ್ರಕಾರ ಅತೀ ಹೆಚ್ಚಿನ ಮಕ್ಕಳ ದಾಖಲಾತಿ ಇರುವ ಶಾಲೆಗಳಲ್ಲಿ ಇಳಿಕೆ ಕ್ರಮಾಂಕದಲ್ಲಿ ಶಿಕ್ಷಕರ ಮರುಹೊಂದಾಣಿಕೆ ಕ್ರಮಗಳು– ಜಿಲ್ಲಾ ಹಂತದಲ್ಲಿ

ವರ್ಗಾವಣೆ ಸ್ವರೂಪ ಪ್ರೌಢ: ಸೆಪ್ಟೆಂಬರ್.12 ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಡಯಟ್ ಬೀದರದಲ್ಲಿ ಪೂರ್ವಾಹ್ನ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರು ಹೊಂದಾಣಿಕೆ ಕೌನ್ಸಲಿಂಗ್ ಬ್ಲಾಕ್ ಹಂತ ಹಾಗೂ ಅಪರಾಹ್ನ ರಂದು ಬ್ಲಾಕ್ ಹಂತದ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆಯ ನಂತರ ತಾಲ್ಲೂಕಿನಲ್ಲಿ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರ ಕೌನ್ಸಲಿಮಗ್ ಜಿಲ್ಲಾ ಹಂತದ. ಹಾಗೂ ಸೆಪ್ಟೆಂಬರ್. 15 ರಂದು ಅಪರಾಹ್ನ ಎಸ್.ಎಸ್.ಕೆ ಸಭಾಂಗಣ ಉಪನಿರ್ದೇಶಕರು (ಆ) ಕಛೇರಿ ಬೀದರ ಇಲ್ಲಿ ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ನಂತರ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರನ್ನು ಜಿಲ್ಲೆಯೊಳಗೆ ಪಿ.ಟಿ.ಆರ್ ಪ್ರಕಾರ ಅತೀ ಹೆಚ್ಚಿನ ಮಕ್ಕಳ ದಾಖಲಾತಿ ಇರುವ ಶಾಲೆಗಳಲ್ಲಿ ಇಳಿಕೆ ಕ್ರಮಾಂಕದಲ್ಲಿ ಶಿಕ್ಷಕರ ಮರುಹೊಂದಾಣಿಕೆ ಕ್ರಮಗಳು– ಜಿಲ್ಲಾ ಹಂತದಲ್ಲಿ ನಡೆಯಲಿದೆ.

2024–25ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರ ಮತ್ತು ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು / ತತ್ಸಮಾನ ವೃಂದದ ಶಿಕ್ಷಕರ ಹೆಚ್ಚುವರಿ ವರ್ಗಾವಣೆಗಳನ್ನು ಹಮ್ಮಿಕೊಳ್ಳುವ ಸಂಬಂಧ ಅಧಿಸೂಚನೆಯಲ್ಲಿ ವರ್ಗಾವಣೆ ಪ್ರಕ್ರಿಯೆಯನ್ನು ನಿರ್ವಹಿಸಲು ಮಾರ್ಗಸೂಚಿ ಪರಿಷ್ಕೃತ ವರ್ಗಾವಣೆ ವೇಳಾಪಟ್ಟಿ–03ನ್ನು ಅನುಬಂಧ–2ರಲ್ಲಿ ಹೊರಡಿಸಿರುತ್ತಾರೆಂದು ಅವರು ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ 79987.20 ಹೆಕ್ಟೇರ ಬೆಳೆ ಹಾನಿ

ಬೀದರ, ಸೆ.09 : ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ ಕೃಷಿ ಹಾಗೂ ತೋಟಗಾರಿಕೆ ಸೇರಿ 79987.20 ಹೆಕ್ಟೇರ ಬೆಳೆ ಹಾನಿಯಾಗಿದ್ದು, ಇನ್ನು ಸಮೀಕ್ಷೆ ಪ್ರಗತಿ ಹಂತದಲ್ಲಿದೆ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದರೆ. 2025–26ನೇ ಸಾಲಿನ ನೈಋತ್ಯ ಮುಂಗಾರು ಹಂಗಾಮಿನಲ್ಲಿ ವಾಡಿಕೆ 516.00 ಮೀ ಮೀ ಮಳೆ ಆಗಬೇಕಾಗಿದ್ದು, 510.00 ಮೀ ಮೀ ಮಳೆಯಾಗಿರುತ್ತದೆ, ಅಗಸ್ಟ್–2025 ಮಾಹೆಯಲ್ಲಿ ಜಿಲ್ಲಾದ್ಯಂತ 316 ಮೀ ಮೀ ಮಳೆಯಾಗಿರುತ್ತದೆ (ಶೇ 66% ಜಾಸ್ತಿಯಾಗಿರುತ್ತದೆ.) ಜಿಲ್ಲಾದ್ಯಂತ ಕೆಲವು ಕಡೆ ಭಾರಿ ಪ್ರಮಾಣದಲ್ಲಿ ಮಳೆಯಾಗಿರುತ್ತದೆ. ಇದರಿಂದ ಜಿಲ್ಲೆಯಲ್ಲಿ ಜೂನ್.1 ರಿಂದ ಸೆಪ್ಟೆಂಬರ್.8 ರವರೆಗೆ ಮಾನವ ಜೀವ ಹಾನಿ–2, ಪ್ರಾಣಿ ಜೀವ ಹಾನಿ–29, ಮನೆ ಹಾನಿ– 820 ಹಾನಿಯಾಗಿದ್ದು ಸಮೀಕ್ಷೆ ಪ್ರಗತಿಯಲ್ಲಿದೆ. ಮೂಲಭೂತ ಸೌಕರ್ಯಗಳಲ್ಲಿ ಜಿಲ್ಲಾದ್ಯಂತ 179.60 ಕೀ ಮೀ ರಸ್ತೆ ಹಾನಿ, 121 ಬ್ರಿಜ್‌ಗಳು ಹಾನಿ, ಒಟ್ಟು 420 ಶಾಲಾ ಕೊಠಡಿಗಳಿಗೆ ಹಾನಿ, 246 ವಿದ್ಯುತ ಕಂಬ, 36 ಟ್ರಾನ್ಸ್ ಫಾರ್ಮಗಳು ಮತ್ತು 30.68 ಕೀ ಮೀ ವಿದ್ಯುತ ತಂತಿ ಹಾನಿ, 24 ಸಣ್ಣ ನೀರಾವರಿ ಇಲಾಖೆ ಕೆರೆ (ಯೋಜನೆಗಳು) ಹಾನಿ, ಅಂಗನವಾಡಿ ಕಟ್ಟಡ 241 ಹಾನಿಯಾಗಿದ್ದು ಸಮೀಕ್ಷೆ ಪ್ರಗತಿಯಲ್ಲಿದೆ. ಕುಡಿಯುವ ನೀರಿನ ಯೋಜನೆ 17(ನಗರ) ಹಾನಿಯಾಗಿರುತ್ತದೆ. ಹಾಗೂ ಪ್ರಾಥಮಿಕ/ಸಮುದಾಯ ಆರೋಗ್ಯ ಕೇಂದ್ರ 24 ಹಾನಿಯಾಗಿರುತ್ತವೆ ಎಂದು ಅವರು ತಿಳಿಸಿದ್ದಾರೆ.

## ಗುತ್ತಿಗೆ ಆಧಾರದ ಮೇಲೆ ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನ

ಬೀದರ, ಸೆ.09 : ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (PM-JANMAN), ದರ್ತಿ ಅಭ್ಯಾ–ಜನ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ (DA-JGUA) ಸಂಚಾರಿ ಆರೋಗ್ಯ ಘಟಕ ಔರಾದಗೆ ಗುತ್ತಿಗೆ ಆಧಾರದ ಮೇಲೆ ಶುಶ್ರೂಷಕರು–1, ಪ್ರಯೋಗ ಶಾಲಾ ತಂತ್ರಜ್ಞರು–1 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ ಎಂದು ಬೀದರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆರಿಟ್ ಆಧಾರದ ಮೇಲೆ ದಿನಾಂಕ: 15.09.2025 ರಿಂದ 16.09.2025 ರವರೆಗೆ ವೈಯಕ್ತಿಕವಾಗಿ/ಮಿಂಚಂಚೆ (dpmbidar@gmail.com) ಮುಖಾಂತರ ಕಛೇರಿ ಸಮಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಎನ್.ಹೆಚ್.ಎಂ ವಿಭಾಗದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದು, ಭರ್ತಿ ಮಾಡಿದ ಅರ್ಜಿಗಳ ಸ್ವೀಕೃತಿ ಮತ್ತು ವಿದ್ಯಾಭ್ಯಾಸದ ಹಾಗೂ ಇನ್ನಿತರೆ ಅಗತ್ಯ ಮೂಲದಾಖಲೆಗಳೊಂದಿಗೆ ಸ್ವಯಂ ದೃಢೀಕರಿಸಿದ ಒಂದು ಜೊತೆ ಝಿರಾಕ್ಸ್ ಪ್ರತಿ ಹಾಗೂ ತಮ್ಮ ಇತ್ತಿಚಿನ ಭಾವಚಿತ್ರವನ್ನು ಲಗತ್ತಿಸಿ ಸಲ್ಲಿಸತಕ್ಕದ್ದು. 1:2 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಯು ಖುದ್ದಾಗಿ ಹಾಜರಿದ್ದು ಕಡ್ಡಾಯವಾಗಿ ಮೂಲ ದಾಖಲಾತಿಗಳನ್ನು ಹಾಜರುಪಡಿಸಬೇಕು. ಮೂಲದಾಖಲಾತಿಗಳನ್ನು ಹಾಜರು ಪಡಿಸದ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಹೆಚ್ಚಿನ ಮಾಹಿತಿಯನ್ನು ಎನ್.ಹೆಚ್.ಎಂ ಘಟಕ ಬೀದರ ಇಲ್ಲಿಗೆ ಕಛೇರಿ ಸಮಯದಲ್ಲಿ ಭೇಟಿ ನೀಡಬಹುದು ಅಥವಾ ಮೊಬೈಲ್ ಸಂಖ್ಯೆ 9449843100 ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಮತದಾನ ಫೋಟೋಗ್ರಾಫಿ ಸ್ಪರ್ಧೆ

ಬೀದರ, ಸೆ.09: ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆಯಲ್ಲಿ ಮತದಾನ ವಿಷಯದ ಬಗ್ಗೆ ಬೀದರ ಜಿಲ್ಲೆಯ ಛಾಯಾಗ್ರಾಹಕರಿಗೆ ಫೋಟೋಗ್ರಾಫಿ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ವಾರ್ತಾಧಿಕಾರಿ ಮಂಜುನಾಥ ಸುಳ್ಳೊಳ್ಳಿ ತಿಳಿಸಿದ್ದಾರೆ.

ಮತದಾನ ಪ್ರಕ್ರಿಯೆ ವಿಷಯದ 8ಥ12 ಇಂಚಿನ ಅಳತೆಯ ಛಾಯಾಚಿತ್ರಗಳನ್ನು ದಿನಾಂಕ: 11–09–2025 ರೊಳಗಾಗಿ ರೈಲ್ವೆ ನಿಲ್ದಾಣದ ಹತ್ತಿರವಿರುವ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ತಲುಪಿಸತಕ್ಕದ್ದು, ಆಯ್ಕೆಯಾದ 3 ಅತ್ಯುತ್ತಮ ಛಾಯಾಚಿತ್ರಗಳಿಗೆ ಸೆಪ್ಟೆಂಬರ್.15 ರಂದು ಜರುಗಲಿರುವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಮಾಣ ಪತ್ರ ವಿತರಿಸಲಾಗುವುದೆಂದು ಪ್ರಕಟಣೆ ತಿಳಿಸಿದೆ.

# ಕಾಂಗ್ರೆಸ್ ಸರ್ಕಾರ ಮುಸ್ಲಿಂ ಓಲೈಕೆ ರಾಜ–ಕಾರಣ ಹೆಚ್ಚಾಗಿದ್ದದೆ:ಕು ಲಲಿತಾ ಅನಪುರ..

**ಮಲ್ಲಮ್ಮ ನುಡಿ ವಾರ್ತೆ**
**ಯಾದಗಿರಿ:**



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಿಂದೂ ವಿರೋಧಿ ನೀತಿಗಳು ಮತ್ತು ಮುಸ್ಲಿಂ ಓಲೈಕೆ ರಾಜಕಾರಣ ಹೆಚ್ಚಾಗಿದ್ದು, ಇದು ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಿದೆ. ಇದಕ್ಕೆ ನಿನ್ನೆ ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ನಡೆದ ಘಟನೆಯೇ ಸ್ಪಷ್ಟ ಉದಾಹರಣೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಕು.ಲಲಿತಾ ಅನಪುರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯ ಮೇಲೆ ದುಷ್ಕರ್ಮಿಗಳು ಕಲ್ಲು ಎಸೆದು ದಾಂಧಲೆ ನಡೆಸಿದ್ದಲ್ಲದೆ, ಈ ಘಟನೆಯನ್ನು ಖಂಡಿಸಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಹಿಂದೂ ಕಾರ್ಯಕರ್ತರು ಮತ್ತು ಮಹಿಳೆಯರ ಮೇಲೆ ಸರ್ಕಾರ ಲಾಠಿಚಾರ್ಜ್ ಮಾಡಿಸಿದೆ. ಇದು ಅತ್ಯಂತ ಖಂಡನೀಯ ಮತ್ತು ನಾಚಿಕೆಗೇಡಿನ ಸಂಗತಿ.

ಕಳೆದ ವರ್ಷವೂ ಮಂಡ್ಯದ ನಾಗಮಂಗಲದಲ್ಲಿ ಇದೇ ರೀತಿಯ ಘಟನೆ ನಡೆದಿತ್ತು. ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಮುಸ್ಲಿಂ ಮತಾಂಧರು ಕಲ್ಲು ತೂರಾಟ ನಡೆಸಿ ಹಿಂದೂಗಳ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದರು. ಆದರೆ, ಕಾಂಗ್ರೆಸ್ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೆ, ಹಿಂದೂ ಯುವಕರ ಮೇಲೆ ಕಿರುಕುಳ ನೀಡಿತ್ತು. ಹುಬ್ಬಳ್ಳಿ ಪೊಲೀಸ್ ಠಾಣೆ ಮೇಲೆ ದಾಂದಲೆ ಮಾಡಿದ್ದೂ ಹಾಗೂ ಕೆ.ಜಿ.ಹಳ್ಳಿ,ಡಿ.ಜಿ.ಹಳ್ಳಿ ಗಲಭೆಯ ಆರೋಪಿತರ ಕೇಸ್ ಗಳನ್ನು ಈ ಕಾಂಗ್ರೆಸ್ ಸರಕಾರ ವಾಪಸ್ ಪಡೆದದ್ದು ಈ ಮುಸ್ಲಿಂ ಓಲೈಕೆ ಮನಸ್ಥಿತಿ ಮತಾಂಧರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿದೆ. ಮದ್ದೂರಿನಲ್ಲಿ ನಡೆದ ಈ ಘಟನೆ ಕೇವಲ ಒಂದು ಭಾಗದಲ್ಲಿ ನಡೆದಿದ್ದಲ್ಲ, ಶಿವಮೊಗ್ಗ, ಧಾರವಾಡ, ಬಾಗಲಕೋಟೆ, ಹುಬ್ಬಳ್ಳಿ ಕೊಪ್ಪಳ, ರಾಯಚೂರು , ಕಲಬುರಗಿ ಸೇರಿದಂತೆ ರಾಜ್ಯದ ಅನೇಕ ಕಡೆಗಳಲ್ಲಿ ಇಂತಹ ಘಟನೆಗಳು ವರದಿಯಾಗುತ್ತಿವೆ.

ಈ ಘಟನೆಗಳು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂಬುದಕ್ಕೆ ಸಾಕ್ಷಿ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ, ಶಾಂತಿದೂತರೆಂದು ಕರೆಯಲ್ಪಡುವ ಮತಾಂಧರ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ, ಹಿಂದೂಗಳ ಹಕ್ಕುಗಳನ್ನು ಹತ್ತಿಕ್ಕುತ್ತಿದೆ. ಈ ಸರ್ಕಾರಕ್ಕೆ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎಂಬ ನೀತಿಯಿದೆ. ಪೊಲೀಸ ವ್ಯವಸ್ಥೆಯು ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿರುವುದು ರಾಜ್ಯದ ಜನರ ವಿಶ್ವಾಸಕ್ಕೆ ಧಕ್ಕೆ ತಂದಿದೆ.

ಕಾಂಗ್ರೆಸ್ ಸರ್ಕಾರದ ಈ ಪಕ್ಷಪಾತ ಮತ್ತು ಮೃದು ಧೋರಣೆ ರಾಜ್ಯದಲ್ಲಿ ಅರಾಜಕತೆ ಉಂಟಾಗಲು ಕಾರಣವಾಗುತ್ತಿದೆ. ನಾನು ಕಾಂಗ್ರೆಸ್‌ನ ಒಡೆದು ಆಳುವ ನೀತಿಯನ್ನು ಮತ್ತು ಹಿಂದೂ ವಿರೋಧಿ ಧೋರಣೆಯನ್ನು ತೀವ್ರವಾಗಿ ಖಂಡಿಸಿ, ಕೂಡಲೇ ಸರ್ಕಾರ ಈ ಘಟನೆಯಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಹಿಂದೂಗಳ ರಕ್ಷಣೆಗೆ ಮುಂದಾಗಬೇಕು ಎಂದು ಒತ್ತಾಯಿದ್ದಾರೆ.

## ಗುರುಮಠಕಲ್ ತಾಲೂಕಿನ ಗ್ರಾಮಗಳಲ್ಲಿ ಶಾಲಾ ಅಭಿವೃದ್ಧಿ ಕಾಮಗಾರಿಗಳು ಆರಂಭ



**ಮಲ್ಲಮ್ಮ ನುಡಿ ವಾರ್ತೆ**
**ಗುರುಮಠಕಲ್:**

ತಾಲ್ಲೂಕಿನ ಚಿನ್ನಕಾರ ಗ್ರಾಮದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳಾದ ಮಾನ್ಯ ವೆಂಕಟೇಶ್ ಚಟ್ನಳ್ಳಿ ಸರ್ ಹಾಗೂ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಅಂಬರೀಶ್ ಪಾಟೀಲ್ ಸರ್ ನೇತೃತ್ವದಲ್ಲಿ ಸಮಗ್ರ ಶಾಲಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಶಿಕ್ಷಕರ ದಿನಾಚರಣೆಯ ಅಂಗವಾಗಿ ಜಿಲ್ಲಾ ಪಂಚಾಯಿತಿಯಿಂದ ಹಮ್ಮಿಕೊಂಡಿದ್ದ "ನಮ್ಮ ಶಾಲೆ ನಮ್ಮ ಅಭಿಯಾನ" ಅಡಿ ಗುರುಮಠಕಲ್ ತಾಲೂಕಿನ ಚಿನ್ನಾಕಾರ, ಕೊಂಕಲ್, ಎಲೇರಿ ಅಜಲಾಪುರ್ ಗ್ರಾಮ ಪಂಚಾಯಿತಿ ಸೇರಿದಂತೆ ಇತರೆ ಗ್ರಾಮ ಪಂಚಾಯತಿಗಳಲ್ಲಿ 2025–26ನೇ ಸಾಲಿನ ಶಾಲಾ ಅಭಿವೃದ್ಧಿ ಕಾಮಗಾರಿಗಳಲ್ಲಿ ಶಾಲಾ ಕಟ್ಟಡ, ಕಾಂಪೌಂಡ್ ಅಡುಗೆ ಕೋಣೆ, ಶಾಲಾ ಶೌಚಾಲಯ, ಅಂಗನವಾಡಿ ಶೌಚಾಲಯಗಳ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ಚಿನ್ನಾಕರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಂಪೌಂಡ್ ನಿರ್ಮಾಣ ಹಾಗೂ ಉರ್ದು ಶಾಲೆಯಲ್ಲಿ

ಬಾಲಕ ಮತ್ತು ಬಾಲಕೀಯರ ಶೌಚಾಲಯ ನಿರ್ಮಾಣ ಹಾಗೂ ಕಾಂಪೌಂಡ್ ನಿರ್ಮಾಣಕ್ಕೆ ಚಾಲನೆ ನೀಡಿದರು.

ಇದೇ ವೇಳೆ ಗ್ರಾಮಸ್ಥರಿಗೆ ನರೇಗಾ ಕಾರ್ಮಿಕರಿಗೆ ಗ್ರಾಮಸ್ಥರಿಗೆ ಕೇಂದ್ರ ಸರ್ಕಾರದ ವಿಮೆಗಳಾದ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ ವಿಮೆಗಳು ವಿತರಿಸಿ, ಇನ್ಸುರೇನ್ಸ್ ಫಲನುಭವಿಗಳಾಗಲು ಕರೆನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ರಾಮಚಂದ್ರ ಬಸೂದೆ, ಚಿನ್ನಾಕಾರ ಗ್ರಾಮ ಪಂಚಾಯಿತಿಯ ಪಿಡಿಓ ಸೈಯದ್ ಅಲಿ, ಟಿಸಿ ಮುಜಾಮಿಲ್, ಟಿಐಇಸಿ ರಾಘವೇಂದ್ರ, ತಾಂತ್ರಿಕ ಸಹಾಯಕ ವಿಜಯ ಆಲೆಮನೆ, ಬಿ ಎಫ್ ಟಿ, ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

## ನ್ಯಾಕ್ ನಲ್ಲಿ ಎ ಶ್ರೇಣಿ : ಮಾನ್ಯ ಮುಖ್ಯಮಂತ್ರಿಗಳಿಂದ ಅಭಿನಂದನಾ ಪತ್ರ – ಶಾಸಕರಿಂದ ಮೆಚ್ಚುಗೆ





**ಮಲ್ಲಮ್ಮ ನುಡಿ ವಾರ್ತೆ**
**ಬೆಂಗಳೂರು:**

ನ್ಯಾಕ್ ಮಾನ್ಯತೆಯು ಭಾರತದಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಗುಣಮಟ್ಟವನ್ನು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿ ಮೂಲಕ ಮೌಲ್ಯಮಾಪನ ಮಾಡಿ ಪ್ರಮಾಣೀಕರಿಸುವ ಪ್ರಕ್ರಿಯೆಯಾಗಿದೆ.

ಇದರ ಮುಖ್ಯ ಉದ್ದೇಶ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಗುರುತಿಸುವುದು, ಮೌಲ್ಯಮಾಪನ ಮಾಡುವುದು. ಮುಖ್ಯವಾಗಿ ಬೋಧನೆ–ಕಲಿಕೆ, ಸಂಶೋಧನೆ, ಮೂಲಸೌಕರ್ಯ ಮತ್ತು ಕಲಿಕಾ ಸಂಪನ್ಮೂಲಗಳು, ವಿದ್ಯಾರ್ಥಿ ಬೆಂಬಲ ಮತ್ತು ಪ್ರಗತಿ, ಆಡಳಿತ, ನಾಯಕತ್ವ ಮತ್ತು ನಿರ್ವಹಣೆ, ಸಾಂಸ್ಥಿಕ ಮೌಲ್ಯಗಳು ಮತ್ತು ಉತ್ತಮ ಅಭ್ಯಾಸಗಳು ಇವೆ ಮೊದಲಾದ ಅಂಶಗಳನ್ನು ಕೇಂದ್ರವಾಗಿರಿಸಿಕೊಂಡಂತೆ ನಡೆಯುತ್ತದೆ.

ರಾಜಾಜಿನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನ್ಯಾಕ್ ಮೌಲ್ಯಮಾಪನಕ್ಕೆ ಒಳಪಡಲು ಪ್ರೋತ್ಸಾಹಿಸಿದ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್ ಸುರೇಶ್ ಕುಮಾರ್ ಹಾಗೂ ಮಹಾಲಕ್ಷ್ಮಿಪುರಂ ಶಾಸಕರಾದ ಗೋಪಾಲಯ್ಯ ಅವರ ಮಾರ್ಗದರ್ಶನದಲ್ಲಿ 2021–22 ನೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ನ್ಯಾಕ್ ಮೌಲ್ಯಮಾಪನಕ್ಕೆ ಒಳಪಟ್ಟು, ಮೊಟ್ಟ ಮೊದಲ ಸೈಕಲ್ ನಲ್ಲಿಯೇ 'ಎ' ಶ್ರೇಣಿ ಪಡೆಯುವಲ್ಲಿ ಯಶಸ್ವಿಯಾಗಿದೆ. ಕಾಲೇಜಿನ ಸಾಧನೆಯನ್ನು ಗುರುತಿಸಿ ಮುಖ್ಯಮಂತ್ರಿ ಅವರು ಕಾಲೇಜಿಗೆ ಅಭಿನಂದನಾ ಪತ್ರ ನೀಡಿ ಸನ್ಮಾನಿಸಿರುವುದು ಹೆಮ್ಮೆಯ ಸಂಗತಿ.

ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್. ಸುರೇಶ್ ಕುಮಾರ್ ಅವರು ನ್ಯಾಕ್ ಮೌಲ್ಯಮಾಪನದಲ್ಲಿ ಎ ಶ್ರೇಣಿ ಪಡೆಯಲು ಶ್ರಮಿಸಿದ ಕಾಲೇಜು ತಂಡವನ್ನು ಅಭಿನಂದಿಸಿ ಪ್ರೋತ್ಸಾಹಿಸಿದರು.

## ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿ ರಚಿಸಲು ಬಸ್ಸುಗೌಡ ಆಗ್ರಹ

**ಮಲ್ಲಮ್ಮ ನುಡಿ ವಾರ್ತೆ**
**ಶಹಾಪುರ :**



ಇತ್ತೀಚಿನ ದಿನಗಳಲ್ಲಿ ಶಾಲಾ ಮಕ್ಕಳ ಮೇಲೆ ಅತ್ಯಾಚಾರ ಶೋಷಣೆ ದೌರ್ಜನದಂತ ಪ್ರಕರಣಗಳು ಹೆಚ್ಚಾಗುತ್ತಿವೆ ಅಧಿಕಾರಿಗಳು ಸುರಕ್ಷತೆ ಕುರಿತು ಶಾಲೆಗಳತ್ತ ಗಮನಹರಿಸಬೇಕಿದೆ ಜಿಲ್ಲೆಯ ಎಲ್ಲಾ ಸರಕಾರಿ ಖಾಸಗಿ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿಯನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳು ರಚಿಸುವಂತೆ ಯುವ ಮುಖಂಡರಾದ ಬಸ್ಸುಗೌಡ ಕಂಚನಕವಿ ಅಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಶಹಾಪುರ ನಗರದಲ್ಲಿ ಇತ್ತೀಚಿಗಷ್ಟೇ ವಸತಿ ಶಾಲೆಯ ಒಂಬತ್ತನೇ ತರಗತಿಯ ವಿದ್ಯಾರ್ಥಿಯೊಬ್ಬಳು ಹೆರಿಗೆ ಪ್ರಕರಣವು ಇಡಿ ಸಮಾಜವೇ ತಲೆತಗ್ಗಿಸುವಂತಾಗಿದೆ ಇದಕ್ಕೆ ಅಧಿಕಾರಿಗಳು ವಸತಿ ನಿಲಯದ ಸಿಬ್ಬಂದಿಗಳ ನಿರ್ಲಕ್ಷತನವೇ ಪ್ರಮುಖ ಕಾರಣವಾಗಿದೆ ಆದ್ದರಿಂದ ಮುಂಜಾಗ್ರತೆ ವಹಿಸಿ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ವಿದ್ಯಾರ್ಥಿಗಳಿಗೆ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಲು ಮಕ್ಕಳ ಸುರಕ್ಷಾ ಸಮಿತಿಯ ಅವಶ್ಯಕತೆ ಇದೆ ಪ್ರತಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿ ರಚಿಸಲು ಸರಕಾರದಿಂದ ಆದೇಶವಾಗಿದೆ ಆದರೆ ಅದು ಸರಿಯಾಗಿ ಪಾಲನೆ ಆಗುತ್ತಿಲ್ಲ ಕೆಲವು ಶಾಲೆಗಳಲ್ಲಿ ನಾಮಕ್ಕೆವಾಸ್ತೆ ಮಾತ್ರ ಮಕ್ಕಳ ಸುರಕ್ಷತಾ ಸಮಿತಿ ರಚಿಸಿ ಕೈಬಿಟ್ಟಿದ್ದಾರೆ ಎಂದು ಅವರು ಆರೋಪಿಸಿದರು.ಮಕ್ಕಳ ಸುರಕ್ಷತಾ ಸಮಿತಿಯಲ್ಲಿ ಮಹಿಳಾ ಮತ್ತು ಪುರುಷ ಶಿಕ್ಷಕರು ಪಾಲಕರು ಆರೋಗ್ಯ ಇಲಾಖೆ ಸಿಬ್ಬಂದಿಗಳು ಸಮಿತಿಯಲ್ಲಿ ತೆಗೆದುಕೊಳ್ಳಬೇಕು ಕೂಡಲೇ ಶಿಕ್ಷಣ ಇಲಾಖೆ ಎಲ್ಲಾ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ಸಮಿತಿ ರಚಿಸಿ ಕನಿಷ್ಠ ಎರಡು ತಿಂಗಳ ಒಮ್ಮೆ ಸಭೆಗಳು ನಡೆಸಿ ಮಕ್ಕಳ ಸಂರಕ್ಷಣೆಕ್ಷೆಗೆ ಮುಂದಾಗುವಂತೆ ಯುವ ಮುಖಂಡರಾದ ಬಸ್ಸು ಗೌಡ ಕಂಚನಕವಿ ಒತ್ತಾಯಿಸಿದ್ದಾರೆ

## ತಾಯಿ, ಮಗಳು ಕಾಣೆ: ಪತ್ತೆಗೆ ಪೊಲೀಸರ ಮನವಿ

**ಮಲ್ಲಮ್ಮ ನುಡಿ ವಾರ್ತೆ**
**ರಾಯಚೂರು:**


ಸೆಪ್ಟೆಂಬರ್ 09– ಇಲ್ಲಿನ ಮಾರ್ಕೆಟ್ ಯಾರ್ಡ ಪೊಲೀಸ್ ಠಾಣೆಯ ವ್ಯಾಪ್ತಿಯ ಚಂದ್ರಬಂಡ ರಸ್ತೆಯ ಹಳೆ ಆಶ್ರಯ ಕಾಲೋನಿಯ ನಿವಾಸಿಗಳಾದ ಪಾತೀಮಾ ಗಂಡ ಮಹದ್ ಶ್ಯಾಲಂ (45) ಹಾಗೂ ಆಕೆಯ ಮಗಳಾದ ಸಾನಿಯಾ ಬೇಗಂ ತಂದೆ ಮಹದ್ ಶ್ಯಾಲಂ (17) ಎಂಬವರು ಆಗಸ್ಟ್ 13ರ ಬೆಳಿಗ್ಗೆ 7.30 ಗಂಟೆ ಸುಮಾರಿಗೆ ಮನೆಯಲ್ಲಿ ಯಾರಿಗು ಏನು ಹೇಳದೆ ಕೇಳದೆ ಮನೆಯಲ್ಲಿದ್ದ 10 ಸಾವಿರ ರೂ. ಹಣ ಮತ್ತು ಬೆಳ್ಳಿ ಕಾಲುಚೈನ್ ತೆಗೆದುಕೊಂಡು ಹೋದವರು ಇದುವರೆಗೂ ಮನೆಗೆ ವಾಪಸ್ಸು ಬಾರದೆ ಕಾಣೆಯಾಗಿದ್ದು, ಠಾಣೆಯಲ್ಲಿ ಗುನ್ನ ಸಂಖ್ಯೆ:87/2025 ಕಲಂರಡಿ ಪ್ರಕರಣ ದಾಖಲಾಗಿದೆ.

ಪಾತೀಮಾ ಗಂಡ ಮಹದ್ ಶ್ಯಾಲಂ (45) ಅವರು 5.3 ಫೀಟ್ ಎತ್ತರ, ದುಂಡು ಮುಖ, ಕಪ್ಪು ಮೈಬಣ್ಣ ಸದೃಢ ಮೈಕಟ್ಟು, ಹೂಗಳುಳ್ಳ ಬೂದು ಬಣ್ಣದ ಸೀರೆ ಮತ್ತು ಬುರ್ಖಾ ಧರಿಸಲಾಗಿದ್ದು, ಕನ್ನಡ ಮತ್ತು ಹಿಂದಿ ಮಾತನಾಡುತ್ತಾಳೆ.

ಸಾನಿಯಾ ಬೇಗಂ ತಂದೆ ಮಹದ್ ಶ್ಯಾಲಂ (17) ಬಾಲಕಿಯು 5.6 ಫೀಟ್ ಎತ್ತರ, ಉದ್ದನೆಯ ಮುಖ, ಕಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ಸ್ಕೈ ಬ್ಲೂ ಬಣ್ಣದ ಚೂಡಿದಾರ ಧರಿಸಲಾಗಿದ್ದು, ಕನ್ನಡ ಮತ್ತು ಹಿಂದಿ ಮಾತನಾಡುತ್ತಾಳೆ.

ಈ ತಾಯಿ ಹಾಗೂ ಮಗಳ ಕುರಿತು ಮಾಹಿತಿ ಸಿಕ್ಕಲ್ಲಿ ಠಾಣೆಯ ದೂರವಾಣಿ ಸಂಖ್ಯೆ: 08532–235600, ಪಿಎಸ್ಐ ಮೊಬೈಲ್ ಸಂಖ್ಯೆ: 9480803849ಗೆ ಸಂಪರ್ಕ ಮಾಡಬಹುದಾಗಿದ ಎಂದು ಠಾಣೆ–ಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆತ್ಮಹತ್ಯೆ ಮಾಡಿಕೊಂಡಿರುವ ಕುಟುಂಬಕ್ಕೆ ಸರಕಾರದಿಂದ ಪರಿಹಾರ ಒದಗಿಸಲು ಮನವಿ



**ಮಲ್ಲಮ್ಮ ನುಡಿ ವಾರ್ತೆ**
**ಕೊಪ್ಪಳ :**

ಆತ್ಮಹತ್ಯೆ ಮಾಡಿಕೊಂಡಿರುವ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ವಡ್ರಕಲ್ ಗ್ರಾಮದ ಪಾರ್ವತಿ ಮನೆಗೆ ಜಿಲ್ಲೆಯ ಮುಖಂಡರುಗಳು ಎಲ್ಲಾ ತಾಲೂಕಿನ ಅಧ್ಯಕ್ಷರು ಪದಾಧಿಕಾರಿಗಳು ಇವರು ಭಾಗವಹಿಸಿದ್ದು,ಈ ಘಟನೆ ನಡೆದಿರುವ ಆತ್ಮಹತ್ಯೆ ಮಾಡಿಕೊಂಡಿರುವ ಪಾರ್ವತಿಯ ಪತಿಯವರಾದ ರಮೇಶ್ ಮತ್ತು ಅವರ ತಾಯಿರವರಿಂದ ಸಮಗ್ರ ಮಾಹಿತಿ ಪಡೆದುಕೊಂಡು ಆರೋಪಿಗಳಿಗೆ ಉಗ್ರವಾದ ಶಿಕ್ಷೆಯನ್ನು ಒದಗಿಸಲು ಒತ್ತಾಯಿಸುವುದು , ಹಾಗೆ ಸಾವಿಗೆ ನಿರ್ಲಕ್ಷ್ಯ ವಹಿಸಿರುವ ಬೇವೂರ್ ಠಾಣೆಯ ಪೋಲೀಸ್ ಇಲಾಖೆಯ ಅಧಿಕಾರಿಯನ್ನು ಅಮಾನತು ಗೊಳಿಸುವುದು , ಆತ್ಮಹತ್ಯೆ ಮಾಡಿಕೊಂಡಿರುವ ಕುಟುಂಬಕ್ಕೆ ಸರಕಾರದಿಂದ ಪರಿಹಾರ ಒದಗಿಸಲು ಒತ್ತಾಯಿಸಲಾಯಿತು

ಈ ಸಭೆಯಲ್ಲಿ ಹಾಜರಿದ್ದ ಜಿಲ್ಲೆಯ ಮುಖಂಡರಾದ ಪರುಶುರಾಮ ಅಮರಾವತಿ ಕುಷ್ಟಗಿ, ರಾಮಣ್ಣ ಅಳವಂಡಿ, ಯಲ್ಲಪ್ಪ ನಿಲೋಗಲ್ ಮಾನ್ವಿ ಯುವ ಉತ್ಸಾಹಿಗಳಾದ ರಾಮು ಪೂಜಾರಿ ಕೊಪ್ಪಳ, ಯಮನೂರಪ್ಪ ಕರ್ಮುಡಿ ಯಲಬುರ್ಗಾ ತಾಲೂಕ ಅಧ್ಯಕ್ಷರಾದ ದುರುಗಪ್ಪ ಕರ್ಮುಡಿ, ಯುವ ಉತ್ಸಾಹಿಗಳಾದ ಗಣೇಶ್ ಮುಧೋಳ ಕಾರಟಗಿ ತಾಲೂಕ ಅಧ್ಯಕ್ಷರಾದ ಪಂಪಾಪತಿ ಬಿ ಸೋಮನಾಳ್ , ಯುವ ಜಿಲ್ಲಾ ಅಧ್ಯಕ್ಷರಾದ ಹುಲ್ಲೇಶ್ ಬಂಡಿ ವಡ್ಡರ್ ಗಂಗಾವತಿ , ರಮೇಶ್ ಡಗ್ಗಿ , ದುರ್ಗೇಶ್ ಸಿದ್ದಾಪೂರ, ಹೋಬಳಿ ಅಧ್ಯಕ್ಷರಾದ ನಾಗರಾಜ್ ಸಿದ್ದಾಪೂರ, ಹನ್ಮೇಶ್ ಸಿದ್ದಾಪೂರ , ರಾಘವೇಂದ್ರ ಸಿದ್ದಾಪೂರ, ಬಸವರಾಜ್ ಮುಧೋಳ, ಹನುಮಂತ ಕುಷ್ಟಗಿ, ಗಿರೀಶ್ ಪೂಜಾರಿ, ಯುವ ಉತ್ಸಾಹಿಗಳಾದ ಭೀಮೇಶ ಮಾದಿನೂರ, ಲಕ್ಷ್ಮಣ ತಾವರಗೆರೆ, ಯಮನೂರಪ್ಪ ಹಾಲವರ್ತಿ, ಶರಣಪ್ಪ ಭೋವಿ,

ಜಾಹೀರಾತಿಗಾಗಿ
ಇಂದೇ
ಸಂಪರ್ಕಿಸಿ:9449732000

## ದೇಶದ ಏಳಿಗೆಗೆ ಗುಣಾತ್ಮಕ ಶಿಕ್ಷಣ ಅವಶ್ಯ ಅದಕ್ಕೆ ಶಿಕ್ಷಕರ ಪಾತ್ರ ಬಹು ಮುಖ್ಯ. ಸಚಿವ ದರ್ಶನಾಪುರ.

# ಮಕ್ಕಳು ತಂದೆ ತಾಯಿಗಿಂತ ಅಧಿಕ ಸಮಯ ಗುರುಗಳೊಂದಿಗೆ ಕಳೆಯುವರು

**ಮಲ್ಲಮ್ಮ ನುಡಿ ವಾರ್ತೆ**
**ಶಹಾಪುರ :**



ಪ್ರತಿಯೊಬ್ಬರ ಜೀವನದಲ್ಲಿ ಗುರುವಿನ ಪಾತ್ರ ಇದ್ದೇ ಇರುವುದು ಗುರುವಿಗೆ ಪ್ರಪಂಚದಲ್ಲಿಯೇ ಅತ್ಯಂತ ಎತ್ತರ ಮಟ್ಟದ ಗೌರವಿರುವುದು ಮಕ್ಕಳು ಜನ್ಮ ನೀಡಿದ ತಂದೆ ತಾಯಿಗಳಿಗಿಂತ ಅಧಿಕ ಸಮಯ ಗುರುಗಳೊಂದಿಗೆ ಕಳೆಯುವರು ಅದ್ದಕಾಗಿಯೇ ಮಕ್ಕಳು ಪೋಷಕರಿಗಿಂತ ಗುರುವಿಗೆ ಅತೀ ಹೆಚ್ಚು ಗೌರವ ನೀಡುವರು ಅಲ್ಲದೇ ದೇಶದ ಅಭಿವೃದ್ಧಿಗೆ ಗುಣಾತ್ಮಕ ಶಿಕ್ಷಣ ಅವಶ್ಯ ಅದು ದೊರೆಯುವುದು ಶಿಕ್ಷಕ–ರಿಂದ ಮಾತ್ರ ಸಾಧ್ಯ ಎಂದು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ನಗರದ ಸಮೀಪದ ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಯಾದಗಿರಿ ಉಪನಿರ್ದೇಶಕ ಇಲಾಖೆ ಶಹಾಪುರ ಸುರಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಪ್ರಾಥಮಿಕ ಪ್ರೌಢ ಶಾಲಾ ಶಿಕ್ಷಕರ ಸಂಘಗಳ ಸಂಯುಕ್ತಾಶ್ರಯಗಳ ವತಿಯಿಂದ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಮಂಗಳವಾರ ಏರ್ಪಡಿಸಿದ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ದೀಪ ಬೆಳಗಿ ಡಾ ಸರ್ವಪಲ್ಲಿ ರಾಧಾಕೃಷ್ಣರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವುದರ ಮೂಲಕ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು. ಉತ್ತಮ ವಿದ್ಯಾರ್ಥಿಯ ನಿರ್ಮಾಣ ಪ್ರತಿಯೊಬ್ಬ ಶಿಕ್ಷಕರ ಗುರಿಯಗಬೇಕು ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರದೊಂದಿಗೆ ಸೇವಾ ಮನೋಭಾವನೆ ಹಾಗೂ ದೇಶಾಭಿಮಾನವನ್ನು ಬೆಳೆಸುವಲ್ಲಿ ತಮ್ಮೆಲ್ಲರ ಶ್ರಮ ತುಂಬಾ ಇದೆ ಎಂದರು. ನಾನು ಮೊದಲು ಚುನಾವಣೆಯಲ್ಲಿ ವಿಜಯ ಸಾಧಿಸಿ ಆಯ್ಕೆಯಾಗಿ ಬಂದಾಗ ನಮ್ಮ ಜಿಲ್ಲೆಯ ಶಾಲಾ ಕಾಲೇಜುಗಳ ಸ್ಥಿತಿ ಹೇಳತೀರದು,ಗುಡಿ ಗುಂಡಾರ ಮಠ ಮಂದಿರಗಳಲ್ಲಿ ಹಾಗೂ ಗಿಡ ಮರಗಳ ಕೆಳಗೆ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶ ಮಕ್ಕಳಿಗೆ ವಿದ್ಯಾಭ್ಯಾಸ ನಡೆಸಲಾಗುತ್ತಿತ್ತು ಅಲ್ಲದೇ ಶಿಕ್ಷಕರ ಕೊರತೆ ಎದ್ದು ಕಾಣುತ್ತಿತ್ತು ಅದೆಲ್ಲದಕ್ಕೂ ಎಚ್ ಜಿ ಗೋವಿಂದೇಗೌಡರು ಕರ್ನಾಟಕದ ಶಿಕ್ಷಣ ಮಂತ್ರಿಯಾಗಿ ಒಂದು ಲಕ್ಷದ ಐದು ಸಾವಿರ ಶಿಕ್ಷಕರನ್ನು ನೇಮಿಸಿ ದಾಖಲೆಗೈದಿದ್ದಾರೆ. ಶಿಕ್ಷಕ ಹುದ್ದೆಯ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ.50 ಮೀಸಲಾತಿ ಕಲ್ಪಿಸಿದ ಹೆಗ್ಗಳಿಕೆಯೂ ಅವರಿಗಿದೆ. ಅವರು ನೀಡಿದ ಕೊಡುಗೆ ಹಾಗೂ ಬಸವರಾಜ ಹೊರಟ್ಟಿಯವರು 2006ರಲ್ಲಿ ಕೌನ್ಸಿಲಿಂಗ್ ಮುಖಾಂತರ ನೇಮಕಾತಿ ಪ್ರಕ್ರಿಯೆ ಕೈಗೊಂಡು ಪ್ರತಿಭಾವಂತ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡರು ಅಲ್ಲಿಂದ ಇಲ್ಲಿಯವರೆಗೂ ಉತ್ತಮ ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣವು ಗ್ರಾಮೀಣ ವಿದ್ಯಾರ್ಥಿಗಳಿಗೆ ದೊರೆಯುವಂತಾಗಿದೆ ಎನ್ನಬಹುದು.ಸಮಾಜದಲ್ಲಿ ಶಿಕ್ಷಕರಿಗೆ ಅತ್ಯುನ್ನತ ಸ್ಥಾನ ನೀಡಲಾಗಿದೆ ಅದಕ್ಕೆ ಪ್ರತಿಯಾಗಿ ತಾವುಗಳು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ಅಂದ್ರೆ ಭದ್ರ ಬುನಾದಿ ಹಾಕಿ ಉತ್ತಮ ಫಲಿತಾಂಶ ನೀಡಬೇಕು ಎಂದರು. ಜಿಲ್ಲಾದ್ಯಂತ ಶಾಲಾ ಕಟ್ಟಡಗಳ ಅಭಿವೃದ್ಧಿಗಾಗಿ ಶಾಲಾ ಸುತ್ತಲೂ ತಡೆಗೋಡೆ ಹಾಗೂ ಒಳ್ಳೆಯ ಪರಿಸರ ನಿರ್ಮಿಸಲು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅನುದಾನದಡಿಯಲ್ಲಿ ಅಕ್ಷರ ಅವಿಸ್ಕಾರ ಎಂದು 60 ಕೋಟಿ ರೂಪಾಯಿ ನಿಗದಿಪಡಿಸಲಾಗಿದೆ ಜಿಲ್ಲೆಯಲ್ಲಿ ಹೆಚ್ಚು ಶೈಕ್ಷಣಿಕ ರಂಗಕ್ಕೆ ಹೊತ್ತು ನೀಡಲಾಗಿದೆ ಎಂದರು.

ಪ್ರತಿಯೊಂದು ಜಿಲ್ಲೆಗೂ ನಮ್ಮ ಶಿಕ್ಷಣ ಸಚಿವರು ಶಿಕ್ಷಣಾಭಿವೃದ್ಧಿ ಸಮಿತಿ ರಚನೆ ಮಾಡಿಸಿರುವರು ಅದ–ಕ್ಕೆ ನಮ್ಮ ಜಿಲ್ಲೆಯ ಅತ್ಯುತ್ತಮ ಶಿಕ್ಷಣ ಪ್ರೇಮಿಗಳು ಹಾಗೂ ವಿಶ್ರಾಂತಿ ಉಪನಿರ್ದೇಶಕರಾದ ಶಾಂತಗೌಡ ಪಾಟೀಲರನ್ನು ಅಧ್ಯಕ್ಷರನ್ನಾಗಿ ನೇಮಿಸಿರುತ್ತೇವೆ ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡಿ ಉತ್ತಮ ತರಬೇತಿಗೊಳಿಸಿ ಉತ್ತಮ ಫಲಿತಾಂಶ ತಂದು ಕೊಟ್ಟು ಗ್ರಾಮದ ತಾಲೂಕಿನ ಹಾಗೂ ಜಿಲ್ಲೆಯ ಕೀರ್ತಿಯನ್ನು ರಾಜ್ಯ ಮಟ್ಟದಲ್ಲಿ ಹೆಚ್ಚಿಸುವಂತೆ ಮಾಡಿ ಎಂದರು.

ಶಿಕ್ಷಕರ ಕಾರ್ಯ ಸಮಯ ಪಾಲನೆ ಕಾಯಕ ನಿಷ್ಠೆ ಕುರಿತು ವಿಶ್ರಾಂತ ಉಪನಿರ್ದೇಶಕರಾದ ಶಾಂತಗೌಡ ಪಾಟೀಲರು ತಮ್ಮ ವಿಶೇಷ ಉಪನ್ಯಾಸದಲ್ಲಿ ತಿಳಿಸಿದರು.

ಬಳಿಕ ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ಜಿಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿ ಲವೀಶ್ ಒರಡಿಯಾ ಹಾಗೂ ಜಿಲ್ಲಾ ಉಪನಿರ್ದೇಶಕ ಸಿ ಎಸ್ ಮೊಧೋಳ ಅವರು ಜಿಲ್ಲೆಯ ಶೈಕ್ಷಣಿಕ ಗುಣ ಮಟ್ಟದ ಕುರಿತು ಮಾತನಾಡಿದರು. ರಾಜ್ಯ,ಜಿಲ್ಲಾ ಹಾಗೂ ತಾಲೂಕಗಳ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಋಷಭೇಂದ್ರಯ್ಯ ಜಿ ಎಂ. ಉಪನಿರ್ದೇಶಕ ಅಭಿವೃದ್ಧಿ ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ,ನಗರ ಸೇರಿದಂತೆ ಯಾದಗಿರಿ ಸುರಪುರ ತಾಲೂಕಿನ ವಿವಿಧ ಸಂಘಗಳ ಹಾಗೂ ಅನುದಾನಿತ ಅನುದಾನರಹಿತ ಶಿಕ್ಷಕರ ಸಂಘಗಳ ಪದಾಧಿಕಾರಿಗಳು ಹಾಗೂ ಯಾದಗಿರಿ ಸುರಪುರ ಶಹಾಪುರ ತಾಲೂಕಿನ ಶಿಕ್ಷಕ ಶಿಕ್ಷಕಿ ವೃಂದದವರು ಉಪಸ್ಥಿತರಿದ್ದರು.

ವೇದಿಕೆಯ ಮೇಲಿನ ಗಣ್ಯ ಮಾನ್ಯರನ್ನು ಶಹಾಪುರ ಕ್ಷೇತ್ರ ಶಿಕ್ಷಣಾಧಿಕಾರಿ ವಾಯ್ ಎಸ್ ಹರಗಿ ಅವರು ಸ್ವಾಗತಿಸಿ ವಂದಿಸಿದರು.

# ರೈತರು ಬೆಳೆದ ಬೆಳೆ ಹಾನಿ: ಪ್ರತಿ ಎಕರೆಗೆ 25 ರಿಂದ 30 ಸಾವಿರ ಪರಿಹಾರಧನ ನೀಡಲು ತಹಸೀಲ್ದಾರರಿಗೆ ಭೋರೆ ಮನವಿ

**ಮಲ್ಲಮ್ಮ ನುಡಿ ವಾರ್ತೆ**
**ಹುಮನಾಬಾದ:**



ಬೀದರ ಜಿಲ್ಲೆಯಲ್ಲಿ ಆಗಸ್ಟ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ರೈತರು ಬೆಳೆದ ಬೆಳೆ ಅತಿವೃಷ್ಟಿಯಿಂದಾಗಿ ಹೆಸರು, ಉದ್ದು, ತೊಗರಿ, ಸೋಯಾಬೀನ್ ಸೇರಿದಂತೆ ಸಾವಿರಾರು ಎಕರೆಯ ಬೆಳೆ ಹಾನಿಯಾಗಿವೆ ಹಾಗೂ ನೂರಾರು ಮನೆಗಳು, ರಸ್ತೆ–ಸೇತುವೆಗಳು ಹಾಗೂ ಮೂಲಸೌಕರ್ಯಗಳಿಗೆ ಭಾರೀ ಹಾನಿಯಾಗಿದೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ದವಸ ಧಾನ್ಯ ಹಾಳಾಗಿವ. ವಿದ್ಯುತ್ ಸಂಪರ್ಕ ಇಲ್ಲದೇ ಜನರು ಪರದಾಡುವ ಸ್ಥಿತಿಯಾಗಿದೆ. ಆದ್ದ–ರಿಂದ ಸರ್ಕಾರ ತಕ್ಷಣ ನೆರವಿಗೆ ಬರಬೇಕು. ಹಾಗೂ ಸಂಬಂಧಪಟ್ಟ ಅಧಿಕಾರಿಗಳು ರೈತರ ಹೊಲಕ್ಕೆ ಹಾಗೂ ಮನೆಗಳಿಗ ಭೇಟ್ಟಿ ನೀಡಿ ಸರ್ವೆ ಮಾಡಿ ಅಲ್ಲಿನ ಪರಿಸ್ಥಿತಿಯನ್ನು ಆಲಿಸಿದ ನತಂರ ರೈತರಿಗೆ ಪ್ರತಿ ಎಕರೆಗೆ 25 ಸಾವಿರದಿಂದ 30 ಸಾವಿರದ ವರೆಗೆ ಪರಿಹಾರ ಧನ ನೀಡಬೇಕೆಂದು ಒತ್ತಾಯಿಸಿ ತಹಸೀಲ್ದಾರರಿಗೆ ಬರೆದ ಮನವಿ ಪತ್ರವನ್ನು ಬೀದರ ಯುವ ಕ್ರಾಂತಿ ಸಂಘಟನೆ ಜಿಲ್ಲಾಧ್ಯಕ್ಷ ಸಂಗಮೇಶ ಭೋರೆರವರು ಉಪ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದ್ದಾರೆ.

ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದ ಹಾಗೆ ಆಗಿದೆ. ರೈತರು ಕಷ್ಟ ಪಟ್ಟು ಬೆಳೆದ ಬೆಳೆಗಳಾದ ಉದ್ದು, ಹೆಸರು, ಸೋಯಾ, ತೋಗರಿ ವಿವಿಧ ಬೆಳೆಗಳು ನೆಲಕಚ್ಚಿದು ರೈತರು ಸಂಕಷ್ಟದಲ್ಲಿ ದಿನ ದುಡಿಯುವಂತೆ ಮಾಡಿದೆ. ಮಳೆಯಿಂದ ರೈತರ ಹೋಲದಲ್ಲಿನ ಫಲವತ್ತಾದ ಮಣ್ಣು ಕೊಚ್ಚಿಹೋಗಿದೆ. ಸರ್ಕಾರ ಕೂಡಲೆ ಈ ಕಡೆ ಗಮನ ಹರಿಸಿ ಸರ್ವೆ ನಡೆಸಿ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ. .ಹಾಗೆ ಬೀದರ ಜಿಲ್ಲೆಯಲ್ಲಿ ಎಷ್ಟು ರೈತರು ವಿಮೆ ಮಾಡಿಸಿದ್ದಾರೆ. ಅಷ್ಟು ರೈತರಿಗೆ ಸೂಕ್ತ ವಿಮಾ ಮೊತ್ತ ಜಮಾ ಆಗುವಂತೆ ಕ್ರಮ ಕೈಗೊಳ್ಳಬೇಕು. ಹಾಗೆ ಬೀದರ ಡಿಸಿಸಿ ಬ್ಯಾಂಕ ನಿಂದ ರೈತರಿಗೆ ಸಾಲ ಸಿಗದೆ ಇದ್ದುದರಿಂದ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ರೈತರಿಗೆ ಬೀದರ ಡಿಸಿಸಿ ಬ್ಯಾಂಕನಿಂದ ಸಾಲ ಕೊಡಿಸುವ ಕೇಲಸ ಆಗಬೇಕು. ಹಾಗೆ ಬೀದರ ಜಿಲ್ಲೆಯ ರೈತರ ಜೀವನಾಡಿ ಆಗಿರುವ BSSK ಸಹಕಾರ ಸಕ್ಕರೆ ಕಾರ್ಖಾನೆ ಬಂದ ಆಗಿರುವುದರಿಂದ ರೈತರು , ಮತ್ತು ಅಲ್ಲಿ ಕೇಲಸ ಮಾಡುವ ಕೂಲಿ ಕಾರ್ಮಿಕರು, ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಸರ್ಕಾರದ ಕೂಡಲೆ ಮುತುವರ್ಜಿ ವಹಿಸಿ ಆದಷ್ಟು ಬೇಗ ಬೀದರ ಸಹಕಾರ ಸಕ್ಕರೆ ಕಾರ್ಖಾನೆ ಪ್ರಾರಂಭಿಸಬೇಕು ಎಂದು ಯುವ ಕ್ರಾಂತಿ ಸಂಘಟನೆಯ ವತಿಯಿಂದ ಒತ್ತಾಯಿಸಿದ್ದಾರೆ. ಒಂದು ವೇಳೆ ಈ ಎಲ್ಲಾ ಸಮಸ್ಯೆಗಳನ್ನ ಈಡೇರಿಸದಿದ್ದಲ್ಲಿ ಮುಂಬರುವ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜಕುಮಾರ ಹಳ್ಳಿಖೇಡಕರ, ಮನೊಜ ಮಾನೆ, ಪಪ್ಪುರಾಜ ಚತುರೆ, ಮಹೇಶ ಕಟ್ಟಿಮನಿ, ದಯಾನಂದ ಸ್ವಾಮಿ, ಕರಣ ಜಾನವಿರ, ಅಮರ ಸಿಂಧನಕೇರಾ, ಅರುಣ ಮನಕೋಜಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸುಸ್ಥಿತ ಸಮಾಜ ನಿರ್ಮಾಣಕ್ಕಾಗಿ ಅಕ್ಷರ ಸಾಕ್ಷರತೆ ಒಂದು ಸಾಧನ : ಉಪಕಾರ್ಯದರ್ಶಿ ಕೃಷ್ಣಮೂರ್ತಿ



**ಮಲ್ಲಮ್ಮ ನುಡಿವಾರ್ತೆ**
**ಕುಕನೂರ:**

ಕುಕನೂರ ತಾಲೂಕಿನ ತಳಕಲ್ ಗ್ರಾಮದಲ್ಲಿ ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಜಿಲ್ಲಾಡಳಿತ ಕೊಪ್ಪಳ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಯಲಬುರ್ಗಾ, ಹಾಗೂ ಗ್ರಾಮ ಪಂಚಾಯತಿ ತಳಕಲ್ ರವರ ಸಹಯೋಗದಲ್ಲಿ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ತಳಕಲ್ ದಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಜಹಿರಾ ಬೇಗಂ ಜಾಕೀರ್ ಹುಸೇನ್ ಕೊಪ್ಪಳ ರವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮವನ್ನು ಧ್ವಜಾರೋಹಣ ಮಾಡುವ ಮೂಲಕ ಮಾನ್ಯ ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಜಿಲ್ಲಾ ಪಂಚಾಯತ ಕೊಪ್ಪಳ ಕೃಷ್ಣಮೂರ್ತಿ ಯವರು ನೆರವೇರಿಸಿ *ಸಾಕ್ಷರತೆ* ಎಂಬುದು ಸಮಾಜದಲ್ಲಿ ನಾವೆಲ್ಲ ಯಾವ ರೀತಿ ಬಾಳಬೇಕು, ಬದುಕಬೆಕು ಎಂಬುದನ್ನು ಕಲಿಸುತ್ತದೆ. ಅದಕ್ಕಾಗಿ ಎಲ್ಲರೂ ಸಾಕ್ಷರರಾಗಬೇಕು.

ಇಂದಿನ ದಿನಮಾನದಲ್ಲಿ ಡಿಜಿಟಲ್ ಸಾಕ್ಷರತೆಯೂ ಕೂಡಾ ಅಷ್ಟೇ ಅವಶ್ಯಕತೆ ಇದೆ.

*ಉತ್ತಮ ಸಾಕ್ಷರತೆಯಿಂದ ಉನ್ನತ ಸ್ಥಾನಮಾನ, ಸಮಾಜದಲ್ಲಿ ಗೌರವ, ಉತ್ತಮ ಉದ್ಯೋಗವಕಾಶ ಸಿಗುತ್ತದೆ. ಮತ್ತು ಉತ್ತಮ ಸಮಾಜ ನಿರ್ಮಾಣ ವಾಗುತ್ತದೆ.* ಅಕ್ಷರ ಜ್ಞಾನದ ಜ್ಯೋತೆಗೆ ಸಾಕ್ಷರತೆಯೂ ಕೂಡಾ ಅವಶ್ಯವಿದೆ ಎಂದರು.

ವಿಶೇಷತೆ ತಳಕಲ್ ಗ್ರಾಮದ ಒಖಅ ವಿದ್ಯಾರ್ಥಿನಿ, ಕುನಾರಿ ಬಸವರಶ್ರೀ ಸುರೇಶ್ ಭೀಮರಡ್ಡಿ ರವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿಧ್ಯಾಲಯದಲ್ಲಿ ಸ್ವರ್ಣ ಪದಕ ಪಡೆದ್ದಕ್ಕಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರಂಗೋಲಿ ಸ್ಪರ್ದೆ, ಭಾಷಣ ಸ್ಪರ್ದೆ, ಹಾಡಿನ ಸ್ಪರ್ದೆ ಯಲ್ಲಿ ವಿಜೇತರಾದ ಮಕ್ಕಳಿಗೆ ಸನ್ಮಾನವನ್ನು ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳಾದ ಐಆ ಜೋಷಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಯಲಬುರ್ಗಾ ಅಶೋಕ್ ಗೌಡ್ರು, ಜಿಲ್ಲಾ ಕಾರ್ಯಕ್ರಮ ಸಹಾಯಕರು ಚಂದ್ರಪ್ಪ ಬಂಡಿ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಜಿಂದಾಬಿ ಗುಡುಗುಡಿ

ಪಂಚಾಯತ ಅಬಿವೃದ್ಧಿ ಅಧಿಕಾರಿ ವಿರನಗೌಡ್ರ ಚೆನ್ನವೀರಗೌಡ್ರ, ಸದಸ್ಯರಾದ ತಿಮ್ಮಣ್ಣ ಚೌಡಿ, ಮಹಮ್ಮದ್ ರಾಜುಣಟಿಜಜಜಿಟಿಜಜದ್ದೀನ್ ಕೊಪ್ಪಳ, ಉಮೇಶ್ ಗೌಡ್ರ ಪೊಲೀಸ್ ಪಾಟೀಲ್, ಕವಿತಾ ಮಲ್ಲಿಕಾರ್ಜುನ್ ಚಲವಾದಿ, ಎಚ್ ಕೆ ಹೈತಾಪುರ್, ಗೀತಾ ತತ್ತಿ, ಚೈತ್ರ ಹಿರೇಗೌಡ್ರು, ದೇವಕ್ಕ ಬಂಗಿ, ವಿಜಯಲಕ್ಷ್ಮಿ ಹಿಂದಲಮನಿ, ರೇಣುಕಾ ಮಡಿವಾಳರ್, ಶ್ರೀಧರ್ ಹಣವಾಳ, ವೀರೇಶ್ ಬಿಸನಹಳ್ಳಿ, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಾದ ಆದಿಬಸಯ್ಯ ಹಿರೇಮಠ್ ಗ್ರಾಮ ಪಂಚಾಯತಿ ಸಿಬ್ಬಮದಿಯವರು, ತಳಕಲ್ ಗ್ರಾಮದ ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರು, ಎಲ್ಲಾ ಶಾಲೆಯ ಮಕ್ಕಳು ಹಾಗೂ ಮಕ್ಕಳ ಪಾಲಕರು ಸಾರ್ವಜನಿಕರು ಹಾಜರಿದ್ದರು

## ಬಿಎಂಸಿಆರ್‌ಸಿ: ಹುದ್ದೆಗಳ ಅಮಿಷಗಳಿಗೆ ಕಿವಿಗೊಡದಿರಿ

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ,**

ಸೆ.09–ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಬಳ್ಳಾರಿಯ ಸಮೂಹ ಆಸ್ಪತ್ರೆಗಳಲ್ಲಿ ವಿವಿಧ ಹುದ್ದೆಗಳನ್ನು ಕೊಡಿಸುವುದಾಗಿ ಆಕಾಂಕ್ಷಿಗಳಿಂದ ಹಣ ಪಡೆದು ಮೋಸಗೊಳಿಸುತ್ತಿರುವುದು ಕಂಡುಬಂದಿದ್ದು, ಸಾರ್ವಜನಿಕರು ಯಾವುದೇ ಆಸೆ, ಆಮಿಷಗಳಿಗೆ ಕಿವಿಗೊಡದೇ ಜಾಗರಾಕರಾಗಿರಬೇಕು ಎಂದು ಬಿಎಂಸಿಆರ್‌ಸಿ ಯ ನಿರ್ದೇಶಕರು ತಿಳಿಸಿದ್ದಾರೆ.

ಒಂದು ವೇಳೆ ಅಂತಹ ಯಾವುದೇ ಪ್ರಸಂಗಗಳು ಕಂಡುಬಂದಲ್ಲಿ ಬಿಎಂಸಿಆರ್‌ಸಿ ಕಚೇರಿ ಗಮನಕ್ಕೆ ತರಬೇಕು ಹಾಗೂ ಸರ್ಕಾರದಿಂದ ಹುದ್ದೆಗಳು ಮಂಜೂರಾದಲ್ಲಿ ನಿಯಮಾನುಸಾರ ಸಾರ್ವಜನಿಕರ ಗಮನಕ್ಕೆ ತಂದು, ಪ್ರಕಟಣೆ ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ ಎಂದು ಅವರು ಪ್ರಟಕಣೆಯಲ್ಲಿ ತಿಳಿಸಿದ್ದಾರೆ.

## ಕಂಪ್ಲಿ ಪುರಸಭೆ: ಆಕ್ಷೇಪಣೆಗಳಿಗೆ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ,**

ಸೆ.09–ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ 20 ರಲ್ಲಿನ ಮಾರುತಿ ನಗರದ (ಶಿಭರದಿನ್ನಿ) ಸರ್ವೆ ನಂ.1248 ಮತ್ತು 1249 ರಲ್ಲಿ ಇರುವ ಉದ್ದ 56.27*ಅಗಲ 24.92 ಸೇರಿ ಒಟ್ಟು 1401 ಚ.ಅಡಿಯ ಪುರಸಭೆ ಮಾಲೀಕತ್ವದ ಕಟ್ಟಡ (ಕಂಪ್ಯೂಟರ್ ತರಬೇತಿ ಕೇಂದ್ರ) ವನ್ನು, ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕಾಗಿ ಬಾಡಿಗೆ ನೀಡಲು ಉದ್ದೇಶಿಸಲಾಗಿದ್ದು, ಈ ಕುರಿತು ಸಾರ್ವಜನಿಕರಿಂದ ದೂರು, ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆಗೊಂಡ 15 ದಿನಗಳೊಳಗಾಗಿ ಪುರಸಭೆ ಕಚೇರಿಗೆ ಸಲ್ಲಿಸಬಹುದು ಎಂದು ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಅವಧಿ ಮೀರಿ ಬರುವ ಯಾವುದೇ ತಕರಾರು, ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಳ್ಳಾರಿ: ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ,**

ಸೆ.09–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳನ್ನು ಪ್ರೋತ್ಸಾಹಿಸಲು ಜಿಲ್ಲಾ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ನಾವೀನ್ಯತೆ, ತಾರ್ಕಿಕ ಸಾಧನೆಗಳು (ಉದಾ:ಎರಡು ಅನುಕ್ರಮ ವರ್ಷಗಳಲ್ಲಿ ಗಣಿತಶಾಸ್ತ್ರದಲ್ಲಿ ಮೊದಲನೇ ಸ್ಥಾನ) ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 5 ರಿಂದ 18 ವರ್ಷದೊಳಗಿನ ವಯೋಮಿತಿ ಒಳಗಿರುವ ಮಕ್ಕಳನ್ನು ಆಯ್ಕೆ ಮಾಡಲಾಗುವುದು. ಈ ಜಿಲ್ಲಾ ಮಟ್ಟದ ಪ್ರಶಸ್ತಿಯು ರೂ.10,000 ನಗದು ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

*ಷರತ್ತುಗಳು:*

5 ರಿಂದ 18 ವರ್ಷ ವಯೋಮಿತಿ ಹೊಂದಿರಬೇಕು. ವಯಸ್ಸಿನ ಬಗ್ಗೆ ಜನನ ಪ್ರಮಾಣ ಪತ್ರ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಣ ಮಾಡಿಸಿದ ಪ್ರತಿ ಲಗತ್ತಿಸಬೇಕು.

ಪ್ರಸ್ತಕ ವರ್ಷದ ಪ್ರಶಸ್ತಿಗೆ ನಿಗದಿಪಡಿಸಿದ ಪ್ರತಿಭೆಯನ್ನು ಹೊಂದಿರುವ ಬಗ್ಗೆ ಪ್ರಮುಖ ದಿನಪ್ರತಿಕೆಯಲ್ಲಿ ಪ್ರಕಟಗೊಂಡಿರುವ ಪತ್ರಿಕೆ ತುಣುಕು/ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು.

ಅಂತರಾಷ್ಟ್ರೀಯ, ರಾಷ್ಟ್ರೀಯ ರಾಜ್ಯ ಮಟ್ಟದಲ್ಲಿ ಭಾಗವಹಿಸಿರುವ ಪ್ರಶಸ್ತಿ ಪಡೆದಿರುವ ಮಾಹಿತಿ. ಹಿಂದಿನ ವರ್ಷಗಳಲ್ಲಿ ಯಾವುದೇ ಕ್ಷೇತ್ರದಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ಪಡೆದ ಮಕ್ಕಳಿಗೆ ಪುನಃ ಪ್ರಶಸ್ತಿ ನೀಡಲು ಅವಕಾಶವಿರುವುದಿಲ್ಲ. ಅರ್ಜಿದಾರರು ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರಬೇಕು. ಸಾಧಿಸಿರುವ ಪ್ರತಿಭೆಯನ್ನು ಸಮರ್ಥಿಸಲು ಪೂರಕ ದಾಖಲಾತಿಗಳನ್ನು ಸಲ್ಲಿಸಬೇಕು.

ಅರ್ಜಿ ನಮೂನೆಗಳನ್ನು ಜಿಲ್ಲೆಯ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಳ್ಳಾರಿ ಇವರಿಂದ ಪಡೆದು ಕನ್ನಡ ಭಾಷೆಯಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಅಕ್ಟೋಬರ್ 10 ರೊಳಗೆ ಇದೇ ಕಚೇರಿಗೆ ಸಲ್ಲಿಸಿಬೇಕು.

ಹೆಚ್ಚಿನ ಮಾಹಿತಿಗಾಗಿ ನಗರದ ಎಸ್.ಪಿ.ವೃತ್ತದ ಬಳಿಯ ದೇವಿನಗರದ ಸ್ತ್ರೀ ಸೇವಾನಿಕೇತನ ಆವರಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ದೂ.08392–266219 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅನಾಮಧೇಯ ಮೃತ ಶವ: ವಾರಸುದಾರರ ಪತ್ತೆಗೆ ಮನವಿ

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ,**

ಸೆ.09–ತಾಲ್ಲೂಕಿನ ಮೋಕ ಪೊಲೀಸ್ ಠಾಣೆ ವ್ಯಾಪ್ತಿಯ ಕರ್ರಮ್ಮ ಕ್ಯಾಂಪ್‌ನ ಕಾಲುವೆಯಲ್ಲಿ ಸುಮಾರು 55 ರಿಂದ 60 ವರ್ಷದ ಅನಾಮಧೇಯ ಮೃತ ಪುರುಷನ ಶವವು ಸೆ.08 ರಂದು ತೇಲಿಕೊಂಡು ಬಂದಿದ್ದು, ಮೃತನ ವಾರಸುದಾರರು ತಿಳಿದಿರುವುದಿಲ್ಲ. ಪತ್ತೆಗೆ ಸಹರಿಸಬೇಕು ಎಂದು ಮೋಕ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ಚಹರೆ ಗುರುತು: ಎತ್ತರ ಅಂದಾಜು 5.1 ಅಡಿ, ದೃಢವಾದ ಮೈಕಟ್ಟು, ಮೃತನ ದೇಹದ ಮೇಲೆ ನೀಲಿ ಮತ್ತು ಬಿಳಿ ಬಣ್ಣದ ತುಂಬು ತೋಳಿನ ಅಂಗಿ ಹಾಗೂ ಹಸಿರು ಬಣ್ಣದ ಬನಿಯನ್ ಇದೆ. ಮೃತ ದೇಹವು ತಾಜ ಸ್ಥಿತಿಯಲ್ಲಿದ್ದು, ತಲೆ, ಮುಖ ಮತ್ತು ತುಟಿಗಳಿಗೆ ಜಲಚರ ಪ್ರಾಣಿಗಳು ಕಿತ್ತು ತಿಂದಂತಿರುತ್ತದೆ. ಯಾವುದೇ ಚಹರೆ ಗುರುತುಗಳು ಕಂಡುಬಂದಿರುವುದಿಲ್ಲ.

ಅನಾಮಧೇಯ ಮೃತನ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಎಸ್‌ಪಿ ಕಚೇರಿ ದೂ.08392–258100, ಬಳ್ಳಾರಿ ಗ್ರಾಮಾಂತರ ಡಿಎಸ್‌ಪಿ ದೂ.08392–276000, ಮೊ.9480803021, ಪಿ.ಡಿ ಹಳ್ಳಿ ವೃತ್ತದ ಸಿಪಿಐ ದೂ.08392–270480, ಮೊ.9480803031 ಅಥವಾ ಮೋಕ ಪೊಲೀಸ್ ಠಾಣೆಯ ಪಿಎಸ್‌ಐ ದೂ.08922–93228, ಮೊ.9480803050 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಳ್ಳಾರಿ: ಪೋಷಣೆ ಮಾಸಾಚರಣೆ ಕಾರ್ಯಕ್ರಮದಲ್ಲಿ ನ್ಯಾ.ರಾಜೇಶ್ ಎನ್.ಹೊಸಮನೆ ಹೇಳಿಕೆ

## ಮಕ್ಕಳ, ಗರ್ಭಿಣಿ ಮಹಿಳೆಯರ ಆರೋಗ್ಯ ಜವಾಬ್ದಾರಿಯಾಗಲಿ

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ,**

ಸೆ.09–ಜಿಲ್ಲೆಯಲ್ಲಿ ಗರ್ಭಿಣಿ, ಬಾಣಂತಿಯರು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಕಾಳಜಿಯ ಮೂಲಕ ಅವರ ಆರೋಗ್ಯ ಜಾಗ್ರತೆಗಾಗಿ ಅಂಗನವಾಡಿ ಕಾರ್ಯಕರ್ತೆಯರು ಜವಾಬ್ದಾರಿ ವಹಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ, ಬಳ್ಳಾರಿ(ನಗರ) ಹಾಗೂ ಗ್ರಾಮಾಂತರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಗಾಂಧಿನಗರ ವಲಯದ ಸತ್ಯಸಾಯಿ ಕಾಲೋನಿ ಮತ್ತು ಗೊಲ್ಲ ನರಸಪ್ಪ ಕಾಲೋನಿಯ ಅಂಗನವಾಡಿ ಕೇಂದ್ರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪೋಷಣೆ ಮಾಸಾಚರಣೆ ಕಾರ್ಯಕ್ರಮವನ್ನು ಸಿರಿಧಾನ್ಯಗಳನ್ನು ಮಡಿಕೆಗೆ ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯವಂತ ಮಕ್ಕಳಿಂದ ದೇಶ ಸದೃಢವಾಗುತ್ತದೆ. ಗರ್ಭಿಣಿಯರಿಗೆ ರಾಷ್ಟ್ರೀಯ ಪೋಷಣ್ ಅಭಿಯಾನದ ಮೂಲಕ ಪೌಷ್ಟಿಕಾಂಶ ಭರಿತ ಆಹಾರ ನೀಡಲಾಗುತ್ತಿದೆ. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಹಿಂದಿನಿಂದಲೂ ಈ ಭಾಗದಲ್ಲಿ ಅಪೌಷ್ಟಿಕತೆ ಸಮಸ್ಯೆ ಇದೆ. ಮಹಿಳೆಯರು ಯಾವ ರೀತಿಯಲ್ಲಿ ಪೌಷ್ಟಿಕ ಆಹಾರ ಸೇವಿಸಬೇಕು. ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಹೇಗೆ ನೀಡಬೇಕು ಎಂಬುದರ ಕುರಿತು ಈ ಪೋಷಣೆ ಅಭಿಯಾನದ ಸಂದರ್ಭದಲ್ಲಿ ತಿಳಿಸಿಕೊಡಬೇಕು ಎಂದು ಹೇಳಿದರು.

ರಾಷ್ಟ್ರೀಯ ಪೋಷಣೆ ಅಭಿಯಾನ ಯೋಜನೆಯ ಅಂಗವಾಗಿ ಪ್ರತಿ ವರ್ಷ ಸೆಪ್ಟೆಂಬರ್ ಮಾಹೆಯನ್ನು ಪೋಷಣೆ ಮಾಸಾಚರಣೆ ಆಚರಿಸಲಾಗುತ್ತಿದ್ದು,



ಇದರ ಉದ್ದೇಶ ಪೌಷ್ಟಿಕತೆ, ಕೈತೋಟದ ನಿರ್ಮಾಣ, ಅಪೌಷ್ಟಿಕ ಮಕ್ಕಳ ಗುರುತಿಸುವಿಕೆ ಮತ್ತು ಮಕ್ಕಳ ಪೂರಕ ಪೌಷ್ಟಿಕತೆಯ ಹಾಗೂ ರಕ್ತ ಹೀನತೆಯ ಬಗ್ಗೆ ಜಾಗೃತಿ ಮೂಡಿಸುವುದಾಗಿದೆ ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ ಅವರು ಮಾತನಾಡಿ, ಇಂದು ನಮ್ಮ ಜೀವನ ಶೈಲಿ ಬದಲಿಸಿಕೊಳ್ಳಬೇಕಿದೆ. ತಾಯಿ ಮಗುವಿನ ಆರೋಗ್ಯದ ಕುರಿತ ಕೇಂದ್ರ ಸರ್ಕಾರ ಯೋಜನೆಯ ಪೋಷಣೆ ಅಭಿಯಾನ ಯೋಜನೆಯಡಿ ಪೌಷ್ಟಿಕಾಂಶ ಭರಿತ ಆಹಾರ ಸೇವನೆ ಸೇರಿದಂತೆ ಹಲವಾರು ಆರೋಗ್ಯ ಸಲಹೆಗಳನ್ನು ನೀಡಲಾಗುತ್ತದೆ. ರಾಷ್ಟ್ರೀಯ ಪೋಷಣೆ ಅಭಿಯಾನ ಕಾರ್ಯಕ್ರಮ ನಮ್ಮ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದು ಮಾದರಿ ಜಿಲ್ಲೆ ಮಾಡಲು ಶ್ರಮಿಸೋಣ ಎಂದು ತಿಳಿಸಿದರು.

ಬಳ್ಳಾರಿ ನಗರ ಮತ್ತು ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೋಹನ್ ಕುಮಾರಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಈ ಒಂದು ವಾಕ್ಯ ಸರಿಯಾಗಿ ಅರ್ಥಮಾಡಿಕೊಂಡರೆ ನಾವು ಆರೋಗ್ಯವಂತರಾಗಿ ಇರಬಹುದು ಎಂದರು.

ಕಾರ್ಯಕ್ರಮದಲ್ಲಿ ಈ ಬಾರಿಯ "ಸುಪೋಷಿತ ಕಿಶೋರಿ, ಸಶಕ್ತ ನಾರಿ" ಎಂಬ ಘೋಷವಾಕ್ಯದಂತೆ ತಾಯಿಯ ಹೆಸರಿನಲ್ಲಿ ಒಂದು ಗಿಡ ನೆಡುವ ಅಭಿಯಾನ ಕೈಗೊಳ್ಳಲಾಯಿತು. ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ ಮಾಡಲಾಯಿತು. ವಿವಿಧ ಪೌಷ್ಟಿಕಾಂಶ ಭರಿತ ಆಹಾರಗಳ ಪ್ರದರ್ಶನ ನಡೆಯಿತು.

ಈ ಸಂದರ್ಭದಲ್ಲಿ ಶಿಶು ಅಭಿವೃದ್ಧಿ ಯೋಜನೆ ಬಳ್ಳಾರಿ (ನಗರ) ದ ಎಂಟು ವೃತ್ತಗಳಾದ ಬಂಡಿಹಟ್ಟಿ, ಕೌಲ್‌ಬಜಾರ್, ಬ್ರೂಸ್‌ಪೇಟೆ, ಗಾಂಧಿನಗರ, ದೇವಿನಗರ, ಗುಗ್ಗರಹಟ್ಟಿ, ಮರಿಸ್ವಾಮಿ ಮಠ, ಮಿಲ್ಲರಪೇಟೆ ವಲಯದ ಎಲ್ಲಾ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕತೆ–ಯರು, ಪೋಷಣೆ ಅಭಿಯಾನ ಸಿಬ್ಬಂದಿಗಳು ಮತ್ತು ಇಲಾಖೆಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಬಿಸಿಎಂ ಹಾಸ್ಟೇಲ್‌ಗೆ ಹೊಸ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**
**ರಾಯಚೂರು:**

ಸೆಪ್ಟೆಂಬರ್ 09 – ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿಗೆ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿನಿಲಯಗಳಿಗೆ ವೃತ್ತಿಪರ ಪದವಿ ಮತ್ತು ಸ್ನಾತ–ಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡಲಾಗುವುದು. ಆಸಕ್ತ ವಿದ್ಯಾರ್ಥಿಗಳು, ಎಸ್‌ಹೆಚ್‌ಪಿ ತಂತ್ರಾಂಶದ ಮೂಲಕ ಅಕ್ಟೋಬರ್ 04 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅಕ್ಟೋಬರ್ 08 ರಂದು ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾಣ ಅಧಿಕಾರಿಗಳು ಪರಿಶೀಲನೆ ಮಾಡಲಿದ್ದಾರೆ.

## ಪ್ರತಿ ಮಗುವಿನ ಘನತೆ ಎತ್ತಿ ಹಿಡಿಯುವುದು ನಮ್ಮೆಲ್ಲರ ಕರ್ತವ್ಯ: ಎಡಿಸಿ ಸಿದ್ರಾಮೇಶ್ವರ

**ಮಲ್ಲಮ್ಮ ನುಡಿವಾರ್ತೆ**
**ಕೊಪ್ಪಳ:**

ಪ್ರತಿ ಮಗುವಿನ ಹಕ್ಕುಗಳನ್ನು ಅನುಭವಿಸಲು ಮತ್ತು ಆನಂದಿಸಲು ಅನುಕೂಲಕರವಾಗುವ ಪರಿಸರವನ್ನು ನಿರ್ಮಿಸಿ, ಮಗುವಿನ ಘನತೆಯನ್ನು ಎತ್ತಿಹಿಡಿಯುವುದು ನಮ್ಮೆಲ್ಲರ ಕರ್ತವ್ಯ ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಹೇಳಿದರು.



ಶನಿವಾರದಂದು ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಯುನಿಸೆಫ್–ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳರವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಎಲ್ಲಾ ವಸತಿ ನಿಲಯಗಳ ನಿಲಯ ಪಾಲಕರಿಗೆ, ಪ್ಯಾರಾ ಮೆಡಿಕಲ್ ಕಾಲೇಜುಗಳ ಪ್ರಾಂಶುಪಾಲರು ಮತ್ತು ಮುಖ್ಯಸ್ಥರುಗಳಿಗೆ ಹಮ್ಮಿಕೊಳ್ಳಲಾಗಿದ್ದ ಮಕ್ಕಳ ಹಕ್ಕುಗಳು, ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳು ಮತ್ತು ಮಕ್ಕಳ ರಕ್ಷಣಾ ನೀತಿಗಳ ಕುರಿತ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿನ ಪ್ರತಿ ಮಗುವು ಸುರಕ್ಷಿತ, ರಕ್ಷಣಾತ್ಮಕ ಮತ್ತು ಸಶಕ್ತ ಪರಿಸರದಲ್ಲಿ ಬೆಳೆಯುವುದರೊಂದಿಗೆ, ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಮಗುವು ತನ್ನ ಸಾಮರ್ಥ್ಯವನ್ನು ತಲುಪಲು ಅವಕಾಶಗಳನ್ನು ಒದಗಿಸಬೇಕು. ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಲು ಮತ್ತು ಆನಂದಿಸಲು ಅನುಕೂಲಕರವಾದ ಪರಿಸರವನ್ನು ನಿರ್ಮಿಸಲು ರಾಜ್ಯದಲ್ಲಿನ ಎಲ್ಲಾ ಭಾಗೀದಾರರು ಅಂದರೆ ಪೋಷಕರು, ಆರೈಕೆ ಸೇವೆಗಳನ್ನು ನೀಡುವವರು ಮತ್ತು ಸಮುದಾಯ ಒಟ್ಟುಗೂಡಿ ಕೆಲಸ ಮಾಡುವುದರೊಂದಿಗೆ ಮಕ್ಕಳ ಕುರಿತಾದ ತಾರತಮ್ಯಗಳನ್ನು ನಿವಾರಿಸುವ ಹಾಗೂ ಮಕ್ಕಳ ಭಾಗವಹಿಸುವಿಕೆ, ಸಂಭಾಷಣೆ ಮತ್ತು ಅಭಿಪ್ರಾಯಗಳನ್ನು ಗೌರವಿಸುವುದರೊಂದಿಗೆ ಮಗುವಿನ ಘನತೆಯನ್ನು ಎತ್ತಿ ಹಿಡಿಯುವುದು ನಮ್ಮೆಲ್ಲರ ಕರ್ತವ್ಯ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 (ಕೆಎಸ್‌ಸಿಪಿಪಿ)ಯು ಮಕ್ಕಳ ಅಧಿಪತ್ಯದ ತತ್ವವನ್ನಾಧರಿಸಿದ ಮಕ್ಕಳ ರಕ್ಷಣೆಯ ಒಂದು ಸಮಗ್ರ ಭಾಗವಾಗಿದೆ. ಆದ್ದರಿಂದ ನಿಮ್ಮ ವಸತಿ ನಿಲಯ/ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023ನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು ಮತ್ತು ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಜಾಗೃತಿಯನ್ನು ಮೂಡಿಸುವ ಮೂಲಕ ಮಕ್ಕಳ ಮೇಲಾಗುವ ವಿವಿಧ ರೀತಿಯ ಅಪರಾಧಗಳನ್ನು ತಡೆಗಟ್ಟಿ ಮಕ್ಕಳಿಗೆ ಸುರಕ್ಷಿತ ವಾತಾವರಣವನ್ನು ನಿರ್ಮಿಸಿ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ ರಾಮತ್ನಾಳ ಅವರು ಮಾತನಾಡಿ, ಜಿಲ್ಲೆಯ ವಸತಿ ಶಾಲೆಗಳಲ್ಲಿ ಮಕ್ಕಳಿಗೆ ಲೈಂಗಿಕ ಕಿರುಕುಳ, ದೌರ್ಜನ್ಯ ಎಸಗಿದ ಪ್ರಕರಣಗಳು ಮತ್ತು ವಸತಿ ನಿಲಯದಿಂದ ಮಕ್ಕಳು ಈಜಾಡಲೆಂದು ತೆರಳಿದ ಸಂದರ್ಭದಲ್ಲಿ ಮೃತಪಟ್ಟ ಪ್ರಕರಣಗಳು ವರದಿಯಾಗಿವೆ. ಭಾರತ ಸಂವಿಧಾನವು ರಾಷ್ಟ್ರದಲ್ಲಿನ ಎಲ್ಲಾ ಮಕ್ಕಳ ಪಾಲನೆ ಮತ್ತು ಪೋಷಣೆಯ ಜವಾಬ್ದಾರಿ ಸರಕಾರದ್ದೆಂದು ತಿಳಿಸುತ್ತದೆ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಸರಕಾರವು ಹಿಂದುಳಿದ ವರ್ಗಗಳ ಉನ್ನತಿಗಾಗಿ ವಸತಿ ನಿಲಯ, ವಸತಿ ಶಾಲೆಗಳನ್ನು ಆರಂಭಿಸಿದ್ದು, ಇಂತಹ ಸಂಸ್ಥೆಗಳಲ್ಲಿ ವಾಸಿಸುವ ಮಕ್ಕಳ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದೆ. ವಸತಿ ನಿಲಯದ ಮಕ್ಕಳ ಮೇಲಿನ ಯಾವುದೇ ರೀತಿಯ ಅಪರಾಧ ಹಾಗೂ ಮಕ್ಕಳ ನಿರ್ಲಕ್ಷ್ಯ ಸಲ್ಲದು ಎಂದು ಅವರು ಹೇಳಿದರು.

ರಾಜ್ಯದ ಉಚ್ಛ ನ್ಯಾಯಾಲಯವು ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023 ರ ಅಳವಡಿಕೆ ಕಡ್ಡಾಯವೆಂದು ನಿರ್ದೇಶಿಸಿದೆ. ಈ ಕುರಿತು ಜಿಲ್ಲೆಯಲ್ಲಿ ಈಗಾಗಲೇ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ, ವಸತಿ ನಿಲಯಗಳ ಪ್ರಾಚಾರ್ಯರಿಗೆ ತರಬೇತಿಯನ್ನು ನೀಡಿದೆ. ಜಿಲ್ಲೆಯಲ್ಲಿ ಎಲ್ಲಾ ಭಾಗೀದಾರರಿಗೆ ತರಬೇತಿ ಪೂರ್ಣಗೊಂಡಿರುತ್ತದೆ. ಆದ್ದರಿಂದ ಮಕ್ಕಳ ರಕ್ಷಣಾ ನೀತಿಯನ್ನು ಕಡ್ಡಾಯವಾಗಿ ತಮ್ಮ ಶೈಕ್ಷಣಿಕ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಿ, ಜಿಲ್ಲಾಧಿಕಾರಿಗಳಿಂದ ಅನುಮೋದನೆಯನ್ನು ಪಡೆದು ವರದಿಯನ್ನು ಒಂದು ತಿಂಗಳೊಳಗಾಗಿ ಆಯೋಗ–ಕ್ಕೆ ಸಲ್ಲಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸುತ್ತಾ, ನಿರ್ಲಕ್ಷ್ಯ ವಹಿಸಿದಲ್ಲಿ ಶಿಸ್ತು ಕ್ರಮಗಳಿಗೆ ಮೇಲಾಧಿಕಾರಿಗಳಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಶಿಫಾರಸು ಮಾಡುತ್ತದೆಂದು ತಿಳಿಸಿದರು. ಮಕ್ಕಳಿಗೆ ಮಕ್ಕಳ ಹಕ್ಕುಗಳ ಮತ್ತು ಮಕ್ಕಳ ಪರವಾದ ಕಾನೂನುಗಳ ಕುರಿತು ವ್ಯಾಪಕ ಜಾಗೃತಿಯನ್ನು ಮೂಡಿಸಿ ಎಂದು ಆಯೋಗದ ಸದಸ್ಯರು ತಿಳಿಸಿದರು.

ಯುನಿಸೆಫ್–ಮಕ್ಕಳ ರಕ್ಷಣಾ ಯೋಜನೆ ಕೊಪ್ಪಳದ ವಿಭಾಗೀಯ ಸಂಯೋಜ–ಕರಾದ ಡಾ. ಕೆ.ರಾಘವೇಂದ್ರ ಭಟ್ ಅವರು ಮಾತನಾಡಿ, ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ರಕ್ಷಣಾ ನೀತಿ –2016 ಪರಿಷ್ಕರಣೆ–2023ರ ಕುರಿತು ಹಾಗೂ ಯುನಿಸೆಫ್–ಮಕ್ಕಳ ರಕ್ಷಣಾ ಯೋಜನೆ ಕೊಪ್ಪಳದ ವ್ಯವಸ್ಥಾಪಕರಾದ ಹರೀಶ್ ಜೋಗಿ ಅವರು ಮಾತನಾಡಿ, ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಕರ್ನಾಟಕ ತಿದ್ದುಪಡಿ–2023ರ ಕುರಿತು ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮಾಹಾಂತಸ್ವಾಮಿ ಪೂಜಾರ ಅವರು ಮಿಷನ್ ವಾತ್ಸಲ್ಯ ಕುರಿತು ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರಾದ ಪ್ರಕಾಶ ವಡ್ಡರ್, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪ್ರಕಾಶ ಕಡಗದ, ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ಉಪನಿರ್ದೇಶಕರಾದ ಜಗದೀಶ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಾದ ಅಜ್ಮೀರ ಅಲಿ, ಸೇರಿದಂತೆ ಜಿಲ್ಲೆಯ ಎಲ್ಲಾ ಇಲಾಖೆಗಳ ವಸತಿ ನಿಲಯಗಳ ನಿಲಯ ಪಾಲಕರು, ಪ್ಯಾರಾ ಮೆಡಿಕಲ್ ಕಾಲೇಜುಗಳ ಮುಖ್ಯಸ್ಥರು, ಪ್ರಾಂಶುಪಾಲರು ಮತ್ತು ಮಕ್ಕಳ ಪಾಲನಾ ಸಂಸ್ಥೆಗಳ ಅಧೀಕ್ಷಕರು ಭಾಗವಹಿಸಿದ್ದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಶಿವಲೀಲಾ ವನ್ನೂರು ನಿರೂಪಿಸಿದರು, ರವಿಕುಮಾರ ಪವಾರ ಸ್ವಾಗತಿಸಿದರು, ಪ್ರತಿಭಾ ಪ್ರಾರ್ಥಿಸಿದರು, ಪ್ರಶಾಂತರೆಡ್ಡಿ ವಂದಿಸಿದರು.

## ಸೆ.10 ರಂದು ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ,**

ಸೆ.09– ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯ 11 ಕೆವಿಯ ವಿದ್ಯುತ್ ಲೈನ್‌ಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುದರಿಂದ ಸೆ.10 ರಂದು ಮಧ್ಯಾಹ್ನ 01 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಎಫ್–07 ಮತ್ತು ಎಫ್–09 ಫೀಡರ್‌ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಗಳು:*

ಎಫ್–07 ಫೀಡರ್ ಮಾರ್ಗದ ಸಂಗನಕಲ್ಲು ರಸ್ತೆ, ಎಸ್.ಎನ್.ಪೇಟೆ 3ನೇ ಕ್ರಾಸ್, ಜಿಲ್ಲಾ ಆಸ್ಪತ್ರೆ, ರಾಘವ ಕಲಾ ಮಂದಿರ, ಅನಂತಪುರ ರಸ್ತೆ, ವಡ್ಡರ ಬಂಡೆ, ಅಗಡಿ ಮಾರೆಪ್ಪ ಕಾಂಪೌಂಡ್, ರೂಪನಗುಡಿ ರಸ್ತೆ, ಮುಬರಕ್ ಟಾಕೀಸ್, ಬಾಲಾಜಿರಾವ್ ರಸ್ತೆ, ಕೆ.ಸಿ.ರೋಡ್, ಮೀನಾಕ್ಷಿ ಸರ್ಕಲ್, ಬೆಂಗಳೂರು ರಸ್ತೆ, ದುಗ್ಗಪ್ಪ ಬೀದಿ, ರೆಡ್ಡಿ ಬೀದಿ, ಅಲ್ಲಂ ಬೀದಿ, ಮುಲ್ಲಂಗಿ ಸಂಜೀವಪ್ಪ ಬೀದಿ, ರೂಪನಗುಡಿ ನರಪ್ಪ ಬೀದಿ, ತಾಯಮ್ಮ ಕಟ್ಟೆ.

ಎಫ್–09 ಫೀಡರ್ ಮಾರ್ಗದ ನೆಹರು ಕಾಲೋನಿ, ಎಸ್.ಎನ್.ಪೇಟೆ 1ನೇ, 2ನೇ, 4ನೇ, 5ನೇ ಮತ್ತು 6ನೇ ಅಡ್ಡರಸ್ತೆ, ಶಂಕರ್ ಕಾಲೋನಿ, ಡಿಎಆರ್ ಗ್ರೌಂಡ್, ಕೂಲ್ ಕಾರ್ನರ್, ಡಬಲ್ ರಸ್ತೆ, ಕೋಲಾಚಲಂ ಕಾಂಪೌಂಡ್, ರಾಯಲ್ ಸರ್ಕಲ್, ಗಾಂಧಿ ಭವನ, ಸಿಎಂಸಿ, ಅಂಬಲಿ ಬಾಗ್, ತಾಲ್ಲೂಕು ಕಚೇರಿ, ಡಿಸಿ ಕಚೇರಿ, ರೈಲ್ವೇ ಸ್ಟೇಷನ್ ರೋಡ್ ಹಾಗೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ: ನಾನಾ ಸ್ಪರ್ಧೆಗಳು

**ಮಲ್ಲಮ್ಮ ನುಡಿ ವಾರ್ತೆ**
**ರಾಯಚೂರು:**

ಸೆಪ್ಟೆಂಬರ್ 09– ಇಲ್ಲಿನ ಸಮಾಜ ಕಲ್ಯಾಣ ಇಲಾಖೆಯಿಂದ ಸೆಪ್ಟೆಂಬರ್ 15 ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಆಚರಿಸುವ ಅಂಗವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ಮಹತ್ವದ ಕುರಿತು ಚರ್ಚಾ ಸ್ಪರ್ಧೆ, ಚಿತ್ರಕಲೆ ಮತ್ತು ಛಾಯಾಚಿತ್ರಗಳ ಮೂಲಕ ಮತದಾನದ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಚೇರಿಯ ಉಪ ನಿರ್ದೇಶಕರ ಮೊಬೈಲ್ ಸಂಖ್ಯೆ: 9480843042,



ರಾಯಚೂರು ಗ್ರೇಡ್–1 ಸಹಾಯಕ ನಿರ್ದೇಶಕರ ಮೊಬೈಲ್ ಸಂಖ್ಯೆ: 9480843184, ಮಾನ್ವಿ ಗ್ರೇಡ್–1 ಸಹಾಯಕ ನಿರ್ದೇಶಕರ ಮೊಬೈಲ್ ಸಂಖ್ಯೆ: 9480843183, ಲಿಂಗಸುಗೂರು ಗ್ರೇಡ್–1 ಸಹಾಯಕ ನಿರ್ದೇಶಕರ ಮೊಬೈಲ್ ಸಂಖ್ಯೆ: 9480843182, ದೇವದುರ್ಗ ಗ್ರೇಡ್–2 ಸಹಾಯಕ ನಿರ್ದೇಶಕರ ಮೊಬೈಲ್ ಸಂಖ್ಯೆ: 9480843181, ಸಿಂಧನೂರು ಗ್ರೇಡ್–2 ಸಹಾಯಕ ನಿರ್ದೇಶಕರ ಮೊಬೈಲ್ ಸಂಖ್ಯೆ: 9480843185 ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯೆಯ ಜೊತೆ ನೈತಿಕ ಮೌಲ್ಯ ಬೆಳೆಸಿಕೊಳ್ಳಿ–ಕೋಲಕಾರ



**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.9–ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜಯಂತಿ ಅಂಗವಾಗಿ ಸಮೀಪದ ಮುಗಳೊಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ವಿದ್ಯಾರ್ಥಿಗಳು ತಮ್ಮ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಿದರು.

ತಾವೇ ಕಾರ್ಯಕ್ರಮ ಆಯೋಜಿಸಿದ್ದ ವಿದ್ಯಾರ್ಥಿಗಳು, ಶಿಕ್ಷಕರನ್ನು ಪುಷ್ಪವೃಷ್ಟಿಯ ಮೂಲಕ ಶಿಕ್ಷಕರನ್ನು ಸಭಾಭವನಕ್ಕೆ ಕರೆತಂದರು. ನಂತರ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿ–ಯಾಗಿದ್ದ ಪ್ರೊ.ಸಿ.ಆರ್.ಕೋಲಕಾರ ಮಾತನಾಡಿ, ವಿದ್ಯಾರ್ಥಿಗಳು ಇಂದು ಕೇವಲ ವಿದ್ಯೆ ಸಂಪಾದಿಸಿದರೆ ಸಾಲದು. ವಿದ್ಯೆಯ ಜೊತೆ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ತಂದೆ, ತಾಯಿ, ಹಿರಿಯರನ್ನು ಗೌರವಿಸುವ ಗುಣ ಹೊಂದಬೇಕು ಎಂದು ಹೇಳಿದರು.

ಪ್ರೊ.ಜಿ.ಎಚ್.ಬಡಿಗೇರ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಸಮಯಪ್ರಜ್ಞೆ ಬೆಳೆಸಿಕೊಂಡು ಸಂಸ್ಕಾರವಂತರಾಗಿ ಬಾಳಬೇಕು ಎಂದು ಹೇಳಿದರು. ಪ್ರೊ.ಎಸ್.ಎನ್.ಮುತ್ತಗಿ ಹಿಂದೆ ಗುರುಕುಲ ಪದ್ಧತಿಯ ಸಮಯದಲ್ಲಿದ್ದ ಗುರು–ಶಿಷ್ಯರ ಸಂಬಂಧವನ್ನು ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರೊ.ಮುತ್ತಗಿ ಅವರು ದಾನಿಗಳಿಂದ ಸಂಗ್ರಹಿಸಿದ್ದ ಹಣದಲ್ಲಿ ಖರೀದಿಸಿದ್ದ ಪುಸ್ತಕಗಳನ್ನು ಪಿಯುಸಿ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಪ್ರಾಚಾರ್ಯ ಬಿರಾದಾರ ವಿತರಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಎನ್.ಎಸ್.ಬಿರಾದಾರ, ಶಿಕ್ಷಕರಾದ ನಾವುಗಳು ಡಾ.ಸರ್ವಪಲ್ಲಿ ರಾಧಾಕೃಷ್ಣನ್ನರ ಆದರ್ಶಗಳನ್ನು ಜೀವನದಲ್ಲಿ ಪಾಲಿಸಿ ನಡೆಯಬೇಕಿದೆ. ಮಕ್ಕಳಿಗೆ ಗುಣಮಟ್ಟದ, ಮೌಲ್ಯಯುತ ಶಿಕ್ಷಣ ಕೊಡಬೇಕಿದೆ ಎಂದರು. ಪ್ರೊ.ಎಸ್.ಡಿ.ಪಾಟೀಲ, ಪ್ರೊ.ಎಸ್.ಪಿ.ಹಿರೇಮಠ ವೇದಿಕೆಯಲ್ಲಿದ್ದರು.

ಸರಸ್ವತಿ ಹೆಳವರ ಸಂಗಡಿಗರು ಪ್ರಾರ್ಥಿಸಿದರು. ಚೈತ್ರಾ ಪಾಟೀಲ ಸ್ವಾಗತಿಸಿದರು. ಶ್ರೀದೇವಿ ಸುನಗದ ನಿರೂಪಿಸಿದರು. ಗಣೇಶ ಸುನಗದ ವಂದಿಸಿದರು.

# ಸಾರಿಗೆ ಸಂಸ್ಥೆಯ ಅಧಿಕಾರಿಗಳ ಜೊತೆ ಸಭೆ

# ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಒದಗಿಸಿ–ಶಾಸಕ ಪಾಟೀಲ



**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.9–ಗ್ರಾಮೀಣ ಪ್ರದೇಶಗಳಿಂದ ಶಾಲಾ, ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಒದಗಿಸುವಂತೆ ಬೀಳಗಿ ಶಾಸಕ ಜೆ.ಟಿ.ಪಾಟೀಲ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಿದರು.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಕಚೇರಿಯಲ್ಲಿ ಮಂಗಳವಾರ ಬೀಳಗಿ ಕ್ಷೇತ್ರದ ಪ್ರಯಾಣಿಕರ ಸಮಸ್ಯೆಗಳ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೂರದ ಊರುಗಳಿಗೆ ಹಾಗೂ ಅಂತರರಾಜ್ಯಗಳಿಗೆ ಬಸ್‌ಗಳನ್ನು ಬಿಡುವುದಕ್ಕಿಂತ ಮೊದಲು ಸ್ಥಳೀಯ ಮಟ್ಟದಲ್ಲಿ ಸಂಪೂರ್ಣ ಸಾರಿಗೆ ಸೌಲಭ್ಯ ಒದಗಿಸುವುದು ಮುಖ್ಯವಾಗಿದೆ. ಪ್ರತಿ ಹಳ್ಳಿಗೂ ಕೂಡ ಬಸ್ ಸಂಚರಿಸುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ತೆಗೆದುಕೊಂಡ ಪರಿಹಾರದ ನಿರ್ಣಯಗಳನ್ನು ಕೇವಲ ಚರ್ಚೆಗಳಿಗೆ ಮಾತ್ರ ಸೀಮಿತಗೊಳಿಸದೆ ಅವುಗಳನ್ನು ಕಾರ್ಯರೂಪಕ್ಕೆ ತರುವಂತೆ ಅಧಿಕಾರಿಗಳಿಗೆ ಸೂಚಿಸಿದರು. ವಿಶೇಷವಾಗಿ ಬಸ್ ಚಾಲಕರಿಗೆ ಸೂಕ್ತ ಅರಿವು ಮೂಡಿಸಿ ಮುಂಜಾನೆಯ ಸಮಯದಲ್ಲಿ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಬಸ್ ಸೇವೆಯನ್ನು ಒದಗಿಸಬೇಕು. ಬೀಳಗಿ ಡಿಪೋದಿಂದ ಎರಡು ದಿನದೊಳಗೆ ವಿಜಯಪುರ ಮಾರ್ಗವಾಗಿ ಸಂಚರಿಸುವ ಎರಡು ಬಸ್‌ಗಳನ್ನು ಸ್ಥಳೀಯ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು ಕ್ರಮವಹಿಸಲು ಸೂಚಿಸಿದರು.

ಬೀಳಗಿ ಕ್ರಾಸ್‌ನಿಂದ ಸರ್ಕಾರಿ ಆಸ್ಪತ್ರೆಗೆ ರಾತ್ರಿ 9 ಗಂಟೆಯವರೆಗೆ ಬಸ್ ಸೇವೆ ದೊರಕಬೇಕು. ಕ್ಷೇತ್ರದ ಯಾವುದೇ ಗ್ರಾಮದ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಂದರ್ಭಗಳಲ್ಲಿ ಹಾಗೂ ನಿಗದಿತ ಸ್ಥಳ ಬಿಟ್ಟು ಬೇರೆ ಕಡೆಗಳಲ್ಲಿ ಬಸ್ ನಿಲುಗಡೆ ಮಾಡುವ ಚಾಲಕರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ಹೂಲಗೇರಿ, ಸೊಕನಾದಗಿ, ಶೆಲ್ಲಿಕೇರಿ, ಅನವಾಲ, ನೀರಬೂದಿಹಾಳ, ಗಂಗನಬೂದಿಹಾಳ, ಕೆರಕಲಮಟ್ಟಿ, ಯಳ್ಳಿಗುತ್ತಿ, ಶಿರಗುಪ್ಪಿ, ಕುಂದರಗಿ, ಚಿಕ್ಕಾಲಗುಂಡಿ ಗ್ರಾಮಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳ ಸಾರಿಗೆ ಸಮಸ್ಯೆಗಳಿಗೆ ಪರಿಹಾರ ಕ್ರಮ ಕೈಗೊಳ್ಳುವಂತೆ ಜೆ.ಟಿ.ಪಾಟೀಲ ತಿಳಿಸಿದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಎನ್.ಟಿ.ಪಾಟೀಲ, ಜಿಲ್ಲಾ ಸಂಚಾರಿ ನಿಯಂತ್ರಣಾಧಿಕಾರಿ ಕೆ.ಕೆ.ಲಮಾಣಿ, ಡಿಎಂಇ ಅಶೋಕ ಡೆಂಗಿ, ಸಹಾಯಕ ಸಂಚಾರಿ ನಿಯಂತ್ರಣಾಧಿಕಾರಿ ಕಲ್ಲೊಳ್ಳಿ, ಬಾಗಲಕೋಟೆ ಡಿಪೋ ಮ್ಯಾನೇಜರ ಕೃಷ್ಣಾ ಚವ್ಹಾಣ, ಬೀಳಗಿ ಡಿಪೋ ಮ್ಯಾನೇಜರ ರಮೇಶ ಖೇಡದ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

# ನವಸಾಕ್ಷರರಿಗೆ ಪ್ರಮಾಣ ಪತ್ರ ವಿತರಣೆ

# ದೇಶದ ಉನ್ನತಿಗೆ ಎಲ್ಲರೂ ಸಾಕ್ಷರರಾಗಿ–ಕುರೇರ

**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.9–ಅಜ್ಞಾನವೇ ಅಂಧಕಾರ, ಜ್ಞಾನವೇ ಬೆಳಕು ಶಿಕ್ಷಣವೇ ಬದುಕಿನ ಶಕ್ತಿ ಹಾಗೂ ದಾರಿ ಆಗಿದ್ದು ದೇಶದ ಉನ್ನತಿಗೆ ಎಲ್ಲರೂ ಶಿಕ್ಷಣವಂತರಾಗಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಮತ್ತು ಶಾಲಾ ಶಿಕ್ಷಣ ಇಲಾಖೆ, ಸಾಕ್ಷರತೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 59ನೇ ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಕಾರ್ಯಕ್ರಮದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಎಲ್ಲರೂ ಶಿಕ್ಷಣವಂತರಾದರೆ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ ಎಂದರು.

ಸಂಯುಕ್ತ ರಾಷ್ಟ್ರ ಸಂಘವು 1967ರಲ್ಲಿ ಘೋಷಿಸಿದ ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯ ಉದ್ದೇಶ ದೇಶದಲ್ಲಿ ಓದುಬರಹ ಹಾಗೂ ಶಿಕ್ಷಣದ ಮಹತ್ವವನ್ನು ವಿಶ್ವಮಟ್ಟದಲ್ಲಿ ಹರಡುವುದಾಗಿದ್ದು, ಪ್ರತಿಯೊಬ್ಬರೂ ಶಿಕ್ಷಣವಂತರಾದರೆ ಈ ದಿನಾಚರಣೆಯ ಉದ್ದೇಶವು ಅರ್ಥಪೂರ್ಣವಾಗುತ್ತದೆ ಎಂದು ಅವರು ಹೇಳಿದರು.

ಮೂಢನಂಬಿಕೆಗಳನ್ನು ಹೋಗಲಾಡಿಸಲು, ಬಾಲ್ಯವಿವಾಹವನ್ನು ತಡೆಯಲು ಹಾಗೂ ಸರ್ಕಾರದ ವಿವಿಧ ಯೋಜನೆಗಳು ಮತ್ತು ಕಾನೂನುಗಳ ಬಗ್ಗೆ ತಿಳಿದುಕೊಳ್ಳಲು ಶಿಕ್ಷಣ ಅಗತ್ಯವಾಗಿದೆ ಎಂದ ಶಶಿಧರ ಕುರೇರ, ಈ ಸಂದರ್ಭದಲ್ಲಿ ನವಸಾಕ್ಷರರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು.

ಬೋಧಕರು ಹಾಗೂ ಕಲಿಕಾರ್ಥಿಗಳಿಗೆ ಕಲಿಕಾ ಬೋಧನಾ ಸಾಮಗ್ರಿಗಳನ್ನು ನೀಡಲಾಯಿತು. ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಸಾಕ್ಷರ ಗೀತೆಗಳು ಹಾಗೂ ಬೀದಿ ನಾಟಕಗಳ ಮೂಲಕ ಸಾಕ್ಷರತಾ ಕಲಿಕಾ ವಾತಾವರಣವನ್ನು ನಿರ್ಮಿಸಿದ ದಿವ್ಯದರ್ಶನ ಗ್ರಾಮೀಣ ಅಭಿವೃದ್ಧಿ ಹಾಗೂ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ಸಂಸ್ಥಾಪಕರಾದ ಪ್ರಹ್ಲಾದ್ ಬಸಪ್ಪ ಬೋಯಿ ಹಾಗೂ ಅವರ ಕಲಾತಂಡಕ್ಕೆ ಪ್ರಮಾಣಪತ್ರ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಶಿಕ್ಷಣಾಧಿಕಾರಿ ಎಚ್.ಜಿ.ಮಿರ್ಜಿ, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಆರ್.ಎಂ.ಮಕಾನದಾರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ, ಹುನಗುಂದ ಕ್ಷೇತ್ರ ಶಿಕ್ಷಣಾಧಿಕಾರಿ ಜಾಸ್ಮಿನ್ ಕಿಲ್ಲೇದಾರ, ಅಕ್ಷರ ದಾಸೋಹ ಅಧಿಕಾರಿ ದಯಾನಂದ್ ಯಾವಗಲ್, ಜಿಲ್ಲಾ ಸ್ಕೌಟ್ ಗೈಡ್ ಸಂಘಟಿಕ ಪ್ರಮೋದ್ ಚೌಗಲಿ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು. ಆರ್.ಆರ್.ದೇಸಾಯಿ ವಂದಿಸಿದರು. ಸಂಗಮೇಶ ಸಣ್ಣತಂಗಿ ಕಾರ್ಯಕ್ರಮ ನಿರೂಪಿಸಿದರು.

# ಇಂದು ಪಠ್ಯೇತರ ಚಟುವಟಿಕೆಗಳ ಉದ್ಘಾಟನೆ

**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.9–ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಪ್ರಸಕ್ತ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭ ಸೆಪ್ಟೆಂಬರ 10 ಮುಂಜಾನೆ 9.30 ಗಂಟೆಗೆ ಸರಳಾಬಾಯಿ ಭಾಗವತ ಸಭಾ ಭವನದಲ್ಲಿ ನಡೆಯಲಿದೆ.

ಬಾಗಲಕೋಟ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಆನಂದ ದೇಶಪಾಂಡೆ ಸಮಾರಂಭ ಉದ್ಘಾಟಿಸಲಿದ್ದು, ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಅಧ್ಯಕ್ಷತೆ ವಹಿಸುವರು.

ಸಮಾರಂಭದಲ್ಲಿ ಸೇವಾ ನಿವೃತ್ತಿ ಹೊಂದಿದ ಪ್ರಾಧ್ಯಾಪಕ ಎಚ್.ಎಸ್.ಗಿಡಗಂಟಿ, ಪಿಎಚ್‌ಡಿ ಪದವಿ ಪಡೆದ ಪಿ.ವಿ.ಮನಗೂಳಿ, ಸುರೇಖಾ ಕೊರ್ಲಹಳ್ಳಿ, ಎ.ಎಂ.ಗೊರಚಿಕ್ಕನವರ, ಎಸ್.ಪಿ.ದೇಶಪಾಂಡೆ ಮತ್ತು ಯುಜಿಸಿ ಕೆ.ಸೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಂ.ಡಿ.ಕೋರವಾರ, ಎಸ್.ಎಸ್.ಕುಲಕರ್ಣಿ, ಎನ್.ಎಂ.ನಾಯಕ, ಕೆ.ಬಿ.ನಾವಿ ಅವರನ್ನು ಸನ್ಮಾನಿಸಲಾಗುವುದು.

ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದು ಪ್ರಥಮ ವರ್ಷದ ಪದವಿ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಗುವುದು. ಸಂಸ್ಥೆಯ ಕಾರ್ಯಾಧ್ಯಕ್ಷೆ ಶ್ರೀಲತಾ ಹೆರಂಜಲ್ ಮತ್ತು ಕಾಲೇಜು ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ ಉಪಸ್ಥಿತರಿರುವರು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೆ.15 ರಿಂದ ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.9–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ರಾಜ್ಯ ಮಹಿಳಾ ಅಬಿವೃದ್ಧಿ ನಿಗಮದ ಸಂಯುಕ್ತ ಆಶ್ರಯದಲ್ಲಿ ಸೆಪ್ಟೆಂಬರ 15 ರಿಂದ ನವೆಂಬರ 17 ವರೆಗೆ 45 ದಿನಗಳ ಕಾಲ ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ ಕೈಗೊಳ್ಳಲಾಗುತ್ತಿದೆ.

ಬಾಗಲಕೋಟೆ ತಾಲೂಕಿನಲ್ಲಿ ಈಗಾಗಲೇ ಗುರುತಿಸಿರುವ 808 ದೇವದಾಸಿ ಮಹಿಳೆಯರಲ್ಲಿ 264 ಮಹಿಳೆಯರು ಮರಣ ಹೊಂದಿದ್ದಾರೆ. 25 ದೇವದಾಸಿ ಮಹಿಳೆಯರು ವಲಸೆ ಹೋಗಿದ್ದು, 519 ಜೀವಂತ ದೇವದಾಸಿ ಮಹಿಳೆಯರು ಇದ್ದಾರೆ.

ಆದ್ದರಿಂದ 519 ಜೀವಂತ ದೇವದಾಸಿ ಮಹಿಳೆಯರು, 25 ವಲಸೆ ಹೋದ ದೇವದಾಸಿ ಮಹಿಳೆಯರು ಖಡ್ಡಾಯವಾಗಿ ಸರ್ವೆಯಲ್ಲಿ ಭಾಗವಹಿಸಲು ಹಾಗೂ ಮರಣ ಹೊಂದಿದ 264 ದೇವದಾಸಿ ಮಹಿಳೆಯರ ಮಕ್ಕಳು ಇಚ್ಛಿಸಿದಲ್ಲಿ ಅವರು ಸಹಿತ ಸರ್ವೆಯಲ್ಲಿ ಭಾಗವಹಿಸಬಹುದು. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಸೆಕ್ಟರ ನಂ.18, ಕೆವಿಜಿ ಬ್ಯಾಂಕ್ ಎದುರುಗಡೆ, ನವನಗರ, ಬಾಗಲಕೋಟೆ ಕಚೇರಿಯ ವೇಳೆಯಲ್ಲಿ ಹಾಜರಾಗಿ ಸರ್ವೆಯಲ್ಲಿ ಭಾಗವಹಿಸುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ಚಾಲಿತ ಹೊಲಿಗೆ ಯಂತ್ರಕ್ಕೆ ಅರ್ಜಿ

**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.9–2025–26ನೇ ಸಾಲಿಗೆ ಜಿಲ್ಲಾ ಉದ್ಯಮ ಕೇಂದ್ರ, ವಿಶೇಷ ಘಟಕ, ಗಿರಿಜನ ಉಪಯೋಜನೆಯಡಿ ಮತ್ತು ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆಗಳ ಸರಬರಾಜು ಯೋಜನೆಯಡಿ ವಿದ್ಯುತ್ ಚಾಲಿತ ಹೊಲಿಗೆಯಂತ್ರ ಸಲಕರಣೆಯನ್ನು ಗ್ರಾಮೀಣ ಪ್ರದೇಶದವರಿಗೆ ನೀಡಲು ಅರ್ಹ ಫಲಾನುವಿಗಳಿಂದ ಆನ್‌ಲೈನ್ (ಹಣಥಿ://ಛಚಿರಚಿಟಇಾರಣ.ಟಿಛಿ.ಟಿ) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರಾಮೀಣ ಪ್ರದೇಶದ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದಾಗಿದ್ದು, 10ನೇ ತರಗತಿ ಪಾಸಾಗಿರಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನ ಸೆಪ್ಟೆಂಬರ್ 26 ಆಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ಕೈಗಾರಿಕಾ ವಿಭಾಗ, ಕೊಠಡಿ ಸಂಖ್ಯೆ 239, 3ನೇ ಮಹಡಿ, ಜಿಲ್ಲಾಡಳಿತ ಭವನ ನವನಗರ, ಬಾಗಲಕೋಟೆ, ದೂರವಾಣಿ ಸಂಖ್ಯೆ 08354–223744, 7760007080 ಮತ್ತು 9620721729 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಅತಿಥಿ ಉಪನ್ಯಾಸಕರ ನೇಮಕಕ್ಕೆ ಕಾಳನ್ನವರ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.9–ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, ಇಲ್ಲಿ ಓದುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಕಳೆದ ಒಂದು ತಿಂಗಳಿಂದಲೂ ಸರಿಯಾಗಿ ತರಗತಿಗಳು ನಡೆಯುತ್ತಿಲ್ಲ. ಸಮಸ್ಯೆ ಪರಿಹಾರಕ್ಕೆ ತಕ್ಷಣವೇ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕೆಂದು ಅತಿಥಿ ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಆಗ್ರಹಿಸಿದ್ದಾರೆ.

ಅವರು ಈ ಕುರಿತು ಮುಖ್ಯಮಂತ್ರಿಗಳಿಗೆ ಬರೆದಿರುವ ಮನವಿ ಪತ್ರವನ್ನು ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಎಲ್ಲಾ ಪದವಿ ತರಗತಿಗಳು ಪ್ರಾರಂಭವಾಗಿ ತಿಂಗಳು ಕಳೆದರೂ ಉನ್ನತ ಶಿಕ್ಷಣ ಇಲಾಖೆ ಅತಿಥಿ ಉಪನ್ಯಾಸಕರ ನೇಮಕದ ಗೊಂದಲದಲ್ಲಿದೆ. ಇದು ಅತಿಥಿ ಉಪನ್ಯಾಸಕರಲ್ಲಿ ತುಂಬಾ ಬೇಸರ ತಂದಿದೆ ಎಂದು ಅವರು ಹೇಳಿದರು.

ರಾಜ್ಯದ ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಅತಿಥಿ ಉಪನ್ಯಾಸಕರ ಬೋಧನೆ ಅವಲಂಭಿಸಿರುವುದು ಸರ್ಕಾರ–ಕ್ಕೆ ಮೊದಲಿನಿಂದಲೂ ಗೊತ್ತಿದೆ. ಸದ್ಯ ತರಗತಿಗಳು ನಡೆಯದೇ ಇರುವುದರಿಂದ ಲಕ್ಷಾಂತರ ಪದವಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚುತ್ತಿದೆ. ಉನ್ನತ ಶಿಕ್ಷಣ ಇಲಾಖೆ ಹಾಗೂ ಅತಿಥಿ ಉಪನ್ಯಾಸಕರ ಮಧ್ಯದಲ್ಲಿರುವ ಜಲ್ವಂತ ಸಮಸ್ಯೆಗಳು ಕುರಿತು ಹಲವು ಪ್ರಕರಣಗಳು ಹೈಕೋರ್ಟ್‌ನಲ್ಲಿ ಇವೆ. ಸರ್ಕಾರ ಇವೆಲ್ಲವುಗಳನ್ನು ಗಮನಿಸಿ, ಇನ್ನೂ ಕಾಲಹರಣ ಮಾಡದೆ ಎಲ್ಲಾ ಅತಿಥಿ ಉಪನ್ಯಾಸಕರಿಗೆ ನ್ಯಾಯ ದೊರಕಿಸಿಕೊಡುವ ಗಟ್ಟಿ ನಿರ್ಧಾರ ಕೈಗೊಂಡು ಶೀಘ್ರವಾಗಿ ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಳ್ಳಬೇಕು ಎಂದು ಡಾ.ಕಾಳನ್ನವರ ಮನವಿಯಲ್ಲಿ ತಿಳಿಸಿದ್ದಾರೆ.

ಉನ್ನತ ಶಿಕ್ಷಣ ಇಲಾಖೆ ಹಂತದಲ್ಲಿಯೇ ನಕಲಿ ಪ್ರಮಾಣ ಪತ್ರಗಳ ಕುರಿತು ಪರಿಶೀಲನೆ ಘಟಕ ಮಾಡಬೇಕು. ನಕಲಿ ಪ್ರಮಾಣ ಪತ್ರಗಳನ್ನು ಪಡೆದು ಅತಿಥಿ ಉಪನ್ಯಾಸಕ ಹುದ್ದೆಯನ್ನು ಪಡೆಯುವ ಆತುರದಲ್ಲಿರುವವರ ವಿರುದ್ಧ ಸೂಕ್ತ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಅತಿಥಿ ಉಪನ್ಯಾಸಕರಾದ ಸಂಗಮೇಶ ಬ್ಯಾಳಿ, ದೇವೇಂದ್ರ ನಾಯಕ, ಪುಂಡಲಿಕ ಹೊನ್ನಳ್ಳಿ, ಸಂತೋಷ ಎಂ.ಕೆ ಪಾಲ್ಗೊಂಡಿದ್ದರು.

## ಮಹಾಲಿಂಗಪುರದಲ್ಲಿ ಆಕರ್ಷಕ ಕುಸ್ತಿ ಕಾಳಗ

# ಸಿಕಂದರ, ಕಾರ್ತಿಕ, ನಾಗರಾಜ, ಪ್ರಕಾಶ ಪೈಗಳು ಜಯಶಾಲಿ

**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.9–ಜಿಲ್ಲೆಯ ಮಹಾಲಿಂಗಪುರ ಪಟ್ಟಣದ ಆರಾಧ್ಯದೈವ ಮಹಾಲಿಂಗೇಶ್ವರ ಜಾತ್ರೆ ನಿಮಿತ್ಯ ಸೋಮವಾರ ಸರ್ಕಾರಿ ಕಾಲೇಜ ಆವರಣದಲ್ಲಿ ನಡೆದ ಕೌತುಕುದ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಸಿಕಂದರ ಶೇಕ್, ನಾಗರಾಜ, ಪ್ರಕಾಶ ಅವರುಗಳು ಜಯಶಾಲಿಗಳಾದರು.

ರಾತ್ರಿಯವರೆಗೂ ನಡೆದ 46 ಜೋಡಿ ಕುಸ್ತಿಗಳು ಪ್ರೇಕ್ಷಕರನ್ನು ರಂಜಿಸಿದವು. ಜಟ್ಟಿಗಳು ಹಾಕುವ ಡಾವುಗಳನ್ನು ನೋಡಿ ಪ್ರೇಕ್ಷಕರು ಕೇಕೇ ಹಾಕಿ ಪ್ರೋತ್ಸಾಹ ನೀಡಿದರು.

ಮಹಾರಾಷ್ಟ್ರ ಕೇಸರಿ ಸಿಕಂದರಪೈ ಶೇಖ್ ಮತ್ತು ಹರಿಯಾಣ ಕೇಸರಿ ವೀರೇಂದ್ರಪೈ ನಡುವಿನ ನಂಬರ ಒನ್ ಕುಸ್ತಿ ಮೈದಾನದಲ್ಲಿ ನೆರೆದ ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು. ಅಂತಿಮವಾಗಿ ಮಹಾರಾಷ್ಟ್ರ ಕೇಸರಿ ಸಿಕಂದರಪೈ ಗೆದ್ದು ಗೆಲುವಿನ ನಗೆ ಬೀರಿದರು.

ದಾವಣಗೇರೆಯ ಕಾರ್ತಿಕ ಕಾಟೆ ಹಾಗೂ ಹರಿಯಾಣದ ಹರೀಶಕುಮಾರ ನಡುವಿನ 2ನಂ ಕುಸ್ತಿಯಲ್ಲಿ ಕರ್ನಾಟಕ ಕೇಸರಿ ಕಾರ್ತಿಕಪೈ ಕಾಟೆ ಕೇವಲ 30 ಸೆಕೆಂಡುಗಳಲ್ಲಿ ಜಯ ಸಾಧಿಸಿದರು. ಶಿವಯ್ಯಪೈ ಪೂಜಾರಿ ಹಾಗೂ ಮಹಾರಾಷ್ಟ್ರದ ಅಬುಬಕರ್‌ಪೈ ಚೌಸ್ ನಡುವೆ ನಡೆದ 3ನೇ ನಂಬರ ಕುಸ್ತಿ ಸಮಬಲವಾಯಿತು.

ಕರ್ನಾಟಕ ಕೇಸರಿ ಕೋಲ್ಹಾಪುರದ ಶಾವುಪುರಿಯ ನಾಗರಾಜ ಬಸಿಡೋಣಿ ಮತ್ತು ಪಂಜಾಬ ಕೇಸರಿ ಪ್ರದೀಪಸಿಂಗ್ ಪೈ ಪಂಜಾಬ ನಡುವಿನ 4ನೇ ನಂಬರ ಕುಸ್ತಿಯಲ್ಲಿ ನಾಗರಾಜ ಬಸಿಡೋಣಿ ವಿಜಯ ಸಾಧಿಸಿದರೆ, 5ನೇ ನಂಬರ ಕುಸ್ತಿಯಲ್ಲಿ ಗೋಡಗೇರಿಯ ಪ್ರಕಾಶಪೈ ಇಂಗಳೆ ಮಹಾರಾಷ್ಟ್ರದ ಅಕ್ಷಯ ಪಾಟೀಲ ಅವರನ್ನು ಸೋಲಿಸಿ ಜಯಶಾಲಿಯಾದರು.

ನಂತರ ವಿಜೇತ ಕುಸ್ತಿಪಟುಗಳಿಗೆ ನಗದು ಬಹುಮಾನ ಮತ್ತು ಡಾಲ್ ವಿತರಿಸಲಾಯಿತು.

# ಉತ್ತಮ ಹವ್ಯಾಸಗಳಿಂದ ವ್ಯಕ್ತಿತ್ವ ವಿಕಸನ–ಭೂಮಣ್ಣವರ




**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ,**

ಸೆ.9–ಶಿಸ್ತು, ಸಂಯಮ, ಶ್ರಮದಾನ ಮತ್ತು ಯೋಗಾಭ್ಯಾಸ ಚಟುವಟಿಕೆಗಳು ಕೇವಲ ಶಿಬಿರಕ್ಕೆ ಸೀಮಿತವಾಗದೆ ದಿನನಿತ್ಯಜೀವನಕ್ಕೆ ಅಳವಡಿಸಿಕೊಳ್ಳಬೇಕು. ಉತ್ತಮ ಅಭ್ಯಾಸಗಳಿಂದ ವ್ಯಕ್ತಿತ್ವ ವಿಕಸಗೊಳ್ಳುತ್ತದೆ ಎಂದು ಎನ್.ಎಸ್.ಎಸ್ ಬಾಗಲಕೋಟೆ ಜಿಲ್ಲಾ ನೋಡಲ್ ಅಧಿಕಾರಿ ಡಾ.ಎಸ್.ಎಸ್.ಭೂಮಣ್ಣವರ ಹೇಳಿದರು.

ನಗರದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕದ ವತಿಯಿಂದ ಮುಚಖಂಡಿ ಗ್ರಾಮದಲ್ಲಿ ಹಮ್ಮಿಕೊಂಡ ಏಳು ದಿನದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಯತ್ನದಿಂದ ಸಾಧನೆ ಸಾಧ್ಯ ಆದರೆ ಅದಕ್ಕೆ ಗುರುವಿನ ಮಾರ್ಗದರ್ಶನ ಅವಶ್ಯಕ. ಅಂತಹ ಸಾಧನೆಯ ಮಾರ್ಗವನ್ನು ವಿಶೇಷ ಶಿಬಿರಗಳು ನೀಡುತ್ತವೆ ಎಂದರು.

ಉತ್ತಮ ಹಂತಕ್ಕೆ ಬೆಳೆಯುವ ಮೂಲಕ ಗುರುಹಿರಿಯರಿಗೆ ತಲೆಬಾಗಿ ಬದುಕುವುದನ್ನು ರೂಡಿಸಿಕೊಳ್ಳಿ ಅದು ವ್ಯಕ್ತಿತ್ವದ ಸಂಕೇತವಾಗಿದೆ. ಎನ್.ಎಸ್.ಎಸ್ ಕೇವಲ ಶ್ರಮದಾನಕ್ಕೆ ಸೀಮಿತವಾಗಿರದೇ ರಾಜ್ಯ ಸರಕಾರ ಜಾರಿಗೆ ತರುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮಿಕ್ಷೆ ಎಂಬ ಹೊಸ ಯೋಜನೆಯಲ್ಲಿ ಎನ್.ಎಸ್.ಎಸ್ ವಿದ್ಯಾರ್ಥಿಗಳನ್ನು ಆಯ್ದುಕೊಂಡು ಅವರಿಗೆ ಸಮೀಕ್ಷೆಯ ತರಬೇತಿ ನೀಡುವ ಯೋಜನೆ ಸಿದ್ದಗೊಳ್ಳುತ್ತಿದ್ದು ಕೆಲವೇ ದಿನಗಳಲ್ಲಿ ಜಾರಿಯಾಗಲಿದೆ. ಸಮೀಕ್ಷೆಗೆ ಬೇಕಾದ ದಾಖಲಾತಿಗಳನ್ನು ಸಾರ್ವಜನಿಕರು ಸಿದ್ದಪಡಿಸುವಂತೆ ಮಾಡುವ ಕೆಲಸವನ್ನು ಶಿಬಿರಾರ್ಥಿಗಳು ಮಾಡಬೇಕಿದೆ ಎಂದರು.

ಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಮಾತನಾಡಿ, ಶಿಬಿರದಲ್ಲಿ ಪ್ರತಿದಿನ ಒಂದು ಹೊಸ ಯೋಜನೆ ಮತ್ತು ಆಲೋಚನೆಗಳ ಮೂಲಕ ಕಾರ್ಯಚಟುವಟಿಕೆ ಮಾಡಿದಂತೆ ದಿನನಿತ್ಯವು ಹೊಸದನ್ನು ಹುಡುಕುವ ಮತ್ತು ಅಳವಡಿಸಿಕೊಳ್ಳುವ ಕೆಲಸ ಮಾಡಬೇಕು. ಇದರಿಂದ ಸಮಾಜಕ್ಕೆ ಬೇಕಾದ ಯೋಗ್ಯ ನಾಗರಿಕರಾಗಿ ಬೆಳೆಯಲು ಸಾಧ್ಯ. ಬಾವನೆಗಳು ಅತಿ ಹೆಚ್ಚು ಬೆಲೆಯುಳ್ಳವುಗಳಾಗಿದ್ದು ಅವುಗಳನ್ನು ಶಿಬಿರ ಕಲಿಸಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್ ಘಟಕಾಧಿಕಾರಿಗಳಾದ ಡಾ.ಎಂ.ಎಚ್.ವಡ್ಡರ, ಡಾ.ವೀರುಪಾಕ್ಷಿ ಎನ್.ಬಿ, ಪ್ರಾಧ್ಯಾಪಕರುಗಳಾದ ಡಾ.ಕೆ.ವಿ.ಮಠ, ಡಾ.ಎಲ್.ಎಸ್.ಚವಡಿ, ಎಸ್.ವಿ.ಕಟ್ಟಿ, ನಟರಾಜ ಇಂಗಳಗಿ, ಶ್ರೇಯಾ ಜೋರಾಪೂರ ಮತ್ತು ಶಿಬಿರಾರ್ಥಿಗಳಿಗೆ ಟೀಶರ್ಟ್ ಕೊಡುಗೆ ನೀಡಿದ ಆನಂದ ಕೊಟಗಿ, ನಾಗೇಶ ನಾಯಕ, ಕಿರಣ ಬಾಗೇವಾಡಿ, ಪ್ರಶಾಂತ ರಾಠೋಡ, ಕಿರಣ ನಾಯಕ ಸೇರಿದಂತೆ ಇತರರು ಇದ್ದರು.

# ಅಕ್ಷರ ಕಲಿಸೋ ಗುರುವಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರು ಕಡಿಮೆ ಬಸ್ಸುಗೌಡ ಕಂಚನಕವಿ

ಶಹಾಪುರ :– ವಿದ್ಯಾರ್ಥಿಗಳ ಸಾಧನೆ ಮತ್ತು ಬೆಳವಣಿಗೆ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಶಿಕ್ಷಕರು ದೇಶದ ನಿರ್ಮಾತೃಗಳು ಜೀವನದಲ್ಲಿ ನಾವು ಎಷ್ಟು ಹಣ ಗಳಿಸಬಹುದು. ಆದರೆ ಅಕ್ಷರ ಜ್ಞಾನ ಯಾರಿಂದಲೂ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ ಹಣ ಗಳಿಸಿದರೆ ಬೇರೆಯವರು ಕಸಿದುಕೊಳ್ಳಬಹುದು ಆದರೆ ವಿದ್ಯೆ ಎಂಬುದು ಮಹದೊಡ್ಡ ಶಕ್ತಿ ಇದನ್ನು ಯಾರಿಂದ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಯುವ ಮುಖಂಡರಾದ ಬಸ್ಸುಗೌಡ ಕಂಚನಕವಿ ಹೇಳಿದರು.

ಶಹಾಪುರ ಹೃದಯಭಾಗದಲ್ಲಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರತಿ ವ್ಯಕ್ತಿಯ ಬದುಕಿನ ದಾರಿದೀಪವಾಗಿ ಶಿಕ್ಷಕರು ನಿಲ್ಲುತ್ತಾರೆ ಮಾಜಿ ರಾಷ್ಟ್ರಪತಿಗಳು ಹಾಗೂ ಬಹು ಭಾಷಾ ಪಂಡಿತರು ಉತ್ತಮ ಶಿಕ್ಷಕರಾಗಿದ್ದ ಡಾ.ಸರ್ವಪಲ್ಲಿ ರಾಧಾಕೃಷ್ಣರು ತಮ್ಮ ಹುಟ್ಟುಹಬ್ಬವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲು ತೀರ್ಮಾನಿಸಿದ್ದು ನಮ್ಮೆಲ್ಲರ ಭಾಗ್ಯ ಎಂದರು .ಪ್ರತಿ ಮಗು ಬೆಳೆದು ಸಮಾಜದಲ್ಲಿ ಏನೆಲ್ಲ ಮಹತ್ತರ ಸಾಧನೆಗಳನ್ನು ಮಾಡುತ್ತದೆಯೊ ಅದೆಲ್ಲಕ್ಕೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಶಿಕ್ಷಕರ ಸಹಕಾರ ಶ್ರಮ ಬೆಂಬಲ ಇರುತ್ತದೆ ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸುವ ಸಹೃದಯಿಗಳು ಎಂದರು ವಿದ್ಯಾರ್ಥಿಗಳು ಶಿಕ್ಷಕರ ಸಂಬಂಧ ಅತ್ಯಂತ ಪವಿತ್ರವಾದದ್ದು ವಿದ್ಯಾರ್ಥಿಗಳು ಮಹಾನ್ ಸಾಧಕರ ತತ್ವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಬಸ್ಸುಗೌಡ ಕಂಚನಕವಿ ಮಕ್ಕಳಿಗೆ ಕಿವಿಮಾತು ಹೇಳಿದರು ಕಾರ್ಯಕ್ರಮ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕೆಂಭಾವಿ ವಲಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಡಿವಾಳಪ್ಪ ಪಾಟೀಲ್ ಹೆಗ್ಗಣದೊಡ್ಡಿ, ಮಾತನಾಡುತ್ತಾ ಇವತ್ತಿನ ದಿನಗಳಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಮುದ್ದೆ ಗೌರವ ಕಡಿಮೆಯಾಗುತ್ತಿದೆ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಬಹಳ ಮುಖ್ಯ ಇದೆ ಅದಕ್ಕೆ ವಿದ್ಯಾರ್ಥಿಗಳಿಗೆ ಉತ್ತಮವಾದ ಸಂಸ್ಕಾರ ನೀಡುವುದು ಪ್ರತಿಯೊಬ್ಬ ಶಿಕ್ಷಕರ ಜವಾಬ್ದಾರಿಯಾಗಿದೆ ನಾಲ್ಕು ಅಕ್ಷರಗಳು ಕಡಿಮೆ ಕಲಿತರು ಪರವಾಗಿಲ್ಲ ಸಂಸ್ಕಾರದಲ್ಲಿ ಯಾವತ್ತೂ ಹಿಂದುಳಿಯಬಾರದು ಎಂದು ಹೇಳಿದರು..ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶರಣು ನಾಯ್ಕಲ್ ಅವರು ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ವಿ ಆಗಬೇಕಾದರೆ ಕಠಿಣವಾದ ಪರಿಶ್ರಮ ಅಗತ್ಯವಿದೆ ಅದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಸತತವಾದ ಅಧ್ಯಯನದ ಕಡೆ ಗಮನ ಹರಿಸಬೇಕು ಮತ್ತು ತಂದೆ–ತಾಯಿಗಳ ಆಸೆಗಳನ್ನು ಈಡೇರಿಸಬೇಕು ಆ ನಿಟ್ಟಿನಲ್ಲಿ ಕಠಿಣವಾದ ಪರಿಶ್ರಮ ಅಗತ್ಯವಿದೆ ಎಂದು ಹೇಳಿದರು ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೆನಪಿನ ಕಾಣಿಕೆಯಾಗಿ ಶಿಕ್ಷಕರಿಗೆ ಪುಸ್ತಕ ಮತ್ತು ಸಸಿಗಳನ್ನು ನೀಡಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರಾದ ಸುಭಾಷ್ ನಾಯಕ್.ನಿಲಯಪಾಲುಕರಾದ ಸಂತೋಷ ಜೋಗೂರ, ಮಲ್ಲಿಕಾರ್ಜುನ ಮಳಿಕೇರಿ, ಬಸವರಾಜ, ಚಂದ್ರು ರಾಠೋಡ, ರಾಜಕುಮಾರ ಬಡಿಗೇರ್, ಭಾಗ್ಯಮ್ಮ ಪಾಟೀಲ್, ವಿದ್ಯಾ ಬಿರಾದಾರ, ದೀಪಾ ದೊಡ್ಡ ಮನಿ, ಶಕುಂತಲಾ ಸುರಪುರ, ಸೌಮ್ಯ ಕುಲಕರ್ಣಿ, ಹಾಗೂ ವಿದ್ಯಾರ್ಥಿಗಳು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಬಿಎಂಸಿಆರ್‌ಸಿ: ಹುದ್ದೆಗಳ ಅಮಿಷಗಳಿಗೆ ಕಿವಿಗೊಡದಿರಿ

**ಮಲ್ಲಮ್ಮ ನುಡಿ ವಾರ್ತೆ**
**ಬಳ್ಳಾರಿ,**

ಸೆ.09–ಬಳ್ಳಾರಿ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಬಳ್ಳಾರಿಯ ಸಮೂಹ ಆಸ್ಪತ್ರೆಗಳಲ್ಲಿ ವಿವಿಧ ಹುದ್ದೆಗಳನ್ನು ಕೊಡಿಸುವುದಾಗಿ ಆಕಾಂಕ್ಷಿಗಳಿಂದ ಹಣ ಪಡೆದು ಮೋಸಗೊಳಿಸುತ್ತಿರುವುದು ಕಂಡುಬಂದಿದ್ದು, ಸಾರ್ವಜನಿಕರು ಯಾವುದೇ ಆಸೆ, ಆಮಿಷಗಳಿಗೆ ಕಿವಿಗೊಡದೇ ಜಾಗರಾಕರಾಗಿರಬೇಕು ಎಂದು ಬಿಎಂಸಿಆರ್‌ಸಿ ಯ ನಿರ್ದೇಶಕರು ತಿಳಿಸಿದ್ದಾರೆ.

ಒಂದು ವೇಳೆ ಅಂತಹ ಯಾವುದೇ ಪ್ರಸಂಗಗಳು ಕಂಡುಬಂದಲ್ಲಿ ಬಿಎಂಸಿಆರ್‌ಸಿ ಕಚೇರಿ ಗಮನಕ್ಕೆ ತರಬೇಕು ಹಾಗೂ ಸರ್ಕಾರದಿಂದ ಹುದ್ದೆಗಳು ಮಂಜೂರಾದಲ್ಲಿ ನಿಯಮಾನುಸಾರ ಸಾರ್ವಜನಿಕರ ಗಮನಕ್ಕೆ ತಂದು, ಪ್ರಕಟಣೆ ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತದೆ ಎಂದು ಅವರು ಪ್ರಟಕಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ : ಸಚಿವ ರಹೀಂ ಖಾನ್

ಮಲ್ಲಮ್ಮ ನುಡಿ ವಾರ್ತೆ

ಬೀದರ, ಸೆ.09 : ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ತಿಳಿಸಿದರು.

ಅವರು ಮಂಗಳವಾರ ನಗರದ ಬೆಲ್ದಾಳೆ ಕನ್ವೆನಷನ್ ಹಾಲ್ ನಲ್ಲಿ ತಾಲೂಕು ಪಂಚಾಯತ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಬೀದರ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.




ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಶಿಕ್ಷಕರ ಕೊಡುಗೆ ಅಪಾರವಾಗಿದೆ. ಹೇಗೆ ಒಬ್ಬ ಶಿಲ್ಪಿ ಕಲ್ಲನ್ನು ಶಿಲೆಯನ್ನಾಗಿ ಮಾಡುವನೋ ಹಾಗೆ ಶಿಕ್ಷಕ ವಿದ್ಯಾರ್ಥಿಯನ್ನು ತಿದ್ದಿ, ತೀಡಿ ಉತ್ತಮ ವ್ಯಕ್ತಿಯನ್ನಾಗಿ ಮಾಡುವರು. ಹಿಂದಿನ ಕಾಲದಿಂದಲೂ ಗುರುಗಳಿಗೆ ಉನ್ನತವಾದ ಸ್ಥಾನ ಮತ್ತು ಪೂಜ್ಯ ಭಾವನೆಯಿಂದ ಕಾಣಲಾಗುತ್ತದೆ. ವಿದ್ಯಾರ್ಥಿಗಳ ಜೀವನಕ್ಕೆ ಮಾರ್ಗದರ್ಶಕರಾಗಿ, ಉತ್ತಮ ಜೀವನ ಕಟ್ಟಿಕೊಳ್ಳಲು ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ತಮ್ಮ ಸಹಕಾರ ಹಾಗೂ ಅವರ ಹೋರಾಟಗಳಿಗೆ ಬೆಂಬಲ ಯಾವಾಗಲೂ ಇರುತ್ತದೆ ಎಂದರು.

ಬೀದರ ದಕ್ಷಿಣ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರು ಮಾತನಾಡಿ, ಮಾಜಿ ರಾಷ್ಟ್ರಪತಿ, ಶಿಕ್ಷಣತಜ್ಞರು ಆಗಿರುವ ಡಾ. ಸರ್ವಪಲ್ಲಿ ರಾಧಾಕೃಷ್ಣ ಅವರ ಜನ್ಮದಿನವನ್ನು ಶಿಕ್ಷಕರ ದಿನಾಚರಣೆ ಎಂದು ಆಚಾರಿಸಲಾಗುತ್ತಿದೆ. ತಮ್ಮ ಮೊದಲ ಗುರು ಆಗಿರುವ ತಮ್ಮ ತಾಯಿ ಕೂಡ ಶಿಕ್ಷಕಿ ಆಗಿದ್ದರು. ಅವರ ಆಶೀರ್ವಾದಿಂದ ತಾವು ಜನಸೇವೆಯಲ್ಲಿ ತೊಡಗಿರುವುದಾಗಿ ತಿಳಿಸಿದರು. ರಾಷ್ಟ್ರ ನಿರ್ಮಾಣದಲ್ಲಿ ಹಾಗೂ ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ. ಶಿಕ್ಷಕರು ಪಾಠ ಮಾಡುವಾಗ ಮೊಬೈಲ್ ಬಳಕೆ ಮಾಡಬಾರದು ಮತ್ತು ವಿದ್ಯಾರ್ಥಿಗಳು ಕೂಡ ಮೊಬೈಲ್ ಬಳಕೆಯಿಂದ ದೂರ ಇರಬೇಕು. ಶಿಕ್ಷಕರ ಹಾಗೂ ಅಡುಗೆ ಸಿಬ್ಬಂದಿಯವರ ಸಮಸ್ಯೆ ಬಗೆಹರಿಸಲು ತಿಂಗಳಿಗೊಮ್ಮೆ ಸಭೆ ಕರೆಯಬೇಕು ಹಾಗೂ 10 ನೇ ತರಗತಿಯ ಫಲಿತಾಂಶ ಕಳೆದ ವರ್ಷಕ್ಕಿಂತ ಹೆಚ್ಚಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಯಲಹಂಕದ ಸ್ವಾಮಿಗಳಾದ ಅಭಯಂತ ಸ್ವಾಮಿಗಳು ವಿಶೇಷ ಉಪನ್ಯಾಸವನ್ನು ನೀಡಿದರು.

ಇದೇ ಸಂದರ್ಭದಲ್ಲಿ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ಸರ್ಕಾರದ ವತಿಯಿಂದ ಲ್ಯಾಪ್ ಟಾಪ್‌ಗಳನ್ನು ನೀಡಲಾಯಿತು ಹಾಗೂ ಶಿಕ್ಷಕರಿಗೆ ಸನ್ಮಾನ ಮಾಡಲಾಯಿತು .

ಈ ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹಚ್. ಜಿ. ಸುರೇಶ್, ಬೀದರ ತಾಲೂಕು ಪಂಚಾಯತ್ ಇಓ ಮಾಣಿಕರಾವ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ಮದರಖಾನ ಅಲಿಖಾನ್ ಪಠಾಣ. ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಂಗಮೇಶ ಚೀದ್ರಿ ಸೇರಿದಂತೆ ಇತರೆ ಅಧಿಕಾರಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ; ಆರೋಪಿ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಅಫ ಜಲಪುರ,ಸೆ.9-ಆರು ವರ್ಷದ ಮಾತು ಬಾರದ ಬಾಲಕಿ ಮೇಲೆ ಯುವಕನೊಬ್ಬ ಲೈಂಗಿಕ ದೌರ್ಜನ್ಯವೆಸಗಿರುವ ಘಟನೆ ದೇವಲಗಾಣಗಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಖಾಜಪ್ಪ ಕೋಳಕೂರ (18) ಎಂಬಾತನೇ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದು, ಆತನನ್ನು ಪೊಲೀಸರು ಬಂಧಿಸಿದ್ದಾರೆ.

ರವಿವಾರ ಮಧ್ಯಾಹ್ನ 2:30 ಕ್ಕೆ ಆರೋಪಿ ಖಾಜಪ್ಪ, ಬಾಲಕಿಯನ್ನು ಆಕೆಯ ತಂದೆಗೆ ಸೇರಿದ ಜಮೀನಿಗೆ ಕರೆದೊಯ್ದು ಲೈಂಗಿಕ ದೌರ್ಜನ್ಯವೆಸಗಿದ್ದಾನೆ ಎನ್ನಲಾಗಿದ್ದು, ಈ ಕುರಿತು ಬಾಲಕಿಯ ತಾಯಿ ದೇವಲ ಗಾಣಗಾಪೂರ ಪೊ?ಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸ್ಥಳಕ್ಕೆ ಡಿವೈಎಸ್ಪಿ ತಮ್ಮರಾಯ ಪಾಟೀಲ, ಸಿಪಿಐ ಚನ್ನಯ ಹಿರೇಮಠ, ಪಿಎಸ್‌ಐ ಸಂಗೀತಾ ಸಿಂಧೆ ಭೇಟಿ ನೀಡಿದ್ದಾರೆ.

ಅತ್ಯಾಚಾರ ಆರೋಪಿಯನ್ನು ಬಂಧಿಸಲಾಗಿದ್ದು, ಸಂತ್ರಸ್ತೆಯನ್ನು ಕಲಬುರಗಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ದಸರಾ ಮತ್ತು ದೀಪಾವಳಿ ಹಬ್ಬದಂಗವಾಗಿ ವಿಶೇಷ ರೈಲುಗಳ ಸಂಚಾರ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.09-ಮುಂಬರುವ ದಸರಾ ಹಾಗೂ ದೀಪಾವಳಿ ಹಬ್ಬ-2025ರ ಸಂದರ್ಭದಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸೋಲಾಪುರ ವಿಭಾಗದಿಂದ ಕೇಂದ್ರ ರೈಲ್ವೆ ಇಲಾಖೆಯು ವಿಶೇಷ ರೈಲುಗಳ ವ್ಯವಸ್ಥೆ ಮಾಡಿದೆ ಎಂದು ಕೇಂದ್ರ ರೈಲ್ವೆಯ ಸೋಲಾಪುರ ವಿಭಾಗದ ಸಾರ್ವಜನಿಕ ಸಂಪರ್ಕ ವಿಭಾಗದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೌಂಡ್-ಕಲಬುರಗಿ ರೈಲು: ವಾರದಲ್ಲಿ 5 ದಿನಗಳು ಕಾಯ್ದಿರಿಸದ ವಿಶೇಷ (ರೈಲು ಸಂಖ್ಯೆ 01421) ಸೆಪ್ಟೆಂಬರ್ 26 ರಿಂದ ಡಿಸೆಂಬರ್ 1 ರವರೆಗೆ ಪ್ರತಿ ಸೋಮವಾರ, ಮಂಗಳವಾರ,ಬುಧವಾರ,ಶುಕ್ರವಾರ ಮತ್ತು ಶನಿವಾರ ಬೆಳಿಗ್ಗೆ 5 ಗಂ-ಟೆಗೆ ದೌಂಡ್ ನಿಂದ ಹೊರಟು ಅದೇ ದಿನ ಬೆಳಿಗ್ಗೆ 11.20 ಗಂಟೆಗೆ ಕಲಬುರಗಿಗೆ ಆಗಮಿಸಲಿದೆ. ಅದೇ ರೀತಿ (ರೈಲು ಸಂಖ್ಯೆ 01422) ಸೆಪ್ಟೆಂಬರ್ 26 ರಿಂದ ಡಿಸೆಂಬರ್ 1 ರವರೆಗೆ ಪ್ರತಿ ಸೋಮವಾರ, ಮಂಗಳವಾರ,ಬುಧವಾರ,ಶುಕ್ರವಾರ ಮತ್ತು ಶನಿವಾರ ಕಲಬುರಗಿಯಿಂದ ಸಂಜೆ 16.10 ಗಂಟೆಗೆ ಹೊರಟು ಅದೇ ದಿನ ರಾತ್ರಿ 22.20 ಗಂಟೆಗೆ ದೌಂಡ್‌ಗೆ ತಲುಪಲಿದೆ. ಈ ರೈಲು ಭಿಗ್ವಾನ್, ಪರೆವಾಡಿ, ಜೆಯೂರ್, ಕೆಮ್, ಕುರ್ದುವಾಡಿ, ಮಾಧಾ, ಮೊಹೋಲ್, ಸೋಲಾಪುರ, ಟಿಕೇಕರ್‌ವಾಡಿ, ಹೋಟಗಿ, ಅಕ್ಕಲಕೋಟ ರಸ್ತೆ, ಬೊರೋತಿ, ದುಧನಿ ಮತ್ತು ಗಾಣಗಾಪುರಗಳಲ್ಲಿ ಮಾರ್ಗವಾಗಿ ಸಂಚರಿಸಲಿವೆ.

ದೌಂಡ್ - ಕಲಬುರಗಿ ಕಾಯ್ದಿರಿಸದ ವಾರದ ದ್ವಿ-ವಿಶೇಷ ರೈಲು: (ರೈಲು ಸಂಖ್ಯೆ 01425) ಈ ವಿಶೇಷ ರೈಲು ಸೆಪ್ಟೆಂಬರ್ 25 ರಿಂದ ನವೆಂಬರ್ 30 ರವರೆಗೆ ಪ್ರತಿ ಗುರುವಾರ ಮತ್ತು ಭಾನುವಾರ ದೌಂಡ್‌ದಿಂದ ಬೆಳಿಗ್ಗೆ 5 ಗಂಟೆಗೆ ಹೊರಟು ಅದೇ ದಿನ ಬೆಳಿಗ್ಗೆ 11.20 ಗಂಟೆಗೆ ಕಲಬುರಗಿಗೆ ಆಗಮಿಸಲಿದೆ. ಅದೇ ರೀತಿ (ರೈಲು ಸಂಖ್ಯೆ 01426) ಸೆಪ್ಟೆಂಬರ್ 25 ರಿಂದ ನವೆಂಬರ್ 30 ರವರೆಗೆ ಪ್ರತಿ ಗುರುವಾರ ಮತ್ತು ಭಾನುವಾರಗಳಂದು ಕಲಬುರಗಿಯಿಂದ ರಾತ್ರಿ 20.30 ಕ್ಕೆ ಹೊರಟು ಮರುದಿನ 02.30 ಕ್ಕೆ ದೌಂಡ್ ತಲುಪಲಿದೆ. ಈ ರೈಲು ಭಿಗ್ವಾನ್, ಪರೇವಾಡಿ, ಜೆಯೂರ್, ಕೆಮ್, ಕುರ್ದುವಾಡಿ, ಮಾಧಾ, ಮೊಹೋಲ್, ಸೋಲಾಪುರ, ಟಿಕೆಕರ್ವಾಡಿ, ಹೊಟ್ಗಿ, ಅಕ್ಕಲಕೋಟ ರಸ್ತೆ, ಬೊರೊಟಿ, ದುಧಾನಿ ಮತ್ತು ಗಾಣಗಾಪುರ ಮಾರ್ಗವಾಗಿ ನಿಲುಗಡೆಯಾಗಲಿದೆ.

ಲಾತೂರ್-ಹಡಪ್ಸರ್ ವಿಶೇಷ ರೈಲು: ರೈಲು ಸಂಖ್ಯೆ 01429 ವಿಶೇಷ ರೈಲುಗಳು ಪ್ರತಿ ಸೋಮವಾರ, ಮಂಗಳವಾರ, ಬುಧವಾರ ಮತ್ತು ಶುಕ್ರವಾರಗಳಂದು ಸೆಪ್ಟೆಂಬರ್ 26 ರಿಂದ ನವೆಂಬರ್ 28 ರವರೆಗೆ ಲಾತೂರ್‌ದಿಂದ ಬೆಳಿಗ್ಗೆ 09.30 ಕ್ಕೆ ಹೊರಟು ಅದೇ ದಿನ ಮಧ್ಯಾಹ್ನ 3.30 ಕ್ಕೆ ಹಡಪ್ಸರ್ ತಲುಪಲಿದೆ. ಅದೇ ರೀತಿ ರೈಲು ಸಂಖ್ಯೆ 01430 ವಿಶೇಷ ರೈಲು ಇದೇ ಸೆಪ್ಟೆಂಬರ್ 26 ರಿಂದ ನವೆಂಬರ್ 28 ರವರೆಗೆ ಪ್ರತಿ ಸೋಮವಾರ, ಮಂಗಳವಾರ, ಬುಧವಾರ ಮತ್ತು ಶುಕ್ರವಾರಗಳಂದು ಹಡಪ್ಸರ್‌ದಿಂದ ಸಂಜೆ 4.05 ಕ್ಕೆ ಹೊರಟು ಅದೇ ದಿನ ರಾತ್ರಿ 21.20 ಕ್ಕೆ ಲಾತೂರ್‌ಗೆ ತಲುಪಲಿದೆ. ಈ ರೈಲು ಹರಾಂಗುಲ್, ಮುರುದ್, ಧರಶಿವ್, ಬಾರ್ಸಿ ಟೌನ್, ಕುರ್ದುವಾಡಿ, ಜೆಯೂರ್ ಮತ್ತು ದೌಂಡ್‌ದಲ್ಲಿ ಮಾರ್ಗಗಳ ಮೂಲಕ ಸಂಚರಿಸಲಿದೆ.

ಎಲ್.ಟಿ.ಟಿ. (LTT) ಮುಂಬೈ-ಲಾತೂರ್ ಸಾಪ್ತಾಹಿಕ ವಿಶೇಷ ರೈಲು: (ರೈಲು ಸಂಖ್ಯೆ 01007) ಸೆಪ್ಟೆಂಬರ್ 28 ರಿಂದ ನವೆಂಬರ್ 30 ರವರೆಗೆ ಪ್ರತಿ ಭಾನುವಾರದಂದು ಎಲ್‌ಟಿಟಿ ಮುಂಬೈನಿಂದ ಬೆಳಿಗ್ಗೆ 00.55 ಕ್ಕೆ ಹೊರಟು ಅದೇ ದಿನ ಮಧ್ಯಾಹ್ನ 13.30 ಕ್ಕೆ ಲಾತೂರ್ ತಲುಪಲಿದೆ. ಅದೇ ರೀತಿ ಸಾಪ್ತಾಹಿಕ (ವಿಶೇಷ ರೈಲು ಸಂಖ್ಯೆ 01008) ಸೆಪ್ಟೆಂಬರ್ 28 ರಿಂದ ನವೆಂಬರ್ 30 ರವರೆಗೆ ಪ್ರತಿ ಭಾನುವಾರ ಲಾತೂರ್‌ನಿಂದ ಸಂಜೆ 4ಕ್ಕೆ ಹೊರಟು ಮರುದಿನ ಬೆಳಿಗ್ಗೆ 04.50 ಕ್ಕೆ ಎಲ್‌ಟಿಟಿ ಮುಂಬೈಗೆ ತಲುಪಲಿದೆ. ಈ ರೈಲು ಥಾಣೆ, ಕಲ್ಯಾಣ್, ಲೋನಾವಾಲ, ಪುಣೆ, ದೌಂಡ್, ಕುರ್ದುವಾಡಿ ಮತ್ತು ಧಾರಾಶಿವ್‌ಗಳಲ್ಲಿ ನಿಲುಗಡೆಯಾಗಲಿದೆ.

ವಿಶೇಷ ಶುಲ್ಕದ ಮೇಲೆ ವಿಶೇಷ ರೈಲುಗಳಿಗೆ ಕಾಯ್ದಿರಿಸುವಿಕೆಗಳು ಕುರಿತು ತಿತಿತಿ.ಎಡಿಥಿಣಥಿ.ಥಿಠಿ.ಎಟಿ ವೆಬ್‌ಸೈಟ್‌ನ್ನು, ಕಾಯ್ದಿರಿಸದ ಬೋಗಿಗಳಿಗೆ ಬುಕಿಂಗ್‌ನ್ನು ನಿಲ್ದಾಣಗಳಲ್ಲಿನ ಬುಕಿಂಗ್ ಕೌಂಟರ್ ಹಾಗೂ ಯು.ಟಿ.ಎಸ್. (UTS) ಅಪ್ಲಿಕೇಶನ್ ಮೂಲಕವೂ ಮಾಡಬಹುದಾಗಿದೆ.

ಈ ವಿಶೇಷ ರೈಲುಗಳ ನಿಲುಗಡೆಗಳ ಕುರಿತು www.enquiry.indian-rail.gov.inಗೆ ಭೇಟಿ ನೀಡಿ ಅಥವಾ ಎನ್.ಟಿ.ಇ.ಎಸ್. (NTES) ಅಪ್ಲಿಕೇಶನ್ ಡೌನ್ಲೋಡ್ ಮಾಡಿಕೊಳ್ಳಬೇಕು. ಅನಾನುಕೂಲತೆಯನ್ನು ತಪ್ಪಿಸಲು ಪ್ರಯಾಣಿಕರು ಟಿಕೇಟ್‌ದೊಂದಿಗೆ ಪ್ರಯಾಣಿಸಬೇಕೆಂದು ರೈಲ್ವೆ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ವಿವಿಧ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಜನರ ಸಮಸ್ಯೆ ಆಲಿಸಿದ ಸಚಿವ ರಹೀಂ ಖಾನ್

ಮಲ್ಲಮ್ಮ ನುಡಿ ವಾರ್ತೆ

ಬೀದರ, ಸೆ.09 : ವಿವಿಧ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ಆಲಿಸಿದರು.



ಅವರು ಇಂದು ಬೀದರ ತಾಲ್ಲೂಕಿನ ಮಾಲೇಗಾಂವ, ಕಪಲಾಪೂರ(ಜೆ), ಜಾಂಪಾಡ ಸೇರಿದಂತೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ನಂತರ ಮಾತನಾಡಿದ ಇವರು, ಭಾರೀ ಮಳೆಯಿಂದಾಗಿ ರೈತರ ಹೊಲಗಳಲ್ಲಿ ಬೆಳೆಯಲಾದ ಹೆಸರು, ಉದ್ದು ಸೋಯಾಬೀನ್, ತೊಗರೆ, ಸಂಪೂರ್ಣವಾಗಿ ನಾಶವಾಗಿವೆ ಮತ್ತು ವಿವಿಧ ಸ್ಥಳಗಳಲ್ಲಿ ಅನೇಕ ಮನೆಗಳು, ರಸ್ತೆ, ಸೇತುವೆ ಕುಸಿದಿವೆ.

ಪ್ರತಿಯೊಂದು ವಿಪತ್ತು ಮತ್ತು ಹಾನಿಯ ವರದಿ ಮಾಡಲು ಹಾಗೂ ರೈತರಿಗೆ ಸಕಾಲದಲ್ಲಿ ಪರಿಹಾರ ನೀಡಲು ಅಂತರ ಇಲಾಖಾ ಸಮೀಕ್ಷೆಯನ್ನು ಈಗಾಗಲೇ ಅಧಿಕಾರಿಗಳಿಗೆ ಕೈಗೊಂಡಿದ್ದಾರೆ ಎಂದರು. ಮುಖ್ಯಮಂತ್ರಿಗಳಿಗೆ ಕ್ಷೇತ್ರದ ಪರಿಸ್ಥಿತಿ ಬಗ್ಗೆ ತಿಳಿಸಲಾಗಿದೆ ಮತ್ತು ಹೆಚ್ಚಿನ ಪರಿಹಾರಕ್ಕೆ ಮನವಿ ಮಾಡಲಾಗಿದ್ದು, ಪ್ರತಿ ಹೆಕ್ಟೇರ್ ಗೆ 50 ಸಾವಿರ ರೂಪಾಯಿ ನೀಡಬೇಕು ಎಂದು ಸಿ.ಎಂ ಬಳಿ ಮನವಿ ಮಾಡಲಾಗಿದೆ, ಅದಕ್ಕೆ ಅವರು 20 ಸಾವಿರ ನೀಡುವುದಾಗಿ ಭರವಸೆ ನೀಡಿದ್ದಾರೆ ಹಾಗೂ ಮುಖ್ಯಮಂತ್ರಿಗಳು ಶಾಸಕರ ಕ್ಷೇತ್ರ

ಅಭಿವೃದ್ಧಿಗಾಗಿ 50 ಕೋಟಿ ರೂಪಾಯಿ ಅನುದಾನ ನೀಡಿದ್ದಾ-ರೆ. ಈ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗುವುದು ಹಾಗೂ ಮಾಲೇಗಾಂವ

ಸೇತುವೆಯನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಬೀದರ ಸಹಾಯಕ ಆಯುಕ್ತ ಮೊಹಮದ್ ಶಕೀಲ್, ಬೀದರ ತಹಸಿಲ್ದಾರ್ ಗ್ರೇಡ್-2 ಜಿಯಾವುದ್ದಿನ್, ತಾಲೂಕು ಪಂಚಾಯತ್ ಇಓ ಮಾಣಿಕರಾವ ಪಾಟೀಲ, ಕೃಷಿ ಇಲಾಖೆ ಅಧಿಕಾರಿ ಆರತಿ ಪಾಟೀಲ, ಪಿ.ಡಬ್ಲ್ಯೂ .ಡಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಭಗವಂತ ಸಿಂಗ್, ತೋಟಗಾರಿಕೆ, ಕಂದಾಯ ಇಲಾಖೆ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಸರಕಾರದ ವಿವಿಧ ಯೋಜನೆಯ ಅಕ್ಕಿ ಜಪ್ತಿ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ/ಗುರುಮಠಕಲ್:ಸೆ.9: ಪಟ್ಟಣದ ಹೊರವಲಯ ಚಂಡರೀಕಿ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಇಂಡಸ್ಟ್ರೀಸ್ ಮತ್ತು ಶ್ರೀ ಲಕ್ಷ್ಮೀ ಬಾಲಾಜಿ ರೈಸ್ ಇಂಡಸ್ಟ್ರೀಸ್ ನಲ್ಲಿ ದಿನಾಂಕ

05.09.2025 ತಡರಾತ್ರಿಯಿಂದ 08.09.2025 ಇಂದು ಸಾಯಂಕಾಲದವರೆಗೆ ನಡೆದ ಕಾರ್ಯಚರಣೆಯಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಇಂಡಸ್ಟ್ರೀಸ್ ಮತ್ತು ಶ್ರೀ ಲಕ್ಷ್ಮೀ ಬಾಲಾಜಿ ರೈಸ್ ಇಂಡಸ್ಟ್ರೀಸ್ ಗಳಲ್ಲಿ ಒಟ್ಟು 4108.90 ಕ್ವಿಂಟಲ್ ವಿವಿಧ ಲಾಟಗಳ ಅಕ್ಕಿ ವಶಪಡಿಸಿಕೊಂಡಿದ್ದು ಅದರ ಒಟ್ಟು ಮೌಲ್ಯ 01,17,92,394.20/- ರೂ ಆಗಿರುವದಾಗಿ ಅನೀಲ್ ಕುಮಾರ ಧವಳಗಿ ಉಪನಿರ್ದೇಶಕರು ಆ.ನಾ.ಸಾ ಮತ್ತು ಗ್ರಾವ್ಯ. ಇಲಾಖೆ ಯಾದಗಿರ ಪತ್ರಿಕೆಗಳಿಗೆ ಮಾಹಿತಿ ನೀಡಿದ್ದಾರೆ.




ಶಾಂತಗೌಡ ಬಿರದಾರ ತಹಸೀಲ್ದಾರರು, ಸಾಯಿಬಣ್ಣ ಆಹಾರ ನಿರೀಕ್ಷಕರು, ವೀರಣ್ಣ ಎಸ್. ದೊಡ್ಡಮನಿ ಪಿ.ಐ, ದಿನೇಶ್ ಪಿಎಸ್‌ಐ, ಸರಕಾರದ ವಿವಿಧ ಯೋಜನೆಗಳ ಅಕ್ಕಿಯನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ತಂದು ಶೇಖರಣೆ ಮಾಡಿ ಇದೆ ಅಕ್ಕಿಯನ್ನು ಪಾಲೀಶ್ ಮಾಡಿ ವಿವಿಧ ಬ್ರಾಂಡಗಳ ಹೆಸರಿನಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದು ದಾಳಿ ಮಾಡಿ ಜಪ್ತಿ ಮಾಡಲಾಗಿದೆ. ಈ ಎರಡು ರೈಸ್ ಮಿಲ್ ಮಾಲೀಕರಾದ ನರೇಂದ್ರ ರಾಥೋಡ್ ಮತ್ತು ಅಯ್ಯಪ್ಪ ರಾಥೋಡ್ ರವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದು ಕೊಳ್ಳಲಾಗುವದು ಎಂದು ತಿಳಿಸಿದ್ದಾರೆ.

ಅಕ್ಕಿ ಸೇರಿದಂತೆ ಅಶೋಕ ಲೆಲ್ಯಾಂಡ್ ಲಾರಿ ನಂ. ಕೆಎ-39-ಎ-0227 ಅಂದಾಜು 25.00,000/- ಮತ್ತು

ಭಾರತ್ ಬೆಂಜ್ ಲಾರಿ ನಂಬರ ಕೆಎ-33-ಎ-5950 ಅಂದಾಜು 20.00.000/- ರೂ ವಾಹನ ವಶಕ್ಕೆ ಪಡೆಯಲಾಗಿದೆ. ಸರಕಾರದ ವಿವಿಧ ಯೋಜನೆಯ ಅಕ್ಕಿ, **Dynasty d** ಚೀಲಗಳಲ್ಲಿ ತುಂಬಿರುವ ಅಕ್ಕಿ, DaraDuoblestar ಲೇಬಲನಲ್ಲಿ ತುಂಬಿರುವ ಅಕ್ಕಿ

ನುಚ್ಚು ಅಕ್ಕಿ, ಅಕ್ಕಿ ಮಿಶ್ರಿತ ಜೋಳ, ಅಕ್ಕಿ ಪೌಡರ ಹಿಟ್ಟು,

Volga rice d ತುಂಬಿರುವ ಅಕ್ಕಿ, Volga biriyani rice ಲೇಬಲನಲ್ಲಿ ತುಂಬಿರುವ ಅಕ್ಕಿ,

Indian white rice 5% broken,

cording ವಶಕ್ಕೆಪಡೆಯಲಾಗಿದೆ

# ಮಹಿಳೆಯರಿಗೆ ವಿವಾಹ ಸರಾಸರಿ ವಯಸ್ಸು 22.9 ವರ್ಷ

ನವದೆಹಲಿ,ಸೆ.9:ರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರಿಗೆ ಪರಿಣಾಮಕಾರಿ ವಿವಾಹದ ಸರಾಸರಿ ವಯಸ್ಸು 22.9 ವರ್ಷಗಳು ಎಂದು ಸ್ಯಾಂಪಲ್ ರಿಜಿಸ್ಟೇಷನ್ ಸಿಸ್ಟಮ್ (ಎಸ್‌ಆರ್ ಎಸ್) ಅಂಕಿಅಂಶಗಳ 2023ರ ವರದಿ ಬಹಿರಂಗಪಡಿಸಿದೆ.

ಇದು 2022 ರಲ್ಲಿದ್ದ 22.7ಕ್ಕಿಂತ ಸ್ವಲ್ಪ ಅಧಿಕವಾಗಿದೆ. ಹೆಚ್ಚಿನ ರಾಜ್ಯಗಳಲ್ಲಿ ಬಹುತೇಕ ಹುಡುಗಿಯರು 18 ವರ್ಷ ವಯಸ್ಸಿನ ನಂತರ ಮದುವೆಯಾಗುತ್ತಿದ್ದಾರೆ ಎಂದು ವರದಿ ಹೇಳಿದೆ. ಆದಾಗ್ಯೂ, ಪಶ್ಚಿಮ ಬಂಗಾಳ, ಜಾರ್ಖಂಡ್ ಮತ್ತು ಛತ್ತೀಸ್ ಗಢದಂತಹ ರಾಜ್ಯಗಳಲ್ಲಿ, ಹೆಚ್ಚಿನ ಸಂಖ್ಯೆಯ ಮಹಿಳೆಯರು 18 ವರ್ಷ ವಯಸ್ಸನ್ನು ತಲುಪುವ ಮೊದಲೇ ಮದುವೆಯಾಗುವುದನ್ನು ಮುಂದುವರಿಸಿದ್ದಾರೆ. ಅಲ್ಲದೆ, ಪಶ್ಚಿಮ ಬಂಗಾಳದಲ್ಲಿ 21.3 ವರ್ಷದಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ 26.3 ವರ್ಷಗಳವರೆಗೆ ರಾಜ್ಯಗಳಾದ್ಯಂತ ಪರಿಣಾಮಕಾರಿ ವಿವಾಹದ ಸರಾಸರಿ ವಯಸ್ಸಿನಲ್ಲಿ ವ್ಯತ್ಯಾಸಗಳಿವೆ.

2019ರಿಂದ 2023 ರವರೆಗಿನ ಐದು ವರ್ಷಗಳ ದತ್ತಾಂಶವನ್ನು ಗಮನಿಸಿದರೆ, ಮಹಿಳೆಯರಿಗೆ ಪರಿಣಾಮಕಾರಿ ವಿವಾಹದ ಸರಾಸರಿ ವಯಸ್ಸು 2021ರಲ್ಲಿ 22.5 ವರ್ಷವಿದ್ದರೆ, 2020ರಲ್ಲಿ 22.7 ಮತ್ತು 2019 ರಲ್ಲಿ 22.1 ಆಗಿತ್ತು ಎಂದು ಪ್ರತಿಬಿಂಬಿಸುತ್ತದೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಮದುವೆಯ ಸರಾಸರಿ ವಯಸ್ಸು ಹಲವು ವರ್ಷಗಳಲ್ಲಿ ಸ್ಥಿರವಾದ ಏರಿಕೆಯನ್ನು ತೋರಿಸಿದ್ದರೂ ಗ್ರಾಮೀಣ-ನಗರ ಅಸಮಾನತೆಯು ಗಮನಾರ್ಹವಾಗಿ ಉಳಿದಿದೆ. 2023ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸರಾಸರಿ ವಯಸ್ಸು 22.4 ವರ್ಷಗಳಾದರೆ ನಗರ ಪ್ರದೇಶಗಳಲ್ಲಿ 24.3 ವರ್ಷಗಳಾಗಿವೆ. ಈ ಅಂತರವನ್ನು ಭಾರತದಾದ್ಯಂತ ನಿರಂತರವಾಗಿ ಗಮನಿಸಲಾಗುತ್ತಿದೆ ಎಂದು ವರದಿ ಹೇಳಿದೆ. 2022ರಲ್ಲಿ ಗ್ರಾಮೀಣ ಪ್ರದೇಶಗಳಿಗೆ ಸರಾಸರಿ ವಯಸ್ಸು 22.2 ವರ್ಷಗಳು ಮತ್ತು ನಗರ ಪ್ರದೇಶಗಳಿಗೆ 23.9 ವರ್ಷಗಳಾಗಿವೆ.

1990ರಿಂದ ಎಸ್‌ಆರ್ ಎಸ್ ಅರ್ಧ-ವಾರ್ಷಿಕ ಸಮೀಕ್ಷೆಯ ಪ್ರತಿ ಆರು ತಿಂಗಳ ಉಲ್ಲೇಖ ಅವಧಿಯಲ್ಲಿ ಪರಿಣಾಮಕಾರಿ ವಿವಾಹಕ್ಕೆ ಪ್ರವೇಶಿಸಿದ ಮಹಿಳೆಯರ ಸಂಖ್ಯೆಯ ದತ್ತಾಂಶವನ್ನು ಸಂಗ್ರಹಿಸಲಾಗುತ್ತಿದೆ. ಪರಿಣಾಮಕಾರಿ ವಿವಾಹದ ಸರಾಸರಿ ವಯಸ್ಸನ್ನು ಈ ಮಾಹಿತಿಯ ಆಧಾರದ ಮೇಲೆ ಅಂದಾಜಿಸಲಾಗಿದೆ.

ರಾಷ್ಟ್ರಮಟ್ಟದಲ್ಲಿ, ಶೇ. 2.1ರಷ್ಟು ಮಹಿಳೆಯರು 18 ವರ್ಷಕ್ಕಿಂತ ಮುಂಚೆಯೇ ಮದುವೆಯಾಗುತ್ತಿದ್ದರೆ. ಶೇ. 25ರಷ್ಟು 18 ರಿಂದ 20 ವರ್ಷ ವಯಸ್ಸಿನ ನಡುವೆ ಮದುವೆಯಾಗುತ್ತಿದ್ದಾರೆ. ಶೇ.72.9 ರಷ್ಟು 21 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನಲ್ಲಿ ಮದುವೆಯಾಗುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ, ಅನುಗುಣವಾದ ಶೇಕಡಾವಾರು ಅನುಕ್ರಮವಾಗಿ ಶೇ.2.5, ಶೇ.28.1 ಮತ್ತು ಶೇ.69.4 ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಕ್ರಮವಾಗಿ ಶೇ.1.2, ಶೇ.17 ಮತ್ತು ಶೇ.81.8 ರಷ್ಟಿದೆ.

ದೊಡ್ಡ ರಾಜ್ಯಗಳು /ಕೇಂದ್ರಾಡಳಿತ ಪ್ರದೇಶಗಳಲ್ಲಿ, 18 ವರ್ಷಕ್ಕಿಂತ ಮೊದಲು ಮದುವೆಯಾಗುವ ಮಹಿಳೆಯರ ಪ್ರಮಾಣವು ಪಶ್ಚಿಮ ಬಂಗಾಳದಲ್ಲಿ (ಶೇ.6.3) ಮತ್ತು ಕೇರಳದಲ್ಲಿ (ಶೇ.0.1) ಅತಿ ಕಡಿಮೆ ಪ್ರಮಾಣ ಕಂಡು ಬಂದಿದೆ.

# ಗುರುಮಠಕಲ್ ಕ್ಷೇತ್ರಾಭಿವೃದ್ಧಿಯೇ ನನ್ನ ಸಾಧನೆ

ಯಾದಗಿರಿ : ಸೆ.9:ಕಳೆದ ಒಂದು ದಶಕದಿಂದ ಗುರುಮಠಕಲ್ ಅಭಿವೃದ್ಧಿಯ ಪಥ ಆರಂಭವಾಗಿದೆ. ಗುರುಮಠಕಲ್‌ನಲ್ಲಿ ಪ್ರಜಾಸೌಧ ನಿರ್ಮಾಣದಂತಹ ಹತ್ತು ಹಲವು ಅಭಿವೃದ್ಧಿ ಕಾರ್ಯಗಳು ವೇಗಗೊಂಡಿವೆ. ಸ್ವತಹಃ ಹಲವು ನಾಯಕರು ಸ್ವಯಂ ಆಗಿ ಗುರುಮಠಕಲ್ ಅಭಿವೃದ್ಧಿ ಹೊಂದುತ್ತಿದೆ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ ಎಂದು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಹೇಳಿದರು. ಗುರುಮಠಕಲ್ ಪಟ್ಟಣದಲ್ಲಿ ಕಂದಾಯ ಇಲಾಖೆ ವತಿಯಿಂದ ಗುರುಮಠಕಲ್ ತಾಲೂಕು ಪ್ರಜಾಸೌಧ ಅಡಿಗಲ್ಲು ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು. ಕ್ಷೇತ್ರದ ಅಭಿವೃದ್ಧಿಯ ಪಥ ಆರಂಭವಾಗಿದೆ, ನಮ್ ತಂದೆಯವ ಕಾಲದಲ್ಲಿ 230 ಕೋಟಿ ವೆಚ್ಚದಲ್ಲಿ ಕೆರೆ ತುಂಬುವ ಯೋಜನೆಗಳು ಅಭಿವೃದ್ಧಿ ಕಂಡವು, ಇದರ ಜೊತೆಗೆ ಕ್ಷೇತ್ರದಲ್ಲಿ ರೈತರಿಗಾಗಿ ಜೆಸ್ಕಾಂ, ನೀರಾವರಿ ಯೋಜನೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಲಾಯಿತು. ಇನ್ನೂ ನನಗೆ ಅವಕಾಶ ನೀಡಿದ ನಿಮಗೆ ಶ್ರೇಯಸ್ಸು ತರುವ ಕೆಲಸ ನಾನು ಮಾಡುತ್ತಿದ್ದೇನೆ ಎಂದು ಹೇಳಿದರು. ನನ್ನನಂಬಿ ಆಯ್ಕೆಮಾಡಿದ ನೀವು ಗುರುಮಠಕಲ್ ಕ್ಷೇತ್ರದವರು ಎಂದು ಎದೆ ತಟ್ಟಿ ಹೇಳಿಕೊಳ್ಳುವಂತೆ



ಮಾಡುತ್ತಿದ್ದೇನೆ. ಗುರುಮಠಕಲ್ ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಮೂರ್ತಿ ಅನಾವರಣ, ಪ್ರಜಾಸೌಧ ನಿರ್ಮಾಣ, ಕ್ಷೇತ್ರದ ಎಲ್ಲಾ ಹಳ್ಳಿಗಳಿಗೆ ರಸ್ತೆ, ಶಾಲೆ, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯಗಳಿಗೆ ಹೆಚ್ಚಿನ ಒತ್ತು ನೀಡಿ ಅಭಿವೃದ್ಧಿ ಪಡಿಸುತ್ತಿದ್ದೇನೆ ಇದನ್ನು ಕಂಡ ಹಿರಿಯರಾದ ಬಾಬುರಾವ್ ಚಿಂಚನಸೂರ ಅವರೇ ಸ್ವತಹಃ ಈಗ ಕ್ಷೇತ್ರ ಅಭಿವೃದ್ಧಿಯಾಗುತ್ತಿದೆ ಎಂದು ವೇದಿಕೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ಹೇಳಿರುವುದು ನಮಗೆ ಸಂತೋಷದ ಸಂಗತಿಯಾಗಿದೆ ಎಂದು ಹೇಳಿದರು. ಅದೇ ರೀತಿ ಗುರುಮಠಕಲ್ ಬೈಪಾಸ್ ರಸ್ತೆ,. ಗುರುಮಠಕಲ್ ಪಟ್ಟಣದಲ್ಲಿ 100 ಬೆಡ್ ಆಸ್ಪತ್ರೆಗಾಗಿ ಹಲವು ಬಾರಿ ನಾನು ಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ, ಹಿರಿಯರಾರ ಬಾಬುರಾವ್ ಅವರು ಸಹಕಾರ ನೀಡಿ ತಮ್ಮ ಮಂತ್ರಿಗಳಲ್ಲಿ ಈ ಕೆಲಸವಾಗುವಂತೆ ಸಹಕಾರ ಮಾಡಬೇಕು ಎಂದು ಕೇಳಿಕೊಂಡರು. ಪ್ರಜಾಸೌಧ ನಿರ್ಮಾಣಕ್ಕೆ ಕೇವಲ ಅಡಿಗಲ್ಲು ನೆರವೇರಿಸಿಲ್ಲ ಇದರ ಗುಣಮಟ್ಟದ ಕಾಮಗಾರಿ ನಡೆಯುವುದನ್ನು ಗಮನಿಸಲಾಗುವುದು, ಶೀಘ್ರದಲ್ಲಿಯೇ ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಗುಣಮಟ್ಟದ ಕಾಮಗಾರಿಯೊಂದಿಗೆ ಕಟ್ಟಡವನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಾಬುರಾವ್ ಚಿಂಚನಸೂರ ಮಾತನಾಡಿ, ರಾಜ್ಯದಲ್ಲಿ ನಮ್ಮದೇ ಸರ್ಕಾರ ಇದೇ ನಮ್ಮವೇ ಮುಖ್ಯಮಂತ್ರಿ ಇದ್ದಾರೆ ಜನರ ಏನಾದರೂ ಸಮಸ್ಯೆ ಇದ್ದರೆ ತಕ್ಷಣ ನೆರವೇಸ್ತಾರೆ, ಕ್ಷೇತ್ರದಲ್ಲಿ ಅಭಿವೃದ್ಧಿಯಾಗುತ್ತಿದೆ ನಾನು ಶಾಸಕರಿಗೆ ಸಹಕಾರ ನೀಡುತ್ತೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ತಹಸೀಲ್ದಾರ ಶಾಂತಗೌಡ ಬಿರೆದಾರ, ಪುರಸಭೆ ಅಧ್ಯಕ್ಷರಾದ ಜಯಶ್ರೀ ಪಾಟೀಲ್, ಪುರಸಭೆ ಪೌರಾಯುಕ್ತರಾದ ಭಾರತಿ ದಂಡೋತಿ, ಗೃಹ ಮಂಡಳಿ ಇಇ ವಿಜಯಕುಮಾರ ಭಂಡಾ-ರೆ, ಎಇಇ ಗಿರೀಶ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಸುಭಾಶ್ಚಂದ್ರ ಕಟಕಟಿ, ಬಸವಂತರಾಯಗೌಢ ಸೈದಾಪೂರ, ವಿಶ್ವನಾಥರಡ್ಡಿ ಗೊಂದೆಡಗಿ, ಬಸಣ್ಣ ದೇವರಹಳ್ಳಿ, ಕೃಷ್ಣಾರಡ್ಡಿ ಪೊಲೀಸ್ ಪಾಟೀಲ್, ದೊಡ್ಡಣಗೌಡ ಅರಕೇರಾ, ಈಶ್ವರ ನಾಯಕ, ನರಸಪ್ಪ ಕವಡೆ, ತಾಯಪ್ಪ ಬದ್ದೇಪಲ್ಲಿ, ಜಯೇಂದ್ರ ಎಂಪಾಡ, ಪರಮರಡ್ಡಿ ಕಂದಕೂರ, ಲಕ್ಷ ??ಣ ನಾಯಕ ಕೂಡ್ಲೂರು, ರವಿ ಪಾಟೀಲ ಹತ್ತಿಕುಣಿ, ಸಾಹೇಬಗೌಡ ಗೌಡಗೇರಾ ಇದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.